
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಗೋಕಾಕ್ ಮಿಲ್ಲಿನಲ್ಲಿ ಗೂಂಡಾಗಿರಿ


ಆಗಸ್ಟ್ 3, 2011 ಪುಟ 20 ರೂ. 14/-

ೋಕಾಯುಕ್ತ ವರದಿ



ಕಳ್ಳ!


ಭಗವದ್ಗೀತೆ ಭಾನಗಡಿ



ಸುಳ್ಳು ಹೇಳಿದ ಖದೀಮ ಕಾಗೇರಿ




ಬುಡಬುಡಿಕೆ



ಭಗವದ್ಗೀತೆ ಬೇಡ ಸಂವಿಧಾನ ಬೇಕು

ಡೆಯರ್ ಫ್ಯಾಮಿಲಿ: ಚಿರತೆ ಸಾಕುವ ಮೂರ್ಖರು

ಲಮಂಗಲ



ಬೆತ್ತನಗೆರೆ ಸೀನನ ಬಂದೂಕು ಪಡೆ



ಶಿವಣ್ಣನ ಸುತ್ತ ರೌಡಿಗಳ ಹುತ್ತ

ನೋ ಕಾಮೆಂಟ್ಸ್

"ಕಳೆದ ನಾಲ್ಕು ತಿಂಗಳ ಹಿಂದೆ ಮಾನ್ಸಾಂಟೋ ಎಂಬ ಕುಲಾಂತರಿ ಕಂಪನಿ ಬಿಜಾಪುರದ ಸಿಂಧಗಿ ತಾಲ್ಲೂಕಿನಲ್ಲಿ ಅಕ್ರಮವಾಗಿ ಕ್ಷೇತ್ರ ಪ್ರಯೋಗ ಮಾಡಿದೆ. ಗ್ರೀನ್‌ಪೀಸ್ ಸಂಸ್ಥೆ ಇದನ್ನು ಪತ್ತೆಹಚ್ಚಿ ಈಚೆಗೆ ದೆಹಲಿಯಲ್ಲಿ ನಡೆದ ಕುಲಾಂತರಿ ಅನುಮೋದನಾ ಸಮಿತಿ ಸಭೆಯಲ್ಲಿ ಈ ಸಂಬಂಧ ವರದಿ ನೀಡಿದೆ. ಸರ್ಕಾರದ ಅನುಮತಿ ಪಡೆಯದೆ ಕಂಪನಿಗಳು ರಾಜ್ಯಕ್ಕೆ ಪ್ರವೇಶಿಸುತ್ತಿರುವುದು ಅನುಮಾನಕ್ಕೆ ಎಡೆಮಾಡಿದೆ."

-ಕೋಡಿಹಳ್ಳಿ ಚಂದ್ರಶೇಖರ್

"ನಾನು ಮುಖ್ಯಮಂತ್ರಿಯಾದಾಗಲೂ ಭ್ರಷ್ಟಾಚಾರ ನಡೆದಿತ್ತು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅದನ್ನು ನಡೆಸಿದವರು ಸಂಪುಟದಲ್ಲಿದ್ದ ಬಿಜೆಪಿ ಸಚಿವರು. ಹೀಗಾಗಿ ಅಂದು ಭ್ರಷ್ಟಾಚಾರ ನಡೆಸಿದವರು ಇಂದು ನಿರೀಕ್ಷಣಾ ಜಾಮೀನು ಪಡೆಯುತ್ತಿದ್ದಾರೆ."

- ಎಚ್.ಡಿ. ಕುಮಾರಸ್ವಾಮಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ನಾವು ಬಲವಂತವಾಗಿ ರೈತರಿಂದ ಉಳುವ ಭೂಮಿಯನ್ನು ವಶಪಡಿಸಿಕೊಳ್ಳುವುದನ್ನು ವಿರೋಧಿಸುತ್ತೇವೆ. ರೈತರಿಂದ ಭೂಮಿ ಕಿತ್ತು ಕಾರ್ಪೊರೇಟ್ ಕೈಗಾರಿಕೋದ್ಯಮಿಗಳಿಗೆ ನೀಡುವ ಸಲುವಾಗಿಯೇ ಭೂಸ್ವಾಧೀನ ಕಾಯಿದೆ -1894 ಅನ್ನು ಬಳಸಿಕೊಳ್ಳುತ್ತಿದೆ. ಇದು ಬ್ರಿಟಿಷರ ಕಾಲದ ಕಾಯಿದೆಯಾಗಿದ್ದು ಅದನ್ನು ಸರ್ಕಾರ ಬಳಸಲೇಬಾರದು. ಆದರೆ ನಂದಿಗ್ರಾಮ ಮತ್ತು ಸಿಂಗೂರಿನ ಸಂದರ್ಭ ಬೇರೆ. ರೈತರಿಂದ ಪ್ರತಿರೋಧ ಬಂದ ಮೇಲೆ ನಾವು ಒಂದು ಇಂಚೂ ಭೂಮಿಯನ್ನು ವಶಪಡಿಸಿಕೊಳ್ಳಲಿಲ್ಲ. ರೈತರೇ ಖುದ್ದು ಸಂತೋಷದಿಂದ ಭೂಮಿ ಕೊಡುವುದನ್ನು ಹೊರತುಪಡಿಸಿ ರೈತರಿಂದ ಭೂಮಿ ವಶಪಡಿಸಿಕೊಳ್ಳುವುದನ್ನು ನಾವು ನಿಲ್ಲಿಸಿದ್ದೇವೆ."

-ಪ್ರಕಾಶ್ ಕಾರಟ್, ಸಿಪಿಎಂ ಕಾರ್ಯದರ್ಶಿ

"ಮೆಟ್ರೋ ಕಾಮಗಾರಿಗೆ ಎತ್ತಂಗಡಿ ಮಾಡಿರುವ ಮಲ್ಲೇಶ್ವರ ಬಳಿಯ ಮಂತ್ರಿಮಾಲ್ ಪಕ್ಕದಲ್ಲಿನ ಜೈಭೀಮಾ ನಗರದ ಕೊಳಗೇರಿ ನಿವಾಸಿಗಳಿಗೆ ತಲಾ 14 ಲಕ್ಷ ರುಪಾಯಿ ಮೌಲ್ಯದ 'ಡಬಲ್ ಬೆಡ್ ರೂಂ' ಮನೆ ನೀಡಲಾಗುವುದು ಎಂದು ಬಿಬಿಎಂಪಿ ಹೈಕೋರ್ಟ್‌ಗೆ ತಿಳಿಸಿದೆ."

-ಪತ್ರಿಕಾ ವರದಿ

"ಅಕ್ರಮ ಗಣಿಗಾರಿಕೆ ಕುರಿತ ತನಿಖಾ ವರದಿಯ ಸಂಬಂಧ ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ವಿ. ಧನಂಜಯಕುಮಾರ್ ಸರ್ಕಾರಕ್ಕೆ ಮುಜುಗರ ಹುಟ್ಟಿಸುವಂಥಾ ಸಂಗತಿಗಳನ್ನು ವರದಿಯಲ್ಲಿ ಸೇರಿಸುವುದು ಬೇಡ ಎಂದು ಪ್ರಭಾವ ಬೀರಲು ಪ್ರಯತ್ನಿಸಿದ್ದು ನಿಜ. ಆ ಹೇಳಿಕೆಗೆ ನಾನು ಈಗಲೂ ಬದ್ಧ."

- ಸಂತೋಷ್ ಹೆಗ್ಡೆ

"ಮಾರಿಷಸ್ ಕೇವಲ ಪ್ರವಾಸಿಗರ ತಾಣವಲ್ಲ, ಅದು ತೆರಿಗೆಗಳ್ಳರ ಸ್ವರ್ಗವೂ ಹೌದು. ಸ್ವಿಸ್ ಬ್ಯಾಂಕಿನಂತೆ ಮಾರಿಷಸ್ ಸಹ ಕಪ್ಪು ಹಣಕ್ಕೆ ತಿಜೋರಿಯಿದ್ದಂತೆ. ಹೀಗಾಗಿ ಯಡಿಯೂರಪ್ಪನವರು ಸಂಸಾರ ಸಮೇತ ಮಾರಿಷಸ್‌ಗೆ ಪ್ರವಾಸ ಹೋಗಿರುವುದು ಸಂದೇಹ ಮೂಡಿಸಿದೆ."

- ಪತ್ರಿಕಾ ವರದಿ

"ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಕಡಿಮೆ ಇದೆ ಎಂಬ ಕಾರಣಕ್ಕಾಗಿ ಅದನ್ನು ಮಾಫಿ ಮಾಡಲು ನಾನು ಬೆಂಬಲ ನೀಡುವುದಿಲ್ಲ, ನ್ಯಾಯಾಂಗದ ಬಗ್ಗೆ ಕೂಡಾ ಅನುಮಾನ ವ್ಯಕ್ತವಾಗುತ್ತಿದೆ. ಒಮ್ಮೆ ನ್ಯಾಯಾಂಗ ಆಸೆಗೆ ಬಲಿಯಾದರೆ ಅದರ ವರ್ಚಸ್ಸು ಕುಂದುತ್ತದೆ. ಈ ಹಿನ್ನೆಲೆಯಲ್ಲಿ ನ್ಯಾಯಮೂರ್ತಿಗಳನ್ನು ಕೂಡಾ ಲೋಕಪಾಲ್ ಮಸೂದೆ ವ್ಯಾಪ್ತಿಗೆ ಒಳಪಡಿಸಬೇಕು."


- ಸಂತೋಷ್ ಹೆಗ್ಡೆ

ಲೋಕಪಾಲ ಬೇಕಿರುವುದು ಕಾರ್ಪೊರೇಟ್ ಪಾಲನೆಗೆ!

"ನಾವು ಐತಿಹಾಸಿಕ ಕಾಲಘಟ್ಟದಲ್ಲಿದ್ದೇವೆ. ಮುನ್ನೂರು ವರ್ಷಗಳ ನಂತರ ಇಡೀ ಪ್ರಪಂಚ ಈಗ ಭಾರತದ ಕಡೆ ನೋಡುತ್ತಿದೆ. ಭಾರತವು ನಿಜಕ್ಕೂ ವಿಶ್ವಕ್ಕೆ ಮೌಲಿಕ ಕೊಡುಗೆ ನೀಡಬಹುದೆಂದು ನಂಬಲಾಗುತ್ತಿದೆ. ಯುವಜನರಿಗೆ ತಮ್ಮ ದೇಶದ ಬಗ್ಗೆ ಸಂಪೂರ್ಣ ವಿಶ್ವಾಸ ಬಂದಿದೆ. ವಿಶ್ವದಾದ್ಯಂತ ಹೂಡಿಕೆದಾರರು ಭಾರತವನ್ನು ಒಂದು ಉತ್ತಮ ವಾಣಿಜ್ಯ ಸಹಯೋಗಿಯೆಂಬಂತೆ ನೋಡುತ್ತಿದೆ. ಇಂಥಾ ಅವಕಾಶ ಅಪರೂಪಕ್ಕೊಮ್ಮೆ ಬರುತ್ತದೆ. ಆದ್ದರಿಂದ ವಿಶ್ವದ ಹೂಡಿಕೆದಾರರ ವಿಶ್ವಾಸವನ್ನು ಇಮ್ಮಡಿಸಿಕೊಳ್ಳಲು ಲೋಕಪಾಲ ಮಸೂದೆ ಬರುವುದು ಅತ್ಯಗತ್ಯ."

- ಎನ್.ಆರ್. ನಾರಾಯಣಮೂರ್ತಿ

ಭಗವದ್ಗೀತೆಯೋ? ಸಂವಿಧಾನವೋ?




ಶಿವಸುಂದರ್

ಚಾರ್ವಾಕ

ಪೋಸ್ಕೋ ಇಂದ ಭಗವದ್ಗೀತೆಗೆ?

ಗದಗ ಜಿಲ್ಲೆಯಲ್ಲಿ ಪೋಸ್ಕೋ ಕಂಪನಿಗೆ ರೈತರ ಜಮೀನು ಸ್ವಾಹಾ ಮಾಡಲು ಮುಂದಾಗಿ ರೈತರಿಂದ, ಮಠಾಧಿಪತಿಗಳಿಂದ ಛೀಮಾರಿ ಹಾಕಿಸಿಕೊಳ್ಳುತ್ತಿದ್ದ ಸರ್ಕಾರ ಭಗವದ್ಗೀತೆ ಕಲಿಯದವರು ದೇಶ ಬಿಟ್ಟು ತೊಲಗಿ ಎಂದು (ಅ)ಶಿಕ್ಷಣ ಮಂತ್ರಿ ಕಾಗೇರಿ ಮೂಲಕ ಹೇಳಿಸಿ ಜನರ ಗಮನವನ್ನು ಭೂಮಿಯಂಥ ಜೀವನದ ಪ್ರಶ್ನೆಯಿಂದ ಬೇರೆಡೆ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಬಿಜೆಪಿ ಸರ್ಕಾರ ಪೋಸ್ಕೋಗಾಗಿ ಜಮೀನನ್ನು ವಶಪಡಿಸಿಕೊಳ್ಳುವುದರಿಂದ ತಾತ್ಕಾಲಿಕವಾಗಿ ಹಿಂದೆ ಸರಿದಿದ್ದರೂ ಬಿಜೆಪಿ ರೈತ ವಿರೋಧಿಯೆಂಬ ಮತ್ತು ಜಮೀನು ಕಳೆದುಕೊಳ್ಳುತ್ತಿದ್ದ ಬಹುಪಾಲು ರೈತರು ಲಿಂಗಾಯುತರೂ ಆಗಿರುವುದರಿಂದ ಲಿಂಗಾಯುತ ವಿರೋಧಿಯೆಂಬ ಹಣೆಪಟ್ಟಿ ಹತ್ತೇ ಬಿಟ್ಟಿತು. ಅದರಲ್ಲೂ ಆ ಭಾಗದ 70ಕ್ಕೂ ಹೆಚ್ಚು ಮಠಾಧೀಶರು ಭೂಸ್ವಾಧೀನದ ವಿರುದ್ಧ ಫರ್ಮಾನು ಹೊರಡಿಸಿರುವುದೂ ಮಠಗಳ ಬೆಂಬಲವನ್ನೇ ಆಧರಿಸಿರುವ ಬಿಜೆಪಿ ಸರ್ಕಾರಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಅವರ ರಾಷ್ಟ್ರೀಯ ಕಾರ್ಯಕಾರಿಣಿಯೂ ಮುಂದಿನ ವರ್ಷದಲ್ಲೇ ಚುನಾವಣೆಗೆ ಹೋಗಲು ಸಲಹೆ ಮಾಡಿರುವುದರಿಂದ ಈ ರೈತ-ಲಿಂಗಾಯತ ವಿರೋಧಿ ಇಮೇಜನ್ನು ಕಳೆದುಕೊಳ್ಳಲೇಬೇಕಾದ ತುರ್ತು ಸಹ ಏರ್ಪಟ್ಟಿತ್ತು. ಈ ಹಿನ್ನೆಲೆಯಲ್ಲಿ ಭಗವದ್ಗೀತಾ ಅಭಿಯಾನದ ಸುತ್ತ ಕೋಲಾರದಿಂದ ಶುರುವಾಗಿದ್ದ ವಿವಾದವನ್ನು ಬಳಸಿಕೊಂಡು ಉಗ್ರ ಹಿಂದೂತ್ವ ಪೋಸನ್ನು ಕೊಡಲು ಬಿಜೆಪಿ ಸರ್ಕಾರ ತೀರ್ಮಾನಿಸಿದಂತೆ ಕಾಣುತ್ತದೆ. ಹೀಗಾಗಿಯೇ ಹುಬ್ಬಳ್ಳಿ ಕಾರ್ಯಕಾರಿಣಿಯ ಮೊದಲು ಕಾಗೇರಿ ವಿವಾದದ ಬಗ್ಗೆ ತೆಗೆದುಕೊಂಡ ನಿಲುವಿಗೂ ಹುಬ್ಬಳ್ಳಿ ಕಾರ್ಯಕಾರಿಣಿಯ ಸ್ವಲ್ಪ ಮುಂಚಿನಿಂದಲೂ ತೆಗೆದುಕೊಂಡ ನಿಲುವಿಗೂ ಅಜಗಜಾಂತರ ವ್ಯತ್ಯಾಸ ಕಾಣುತ್ತದೆ. ಕೋಲಾರದಲ್ಲಿ ಜನರ ಹೋರಾಟಕ್ಕೆ ಮಣಿದು ಪ್ರಾರಂಭದಲ್ಲಿ ಭಗವದ್ಗೀತಾ ಅಭಿಯಾನದ ಸುತ್ತೋಲೆಯನ್ನು ಹಿಂತೆಗೆದುಕೊಂಡ ಸರ್ಕಾರ ಎರಡೇ ದಿನಗಳ ಅಂತರದಲ್ಲಿ ಶತಾಯಗತಾಯ ಅಭಿಯಾನವನ್ನು ಮಾಡಿಯೇ ತೀರುತ್ತದೆಂದೂ, ಭಗವದ್ಗೀತೆ ಒಪ್ಪದವರು ದೇಶ ಬಿಟ್ಟು ತೊಲಗಬೇಕೆಂದೂ ಉಗ್ರ ಹೇಳಿಕೆ ನೀಡಿ ಅಭಿಯಾನದ ಬೆಂಬಲಕ್ಕೆ ನಿಂತುಬಿಟ್ಟಿತು. ಹುಬ್ಬಳ್ಳಿಯ ಕಾರ್ಯಕಾರಿಣಿಯಲ್ಲಿ ಮಾತಾಡುತ್ತಾ ಬಿಜೆಪಿ ಅಧ್ಯಕ್ಷ ಈಶ್ವರಪ್ಪ ತಾವು ಕೇವಲ ರಸ್ತೆ, ನೀರು ಒದಗಿಸಲು ಅಧಿಕಾರಕ್ಕೆ ಬಂದಿಲ್ಲವೆಂದೂ, ಗೋಹತ್ಯಾ ನಿಷೇಧ, ಭಗವದ್ಗೀತೆ ಬೋಧನೆ ಎಲ್ಲವೂ ತಮ್ಮ ಕಾರ್ಯಸೂಚಿಯಲ್ಲಿದೆಯೆಂದು ಹೇಳಿದ್ದರ ಹಿಂದೆ ಇದ್ದದ್ದೂ ಚುನಾವಣಾ ಸಿದ್ಧತೆಯ ಹಿನ್ನೆಲೆಯಲ್ಲಿ ತಾವು ಗಳಿಸಿಕೊಂಡಿರುವ ಭ್ರಷ್ಟಾಚಾರಿ ಮತ್ತು ರೈತ ವಿರೋಧಿ ಇಮೇಜನ್ನು ಕಳಚಿಕೊಂಡು ಹಿಂದೂ ಇಮೇಜನ್ನು ಮುಂದುಮಾಡುವ ಅಭಿಯಾನವೇ! ಭಗವದ್ಗೀತೆ ಅಭಿಯಾನದ ಬಗ್ಗೆ ಸರ್ಕಾರದ ನಿಲುವಿಗೂ ಚುನಾವಣಾ ಅಭಿಯಾನಕ್ಕೂ ಹೀಗೆ ನೇರ ಸಂಬಂಧವಿದೆ.



ಹಿಂದೂ ಧರ್ಮದ ಸರ್ಕಾರಿ ಪ್ರಚಾರ

ಉತ್ತರ ಕನ್ನಡದ ಸಿರ್ಸಿಯ ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಕೈಗೆತ್ತಿ ಕೊಂಡಿರುವ ಈ ಅಭಿಯಾನಕ್ಕೆ ಕರ್ನಾಟಕ ಸರ್ಕಾರ ಕಾನೂನಿನ ಸಿಕ್ಕಿಗೆ ಸಿಲುಕಿಕೊಳ್ಳದಂತೆ ಈವರೆಗೆ ಎಚ್ಚರವಹಿಸುತ್ತಾ ಎಲ್ಲಾ ಬೆಂಬಲ ವನ್ನೂ ಕೊಡುತ್ತಾಬಂದಿತ್ತು. "ಮೌಲ್ಯ ಶಿಕ್ಷಣ, ರಾಷ್ಟ್ರೀಯ ಭಾವೈಕ್ಯ ಸಾಮಾಜಿಕ ಸಾಮರಸ್ಯವನ್ನು ಹೆಚ್ಚಿಸುವ" ಹೆಸರಿನಲ್ಲಿ ಕರ್ನಾಟಕ ರಾಜ್ಯಾದ್ಯಂತ "ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳ 5,6,7ನೇ ತರಗತಿಯ ವಿದ್ಯಾರ್ಥಿಗಳಿಗೆ ಗೀತೆಯ 14ನೇ ಅಧ್ಯಾಯವನ್ನು ಕಂಠಪಾಠ ಮಾಡಿಸುವುದು ಮತ್ತು ಎಲ್ಲಾ ಪ್ರೌಢಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ 15ನೇ ಅಧ್ಯಾಯವನ್ನು ಕಂಠಪಾಠ ಮಾಡಿಸುವುದು" ಈ ಕಾರ್ಯಕ್ರಮದ ಉದ್ದೇಶ.

ಈ ನಿಟ್ಟಿನಲ್ಲಿ 2009ರ ಅಕ್ಟೋಬರ್ 3ರಂದು ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯು ಸುತ್ತೋಲೆಯೊಂದನ್ನು ಹೊರಡಿಸಿ ಎಲ್ಲಾ ಜಿಲ್ಲಾ ಶಿಕ್ಷಣಾಧಿಕಾರಿಗಳಿಗೆ ಈ ಕಾರ್ಯಕ್ರಮಕ್ಕೆ "ಸಹಕರಿಸ" ಬೇಕೆಂದು ಸೂಚಿಸಲಾಗಿತ್ತು. ಎರಡು ವರ್ಷದ ಕೆಳಗೆ ಚಿತ್ರದುರ್ಗ, ದಾವಣಗೆರೆ, ದ.ಕನ್ನಡವನ್ನೂ ಒಳಗೊಂಡಂತೆ ಸೋಂದಾ ಸಂಸ್ಥಾನ ಪ್ರಾಯೋಜಿತ ಮತ್ತು ಸರ್ಕಾರೀ ಬೆಂಬಲಿತ ಭಗವದ್ಗೀತಾ ಅಭಿಯಾನವು ಪ್ರಾರಂಭವಾಗಿದೆ. ಸಾರ್ವಜನಿಕರ ಇತರ ಯಾವುದೇ ಕಾರ್ಯಕ್ರಮಕ್ಕೆ ಶಾಲಾ ಆವರಣವನ್ನು ಸಹ ಒದಗಿಸದೇ ಇದ್ದರೂ ವಿದ್ಯಾರ್ಥಿಗಳ ಭಗವದ್ಗೀತಾ ಕಂಠಪಾಠವು ಮಾತ್ರ ಸರ್ಕಾರಿ ಶಾಲಾ ಆವರಣದಲ್ಲೇ ಶಾಲಾ ಸಮಯವಾದ ನಂತರ ನಿರಾತಂಕವಾಗಿ ನಡೆಯುತ್ತಿದೆ. ಅಲ್ಲದೆ ಜಿಲ್ಲಾ ಶಿಕ್ಷಣಾಧಿಕಾರಿಗಳ ಮೌಖಿಕ ಆದೇಶದ ಮೇರೆಗೆ ಶಾಲೆಗೊಬ್ಬ ಅಧ್ಯಾಪಕರನ್ನು ಅಧಿಕೃತ ಗೈರುಹಾಜರಿಯಲ್ಲಿ ಸೋಂದಾ ಮಠದ ಶಾಖೆಗಳಿಗೆ ತರಬೇತಿ ಪಡೆಯಲು ಕಳಿಸಲಾಗುತ್ತಿದೆ!

ಇದಕ್ಕೆ ಬರಬೇಕಾದಷ್ಟು ಪ್ರತಿರೋಧ ಬಾರದಿದ್ದರಿಂದ ತಮ್ಮ ಹಿಂದೂತ್ವ ಅಜೆಂಡಾವನ್ನು ಇನ್ನಷ್ಟು ಗಟ್ಟಿಯಾಗಿ ಜಾರಿ ಮಾಡಲು ಸಿದ್ಧವಾದ ಬಿಜೆಪಿ ಸರ್ಕಾರ ಈ ಬಾರಿ ನೇರವಾಗಿಯೇ ಈ ಅಭಿಯಾನಕ್ಕೆ ಸಕಲ ಸರ್ಕಾರಿ ಸ್ಥಾನಮಾನವನ್ನೂ ನೀಡಲು ಪ್ರಾರಂಭಿಸಿದೆ. ಎಲ್ಲಾ ಜಿಲ್ಲಾ ಶಿಕ್ಷಣಾಧಿಕಾರಿಗಳಿಗೂ ಸುತ್ತೋಲೆ ಕಳಿಸಿರುವ ಸರ್ಕಾರ ಈ ಅಭಿಯಾನದ ತರಬೇತಿಗೆ ಅಧಿಕೃತವಾಗಿ "ಸರ್ಕಾರಿ ಕೆಲಸದ ನಿಮಿತ್ತ" ಹಾಜರಾಗುವಂತೆ ಸೂಚಿಸಿದೆ ಹಾಗೂ ಶಾಲಾ ಆವರಣದಲ್ಲಿ ಮತ್ತು ಶಾಲಾ ಸಮಯದಲ್ಲಿ ಶಾಲಾಮಕ್ಕಳಿಗೆ ಭಗವದ್ಗೀತೆ ಕಂಠಪಾಠ ಮಾಡಿಸಲು ಒಂದು ಗಂಟೆ ಎತ್ತಿಡಲು ಸೂಚಿಸಲಾಗಿದೆ. ಜೊತೆಗೆ ಅಂತಿಮವಾಗಿ ಶಾಲಾಮಕ್ಕಳೆಲ್ಲರನ್ನೂ ಸೇರಿಸಿ ನಡೆಸುವ ಭಗವದ್ಗೀತಾ ಜ್ಞಾನ ಅಭಿಯಾನಕ್ಕೆ ಜಿಲ್ಲಾಧಿಕಾರಿಗಳು ಸಕಲ ಸಹಕಾರವನ್ನು ನೀಡಲು ಸೂಚಿಸಲಾಗಿದೆ. ಹೀಗೆ ಸರ್ಕಾರಿ ಸ್ಥಳ ಮತ್ತು ಸಾರ್ವಜನಿಕ ಹಾಗು ಸೆಕ್ಯುಲಾರ್ ಸ್ಪೇಸ್‌ಗಳನ್ನು ಸಂಪೂರ್ಣವಾಗಿ ಏಕಪಕ್ಷೀಯವಾಗಿ ಹಿಂದೂ ಧರ್ಮ ಪ್ರಚಾರಕ್ಕೆ ದುರ್ಬಳಕೆ ಮಾಡಿಕೊಳ್ಳುವಷ್ಟು ಎದೆಗಾರಿಕೆ ಪಡೆದುಕೊಂಡಿದೆ. ಅದರ ಮುಂದುವರಿಕೆಯಾಗಿಯೇ ಭಗವದ್ಗೀತೆಯನ್ನು ಒಪ್ಪದವರು ದೇಶ ಬಿಟ್ಟು ತೊಲಗಲಿ ಎಂಬ ಕಾಗೇರಿಯವರ ಆದೇಶ ಕೂಡಾ!

ನೈತಿಕ ಶಿಕ್ಷಣದ ಹೆಸರಲ್ಲಿ ಹಿಂದೂತ್ವದ ಅಜೆಂಡಾ

ಕಾಗೇರಿಯವರ ಹೇಳಿಕೆ ಮತ್ತು ಆದೇಶ ಮೂಲಭೂತವಾಗಿ ಸಂವಿಧಾನದ ಎಲ್ಲಾ ಸೆಕ್ಯುಲಾರ್ ಆಶಯಗಳಿಗೂ ವಿರುದ್ಧವಾಗಿದೆ. ಭಗವದ್ಗೀತೆಯನ್ನು ಒಪ್ಪದಿರುವವರಿಗೂ ಮತ್ತು ಪೂಜಿಸದಿರುವವರಿಗೂ ಈ ದೇಶದಲ್ಲಿ ಸಮಾನ ಹಕ್ಕು ಮತ್ತು ಬಾಧ್ಯತೆಗಳನ್ನು ಈ ದೇಶದ ಸಂವಿಧಾನ ಒದಗಿಸುತ್ತದೆ. ಒಂದು ಧರ್ಮ ಮತ್ತು ನಂಬಿಕೆಯನ್ನು ಮಾತ್ರ ಪೋಷಿಸದಿರುವುದೇ ಈ ದೇಶದ ಸಂವಿಧಾನದ ಮೂಲ ಲಕ್ಷಣವೆಂದು ಸುಪ್ರೀಂಕೋರ್ಟಿನ ಪೂರ್ಣಪೀಠವೂ 1977ರಲ್ಲಿ ಮತ್ತು ಹಲವು ಬಾರಿ ಸ್ಪಷ್ಟವಾಗಿ ನುಡಿದಿದೆ. ಹೀಗಾಗಿ ಒಂದು ರಾಜ್ಯದ ಮಂತ್ರಿ ಸಂವಿಧಾನಕ್ಕೆ ಬದ್ಧವಾಗಿ ಆಡಳಿತ ನಡೆಸುತ್ತೇನೆಂದೂ; ರಾಗ, ದ್ವೇಷಗಳಿಗೆ ಹೊರತಾಗಿ ಜನತೆಯಲ್ಲಿ ಜಾತಿ, ಮತ, ಧರ್ಮಗಳನ್ನಾಧರಿಸಿ ಯಾವುದೇ ತಾರತಮ್ಯ ಮಾಡುವುದಿಲ್ಲವೆಂದೂ ಪ್ರಮಾಣ ಮಾಡಿದ ನಂತರ ಒಂದು ಗ್ರಂಥವನ್ನು ಒಪ್ಪುವವರು ಮಾತ್ರ ಈ ದೇಶದಲ್ಲಿರಲು ಅರ್ಹರೆಂದು, ಉಳಿದವರು ದೇಶ ಬಿಟ್ಟುಹೋಗಬೇಕೆಂದು ಆದೇಶಿಸುವುದು ಸಂವಿಧಾನ ವಿರೋಧಿ, ಪ್ರಜಾತಂತ್ರ ವಿರೋಧಿ ಮತ್ತು ಕಾನೂನುಬಾಹಿರ ಆಗಿರುತ್ತದೆ. ಹೀಗಾಗಿ ಕಾಗೇರಿಯವರನ್ನು ಈ ಹೇಳಿಕೆಯ ಕಾರಣಕ್ಕೆ ಕೂಡಲೇ ಮಂತ್ರಿಮಂಡಳದಿಂದ ಕೈಬಿಟ್ಟು ಕಾನೂನು ಕ್ರಮ ತೆಗೆದುಕೊಳ್ಳಲು ಜನರೆಲ್ಲರೂ ಆಗ್ರಹಿಸಬೇಕಿದೆ.

ಹಾಗೆ ನೋಡಿದರೆ ಮೌಲಿಕ ಶಿಕ್ಷಣದ ಹೆಸರಿನಲ್ಲಿ ಧಾರ್ಮಿಕ ಶಿಕ್ಷಣವನ್ನು ಹೇರುತ್ತಿರುವುದೂ ಮತ್ತು ಧಾರ್ಮಿಕ ಶಿಕ್ಷಣವನ್ನು ಹಿಂದೂ ಮತ ಪಠ್ಯಗಳಿಗೂ ಮತ್ತು ಹಿಂದೂ ಮತಸಾರವನ್ನು ಭಗವದ್ಗೀತೆಗೂ ಸಮೀಕರಿಸುವುದರಲ್ಲೇ ಅತ್ಯಂತ ಪ್ರಬಲ ಹಿಂದೂತ್ವದ ಹುನ್ನಾರವಿದೆ. ನೈತಿಕತೆಯೆಂದರೇ ಧಾರ್ಮಿಕತೆಯಲ್ಲ, ಧಾರ್ಮಿಕತೆಯೆಂದರೇ ಮತ ನಿಷ್ಠತೆಯಲ್ಲ, ಮತವೆಂದರೆ ಹಿಂದೂ ಮತವಲ್ಲ, ಹಿಂದೂ ಮತಸಾರವೆಂದರೆ ಭಗವದ್ಗೀತೆಯಲ್ಲಿ ಬೋಧಿಸಿರುವ ಶ್ರೇಣೀಕರಣ ಮತ್ತು ಮಾನವ ಜನ್ಮ ನಿರ್ವಿಣ್ಣತೆಯಲ್ಲ. ವಾಸ್ತವವಾಗಿ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಕಲಿಸಬೇಕಿರುವ ನೈತಿಕತೆಯೆಂದರೆ ಪರಸ್ಪರ ಗೌರವ, ಸಹಾನುಭೂತಿ, ಅನುಕಂಪ, ಮಾನವರೆಲ್ಲರೂ ಒಂದು ಎಂಬ ಭಾವನೆಗಳು.

ಭಾರತದ ಸಂವಿಧಾನದ 51-ಎ(ಹೆಚ್) ಕಲಮಿನಲ್ಲಿ "ಭಾರತದ ಎಲ್ಲಾ ನಾಗರಿಕರಲ್ಲೂ ವೈಜ್ಞಾನಿಕ ಮನೋಭಾವ, ಮಾನವತಾ ವಾದಗಳನ್ನು ಮತ್ತು ಪ್ರಶ್ನಿಸುವ ಹಾಗೂ ಸಮಾಜ ಸುಧಾರಣಾ ಮನೋಭಾವವನ್ನು ಉದ್ದೀಪಿಸುವುದು ಎಲ್ಲರ ಕರ್ತವ್ಯ"ವೆಂದು ಸ್ಪಷ್ಟಪಡಿಸಲಾಗಿದೆ. ಸರ್ಕಾರದ ಮೇಲೆ ಈ ಕರ್ತವ್ಯವನ್ನು ಈಡೇರಿಸುವ ಹೆಚ್ಚಿನ ಜವಾಬ್ದಾರಿ ಇದೆ. ಮಳೆ, ನೆರೆ, ಪ್ರವಾಹ, ಚುನಾವಣಾ ವಿಜಯ, ಸರ್ಕಾರದ ಅಸ್ಥಿರತೆ ಎಲ್ಲಕ್ಕೂ ಜ್ಯೋತಿಷಿಗಳ, ಮಠಮಂದಿರಗಳ ಮೊರೆ ಹೋಗುತ್ತಾ ಈಗಾಗಲೇ ಯಡಿಯೂರಪ್ಪ ಸರ್ಕಾರ ಮೌಢ್ಯಕ್ಕೆ ಮತ್ತು ಅದರ ಪ್ರತಿಪಾದಕರಿಗೆ ಅಧಿಕೃತ ಸ್ಥಾನಮಾನ ಕೊಟ್ಟು ಜನರಲ್ಲಿ ಅಂಧಶ್ರದ್ಧೆ ಹೆಚ್ಚಲೂ ಕಾರಣವಾಗಿದೆ. ಈಗ ಮೌಲ್ಯ ಶಿಕ್ಷಣದ ಹೆಸರಿನಲ್ಲಿ ಅವೈಜ್ಞಾನಿಕತೆ ಮತ್ತು ಮೌಢ್ಯಗಳು ನೇರವಾಗಿ ಶಿಕ್ಷಣಕ್ಷೇತ್ರವನ್ನು ಪ್ರವೇಶಿಸಲೂ ಕಾರಣವಾಗಿದೆ.

ಭಗವದ್ಗೀತೆ-ಆತ್ಮ ಪ್ರತ್ಯಯ ನಿರಾಕರಿಸುವ ಆಧ್ಯಾತ್ಮ

ಭಗವದ್ಗೀತೆಯೇ ಮೌಢ್ಯವೇ? ಅಥವಾ ಮನುಷ್ಯನ ಆಧ್ಯಾತ್ಮಿಕ ಉನ್ನತಿಗೆ ಪೂರಕವಾದ ಗ್ರಂಥವೋ? ಎಂಬುದು ಮತ್ತೊಂದು ದೊಡ್ಡ ಚರ್ಚೆಯೇ ಆದರೂ ಭಗವದ್ಗೀತೆಯನ್ನು ಇಂದು ಬಿಜೆಪಿ ಸರ್ಕಾರ ಯಾವುದಕ್ಕೆ ಬಳಸಿಕೊಳ್ಳುತ್ತಿದೆ ಎಂಬುದು ಎಲ್ಲಕ್ಕಿಂತ ಮುಖ್ಯವಾದ ಪ್ರಶ್ನೆಯಾಗಿದೆ. ಅದೇ ರೀತಿ ಭಗವದ್ಗೀತೆಗೆ ಹತ್ತು ಹಲವು ಭಾಷ್ಯವೂ ಸಾಧ್ಯ. ಆದರಲ್ಲೂ 14 ಮತ್ತು 15ನೇ ಅಧ್ಯಾಯವು ಭೌತಿಕ ಬದುಕಿನ ನಿಷ್ಫಲತೆಯನ್ನು ಸಾರುತ್ತದೆ. ಮನುಷ್ಯನಲ್ಲಿ ಸಾತ್ವಿಕ, ರಜಸ್ಸು ಮತ್ತು ತಾಮಸ ಗುಣಗಳು ಹೇಗೆ ಹುಟ್ಟುತ್ತವೆ ಮತ್ತು ಅದನ್ನು ಮೀರುವುದು ಹೇಗೆ ಎಂದು ಹೇಳುತ್ತದೆ. ಭಗವಂತನಲ್ಲಿ ನಂಬಿಕೆ ಇಡುವುದೇ ಅಂತಿಮ ಸಾಕ್ಷಾತ್ಕಾರವೆಂದು ಬೋಧಿಸುತ್ತದೆ. ಆದರೆ ಮಾಂಸಾಹಾರ ತಿಂದರೆ ರಜೋ ಮತ್ತು ತಾಮಸ ಗುಣ ಬರುತ್ತದೆ ಎಂದು ವ್ಯಾಖ್ಯಾನ ಮಾಡುವವರೇ ಇಂದು ಬಿಜೆಪಿ ಸರ್ಕಾರದ ಆಚಾರ್ಯ ಸ್ಥಾನದಲ್ಲಿದ್ದಾರೆ. ಹೀಗಿರುವಾಗ ಭಗವದ್ಗೀತಾ ಕಂಠಪಾಠವು ವಿದ್ಯಾರ್ಥಿಗಳಲ್ಲಿ ಭೌತಿಕ ಬದುಕಿನ ಬಗ್ಗೆ ನಿರಾಸಕ್ತಿ ಇತರ ಬದುಕಿನ ಪದ್ಧತಿಗಳ ಬಗೆಗೆ ಗೌರವದ ಬದಲಿಗೆ ಅನುಮಾನ ಮತ್ತು ತಿರಸ್ಕಾರಗಳನ್ನು ಬಿತ್ತುವುದಿಲ್ಲವೇ? ಇದು ಎಳೆಯ ಮಕ್ಕಳ ಮನೋಧರ್ಮದ ಮೇಲೆ ಯಾವ ರೀತಿಯ ಪ್ರಭಾವವನ್ನು ಬೀರುತ್ತದೆ?

ಇದು ಸರ್ಕಾರ ಮೌಲಿಕ ಮತ್ತು ನೈತಿಕ ಶಿಕ್ಷಣದ ಹೆಸರಿನಲ್ಲಿ ಮಾಡುತ್ತಿರುವ ಶಿಕ್ಷಣದ ಕೇಸರೀಕರಣವೇ ಆಗಿದೆ. ಮಕ್ಕಳ ಹಿತಾಸಕ್ತಿಯ ದೃಷ್ಟಿಯಿಂದ ಈ ಕೂಡಲೇ ಈ ಅಭಿಯಾನವನ್ನು ನಿಲ್ಲಿಸಬೇಕೆಂದು ಸರ್ಕಾರಕ್ಕೆ ಆಗ್ರಹಿಸಬೇಕಿದೆ.

....16

ಬುದ್ಧಿಮಾಂದ್ಯ ಮಗನ ಬಗ್ಗೆ ಶೌರಿ ಬರೆದದ್ದು...



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನಾನು 80ರ ದಶಕದಲ್ಲಿ ಪತ್ರಿಕೋದ್ಯಮವನ್ನು ಪ್ರವೇಶಿಸಿದಾಗ ಇಂಗ್ಲಿಷ್ ಪತ್ರಕರ್ತರಿಗೆ ಆಗ ಹೀರೋಗಳಾಗಿದ್ದವರು ಎಮ್.ಜೆ.ಅಕ್ಬರ್ ಮತ್ತು ಅರುಣ್ ಶೌರಿ. ಅಕ್ಬರ್ ದಿ ಟೆಲಿಗ್ರಾಫ್ ಪತ್ರಿಕೆಯ ಸಂಪಾದಕರಾಗಿದ್ದರು. ಶೌರಿ ಇಂಡಿಯನ್ ಎಕ್ಸ್‌ಪ್ರೆಸ್‌ನ ಸಂಪಾದಕರಾಗಿದ್ದರು. ಅದರಲ್ಲೂ ಶೌರಿ ಆಗಿನ ಮಹಾರಾಷ್ಟ್ರದ ಮುಖ್ಯಮಂತ್ರಿ ಅಂತುಲೆ ಮತ್ತು ಕರ್ನಾಟಕದ ಮುಖ್ಯಮಂತ್ರಿ ಗುಂಡೂರಾವ್ ಅವರ ಹಗರಣಗಳ ಕುರಿತು ಪುಟಗಟ್ಟಲೆ ಬರೆದು ಇಂಗ್ಲಿಷ್ ಪತ್ರಿಕೋದ್ಯಮದಲ್ಲಿ ಸಂಚಲನ ಮೂಡಿಸಿದ್ದರು.

ಅದ್ಯಾಕೋ ಒಂದು ದಿನ ಶೌರಿ ಅವರನ್ನು ಎಕ್ಸ್‌ಪ್ರೆಸ್‌ನಿಂದ ಒದ್ದೋಡಿಸಲಾಯಿತು. ಆಗ ಅವರು ದಿ ಟೈಮ್ಸ್ ಆಫ್ ಇಂಡಿಯಾ ಸೇರಿದರು. ಅದೇ ಹೊತ್ತಿಗೆ ಬೆಂಗಳೂರಿನ ಟೈಮ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ನಾನು ದೆಹಲಿ ಕಚೇರಿಗೆ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿದೆ. ಶೌರಿ ಅವರು ನನ್ನನ್ನು ದೆಹಲಿ ಆಫೀಸಿಗೆ ಕರೆಸಿಕೊಂಡರು. ನನ್ನ ಮನಸ್ಸಿನಲ್ಲಿ ಶೌರಿ ಅಂದರೆ 'ದೊಡ್ಡಗಂಟಲಿನ', 'ದೈತ್ಯಾಕಾರದ' ವ್ಯಕ್ತಿಯಂತೆ ಚಿತ್ರಿತವಾಗಿದ್ದರು. ದೆಹಲಿ ಆಫೀಸನ್ನು ಸೇರಿಕೊಂಡ ನಂತರ ಅವರನ್ನು ಭೇಟಿಯಾಗಲು ಹೋದೆ. ಆಗ ಅವರಿಗೆ ಪ್ರಾಣಬೆದರಿಕೆ ಇದ್ದಿದ್ದರಿಂದ ಅವರಿಗೆ ಪೊಲೀಸ್ ರಕ್ಷಣೆ ನೀಡಲಾಗಿತ್ತು. ಪೊಲೀಸರು ಶೌರಿ ಅವರ ಅನುಮತಿ ಪಡೆದ ನನ್ನನ್ನು ಅವರ ಕೊಠಡಿಗೆ ಕಳುಹಿಸಿದ್ದರು.



ಶೌರಿ ಅವರನ್ನು ಪ್ರಥಮ ಬಾರಿಗೆ ಭೇಟಿ ಆದಾಗ ನನಗೆ ಅಚ್ಚರಿ ಆಗಿತ್ತು. ಅವರು ನನ್ನ ಮನಸ್ಸಿನಲ್ಲಿದ್ದ ದೈತ್ಯಾಕಾರದ ವ್ಯಕ್ತಿ ಆಗಿರದೆ ಸಾಧಾರಣ ಮೈಕಟ್ಟಿನ ಮನುಷ್ಯನಂತಿದ್ದರು. ಅದಕ್ಕಿಂತಲೂ ಮುಖ್ಯವಾಗಿ ಅವರು 'ದೊಡ್ಡಗಂಟಲಿನ' ವ್ಯಕ್ತಿ ಆಗಿರದೆ ಮೃದು ದನಿಯ, ಅಪಾರ ತಿಳುವಳಿಕೆಯ ವ್ಯಕ್ತಿಯಾಗಿದ್ದರು. ಅವರು ಅಷ್ಟು ದೊಡ್ಡ ಸಂಪಾದಕರಾಗಿದ್ದರೂ ನನ್ನಂತಹ ಜೂನಿಯರ್ ರಿಪೋರ್ಟರ್‌ಅನ್ನು ತಮ್ಮ ಕೊಠಡಿಯಲ್ಲಿ ಕೂರಿಸಿಕೊಂಡು ನನಗೆ ವರದಿಗಾರರ ವಿಭಾಗ ಬೇಕೋ, ಸಬ್‌ಎಡಿಟರ್ ಹುದ್ದೆ ಬೇಕೋ ಎಂದು ವಿಚಾರಿಸಿ ದೆಹಲಿ ಅಫೀಸಿನಲ್ಲಿ ಖಾಲಿ ಇದ್ದ ಆದರೆ ನನ್ನ ಇಷ್ಟಕ್ಕೂ ಹೊಂದುವಂತಹ ವಿಭಾಗಕ್ಕೇ ನನ್ನನ್ನು ಕಳುಹಿಸಿದ್ದರು.

ಅಷ್ಟೊತ್ತಿಗಾಗಲೇ ಶೌರಿ ಅವರಿಗೆ ಒಬ್ಬ ಬುದ್ಧಿಮಾಂದ್ಯ ಮಗನಿದ್ದಾನೆಂದು ನನಗೆ ಗೊತ್ತಿದ್ದರಿಂದ ಅವರ ಈ ತಾಳ್ಮೆಗೆ ಅದೇ ಕಾರಣ ಇರಬಹುದೆಂದು ತರ್ಕಿಸಿದ್ದೆ. ನಾನು ದೆಹಲಿ ಆಫೀಸ್ ಸೇರಿದ ಹಲವು ವಾರಗಳ ನಂತರ ಶೌರಿ ಟೈಮ್ಸ್ ಆಫೀಸಿನಿಂದಲೂ ಹೊರನಡೆದರು. ಆನಂತರ ಅವರು ಬಿಜೆಪಿಯಂತಹ ಕೋಮುವಾದಿ ಪಕ್ಷವನ್ನು ಬೆಂಬಲಿಸಿದ್ದು, ವಾಜಪೇಯಿ ಅವರ ಸಂಪುಟದಲ್ಲಿ ಮಂತ್ರಿಯಾಗಿದ್ದು, ನರಹಂತಕ ನರೇಂದ್ರ ಮೋದಿ ಅಮಾಯಕರನ್ನು ಬಲಿತೆಗೆದುಕೊಂಡಾಗ ಸುಮ್ಮನಿದ್ದದ್ದು- ಇವೆಲ್ಲವೂ ಶೌರಿ ವಿರುದ್ಧ ಅಸಮಾಧಾನ ನನ್ನಲ್ಲಿ ಹೆಪ್ಪುಗಟ್ಟುವಂತೆ ಮಾಡಿದ್ದವು.

ಇತ್ತೀಚೆಗೆ ಶೌರಿ ಅವರು ಬರೆದಿರುವ ಪುಸ್ತಕವೊಂದನ್ನು ಓದಿದಾಗ - ಅವರು ಬಿಜೆಪಿಯನ್ನು ಬೆಂಬಲಿಸುವ ಬಗ್ಗೆ ನನ್ನ ಎಲ್ಲಾ ವಿಮರ್ಶೆಗಳನ್ನು ಇಟ್ಟುಕೊಂಡೇ - ಅವರ ಬಗ್ಗೆ ಇನ್ನೊಂದು ರೀತಿಯಲ್ಲಿ ಚಿಂತಿಸುವಂತೆ ಮಾಡಿತು. ಆ ಪುಸ್ತಕದ ಹೆಸರು **'Does He know a mother's heart - How Suffering Refutes Religions'**. (ಇಲ್ಲಿ **He** ಅಂದರೆ ಭಗವಂತ. ಆದ್ದರಿಂದ ಈ ಪುಸ್ತಕದ ಶೀರ್ಷಿಕೆಯನ್ನು 'ಭಗವಂತನಿಗೆ ತಾಯಿಯ ಹೃದಯ ಅರ್ಥವಾಗುತ್ತದೆಯೇ? - ನೋವು ಹೇಗೆ ಧರ್ಮಗಳನ್ನು ನಿರಾಕರಿಸುತ್ತದೆ' ಎಂದು ಅನುವಾದಿಸಬಹುದು.)

ಈ ಪುಸ್ತಕದಲ್ಲಿ ಶೌರಿ ತಮ್ಮ ಮಗ ಆದಿತ್ಯನ ದೈಹಿಕ ಅಸಹಾಯಕತೆಯ ಬಗ್ಗೆ, ಆತನ ಮುಕ್ತ ಹೃದಯದ ಬಗ್ಗೆ, ಆತನ ಚಿಕ್ಕಪುಟ್ಟ ಸಂತೋಷಗಳ ಬಗ್ಗೆ ಹೇಳಿಕೊಂಡಿದ್ದಾರೆ. ಹಾಗೆಯೇ ಶೌರಿ ಮತ್ತು ಅವರ ಪತ್ನಿ ಅನಿತಾ ತಮ್ಮ ಮಗನಿಗಾಗಿ ಪಟ್ಟಿರುವ ಕಷ್ಟ, ಆತನ ಚಿಕ್ಕಪುಟ್ಟ ಸಾಹಸಗಳಿಂದ ಕಂಡಿರುವ ಸಂತೋಷ ಮತ್ತು ಆತ ತಮ್ಮಿಬ್ಬರಿಗೆ ಬದುಕಿನ ಬಗ್ಗೆ ಕಲಿಸಿರುವ ಪಾಠಗಳ ಬಗ್ಗೆಯೂ ವಿವರಿಸಿದ್ದಾರೆ. ಇದನ್ನೆಲ್ಲ ಓದಿದಾಗ ಕಲ್ಲು ಹೃದಯದವರು ಮಾತ್ರ ಕರಗದೆ ಇರಬಹುದಷ್ಟೇ.

ಹೀಗೆ ತಮ್ಮ ಮಗನ ಬಗ್ಗೆ ಹೇಳುತ್ತಲೇ ಶೌರಿ ಧರ್ಮಗಳನ್ನು ಮತ್ತು ಅವು ಪ್ರತಿಪಾದಿಸುವ ತತ್ತ್ವಗಳನ್ನು ಪ್ರಶ್ನಿಸುತ್ತಾರೆ. ತನ್ನ ಮಗನಂತಹ ಮಕ್ಕಳು ಯಾವ ತಪ್ಪು ಮಾಡಿರದಿದ್ದರೂ ಅವರಿಗೆ ಭಗವಂತ ಯಾಕೆ ಇಂತಹ ಕಠೋರ ಶಿಕ್ಷೆ ಕೊಟ್ಟ? ನಿರಪರಾಧಿ ಬಾಲಕರಿಗೆ ಇಂತಹ ಬದುಕನ್ನು ವಿಧಿಸುವಾತ ಅದು ಹೇಗೆ ಭಗವಂತನಾಗಬಲ್ಲ? ಜನರ ನೋವಿಗೆ ವಿವಿಧ ಧರ್ಮಗಳು, ಗುರುಗಳು, ಬಾಬಾಗಳು, ಸ್ವಾಮೀಜಿಗಳು ಏನು ಕಾರಣ ಎಂದಿದ್ದಾರೆ? ಅದೆಲ್ಲ ಎಷ್ಟು ಸಮಂಜಸ? ಎಂದೆಲ್ಲ ಶೌರಿ ವಿವರವಾಗಿ ಈ ಪುಸ್ತಕದಲ್ಲಿ ಚರ್ಚಿಸಿದ್ದಾರೆ.

ಆದರೆ ಅದೆಲ್ಲದಕ್ಕೆ ಅಡಿಪಾಯ ಆಗಿರುವುದು ಅವರ ಮಗ ಆದಿತ್ಯನ ಕತೆ. ಈಗ ಆದಿತ್ಯನಿಗೆ 35 ವರ್ಷ ವಯಸ್ಸು. ಆದರೆ ಆತನಿಗೆ ಸ್ವತಂತ್ರವಾಗಿ ನಡೆಯುವುದಿರಲಿ, ನಿಂತುಕೊಳ್ಳುವುದಕ್ಕೂ ಬರುವುದಿಲ್ಲ. ಒಂದು ಕಣ್ಣಲ್ಲಿ ಮಾತ್ರ ಸ್ವಲ್ಪ ದೃಷ್ಟಿಶಕ್ತಿಯನ್ನು ಹೊಂದಿರುವ ಆದಿತ್ಯ ತನ್ನ ಎಡಗೈ ಮೇಲೆ ಒಂದಿಷ್ಟು ಹಿಡಿತವನ್ನು ಹೊಂದಿದ್ದಾನಷ್ಟೇ. ಆತ ಮಾತನಾಡುವುದೂ ಒಂದು ಅಕ್ಷರದ ನಂತರ ಮತ್ತೊಂದು ಅಕ್ಷರವನ್ನು. ಇಂತಹ ಆದಿತ್ಯನನ್ನು ಪ್ರತಿಕ್ಷಣ ಎಚ್ಚರದಿಂದ ನೋಡಿಕೊಳ್ಳಬೇಕು, ಆತನ ಪ್ರತಿಯೊಂದು ಅಗತ್ಯವನ್ನೂ ಪೂರೈಸಬೇಕು. ಹೀಗೆ ತನ್ನ ಅಸಹಾಯಕ ದೇಹದಲ್ಲಿ ಬಂಧಿಯಾಗಿರುವ ಆದಿತ್ಯ ತುಂಬಾ ಚುರುಕು. ಎಂದೂ ತನ್ನ ಸ್ಥಿತಿಯ ಬಗ್ಗೆ ವ್ಯಥೆಪಟ್ಟುಕೊಳ್ಳದ ಆದಿತ್ಯ ಚಿಕ್ಕಪುಟ್ಟದರಲ್ಲೂ ಸಂತೋಷ ಕಾಣುವ, ಗಹಗಹಿಸಿ ನಗುವ ಚಿಕ್ಕ ಬಾಲಕ.

ಗರ್ಭವಾಸ ಮುಗಿಯುವ ಮುನ್ನ ಅಮೆರಿಕದಲ್ಲಿ ಜನಿಸಿದ ಆದಿತ್ಯ ಈ ಭೂಮಿಯ ಮೇಲಿನ ತನ್ನ ಮೊದಲ ತಿಂಗಳನ್ನು ಕಳೆದದ್ದು ಇನ್‌ಕ್ಯುಬೇಟರ್‌ನಲ್ಲಿ. ಆದರೆ ಅದೇನೋ ಎಡವಟ್ಟಾಗಿ ಇನ್‌ಕ್ಯುಬೇಟರ್‌ಗೆ ಆಮ್ಲಜನಕ ಸರಿಯಾಗಿ ಸರಬರಾಜು ಆಗದಿದ್ದರಿಂದ ಈತನ ಮಿದುಳಿಗೆ ಲಕ್ವಾ ಹೊಡೆಯಿತು. ಪರಿಣಾಮವಾಗಿ ಆತ ತನ್ನ ದೇಹದ ಮೇಲೆ ಹಿಡಿತವಿರದ ಬುದ್ಧಿಮಾಂದ್ಯನಾದ.

ಆದರೆ ಈತ ಎಂತಹ ಹುಡುಗ ಎಂಬುದಕ್ಕೆ ಒಂದು ಘಟನೆಯನ್ನು ನೀಡಬಹುದು. ಈತ ಚಿಕ್ಕವನಾಗಿದ್ದಾಗ ಈತನಂತಹ ಇತರೆ ಮಕ್ಕಳಿಗೆಂದು ಆಗತಾನೆ ಪ್ರಾರಂಭವಾಗಿದ್ದ ಶಾಲೆಗೆ ಹೋಗಲಾರಂಭಿಸಿದ. ಒಂದು ದಿನ, ಈತ ಆಯತಪ್ಪಿ ತನ್ನ ಕುರ್ಚಿಯಿಂದ ಮಕಾಡೆ ನೆಲಕ್ಕೆ ಬಿದ್ದ. ಆತನ ಎರಡು ಹಲ್ಲುಗಳು ಮುರಿದು ಹೋದವು. ತಕ್ಷಣ ಅವನನ್ನು ದಂತವೈದ್ಯರಲ್ಲಿಗೆ ಕರೆದುಕೊಂಡು ಹೋಗಲಾಯಿತು. ಆತ ಅಪಾರ ನೋವಿನಲ್ಲಿದ್ದ. ಜೋರಾಗಿ ಅಳುತ್ತಿದ್ದ. ಬಟ್ಟೆಯೆಲ್ಲ ರಕ್ತಮಯವಾಗಿತ್ತು. ವೈದ್ಯರು ಮುರಿದಿದ್ದ ಹಲ್ಲುಗಳ ಚೂರುಗಳನ್ನೂ ಆತನ ದವಡೆಯಿಂದ ಕಿತ್ತುಹಾಕಿದರು. ಅಂತಹ ಪರಿಸ್ಥಿತಿಯಲ್ಲೂ ಆದಿತ್ಯ ಆ ವೈದ್ಯರಿಗೆ ಒಂದು ಗಾಳಿ ಮುತ್ತನ್ನು ಕೊಟ್ಟು ತನ್ನ ಕೃತಜ್ಞತೆಯನ್ನು ತೋರಿದ. ವೈದ್ಯ ದಂಗುಬಡಿದುಹೋದ.

ಚಲಿಸುವ ಚಿತ್ರಗಳು ಆತನಿಗೆ ಉಪದ್ರವ ಕೊಡುವುದರಿಂದ ಆತ ಟಿವಿಯನ್ನು ನೋಡುವುದಿಲ್ಲ. ಬದಲಾಗಿ ಆತನಿಗೆ ಸಂಗೀತ ಇಷ್ಟವಾಗಿದ್ದು ಗಂಟೆಗಟ್ಟಲೆ ಅದನ್ನು ಕೇಳಬಲ್ಲ. ಒಮ್ಮೆ ಶೌರಿ ಆದಿತ್ಯನ ಕಣ್ಣಿಗೆ ಚಿಕಿತ್ಸೆ ಕೊಡಿಸಲು ಅವರನ್ನು ಮದ್ರಾಸಿಗೆ ಕರೆದುಕೊಂಡು ಹೋಗಿರುತ್ತಾರೆ. ಅವರ ಸ್ನೇಹಿತರ ಮನೆಯಲ್ಲಿ ತಂಗಿರುತ್ತಾರೆ. ಬೆಳಗ್ಗೆ ಎದ್ದು ಶೌರಿ ತಮ್ಮ ವ್ಯಾಯಾಮ ಮಾಡುವ ಹೊತ್ತಿಗೆ ರೇಡಿಯೋದಲ್ಲಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರು ಮೀರಾ ಭಜನೆಯನ್ನು ಹಾಡುತ್ತಿರುವುದು ಕೇಳಿಸುತ್ತದೆ. ಶೌರಿ ಓಡಿ ಹೋಗಿ ತಮ್ಮ ಕೊಠಡಿಯಿಂದ ಆದಿತ್ಯನನ್ನು ಕರೆದುಕೊಂಡು ಬರುತ್ತಾರೆ. ಆತನಿಗೆ ಆ ಭಜನೆಗಳು ಅಚ್ಚುಮೆಚ್ಚು. ಆತ ತಲೆಬಗ್ಗಿಸಿ ಏಕಾಗ್ರತೆಯಿಂದ ಹಾಡನ್ನು ಕೇಳುತ್ತಾನೆ.

ಆತನ ಬೆನ್ನು ಸವರುತ್ತಾ ನಿಂತಿರುವ ಶೌರಿ ಅವರ ಕಣ್ಣು ಹನಿಯಲಾರಂಭಿಸುತ್ತವೆ. ಅವರು ಅದೆಷ್ಟೇ ಪ್ರಯತ್ನಿಸಿದರೂ, ಸದ್ದು ಮಾಡದಿದ್ದರೂ ಕಣ್ಣೀರು ಹರಿಯುತ್ತಲೇ ಇರುತ್ತದೆ. ಹಾಡು ಮುಗಿದ ನಂತರ ತಮ್ಮ ಕಣ್ಣೀರು ಆದಿತ್ಯನಿಗೆ ಕಾಣಿಸಬಾರದೆಂದು ಶೌರಿ ಹಿಂದಿನಿಂದಲೇ ಮಗನ ವ್ಹೀಲ್‌ಚೇರ್‌ಅನ್ನು ದೂಡುತ್ತಾ ಕೊಠಡಿಗೆ ಹಿಂದಿರುಗುತ್ತಾರೆ. ಅಲಿ ಮಗ ಹಿಂದೆ ತಿರುಗಿ, ತಂದೆಯನ್ನು ತನ್ನತ್ತ ಎಳೆದುಕೊಂಡು, ಅವರ ಮುಖವನ್ನು ತನ್ನ ಎದೆಗೆ ಅಪ್ಪಿಕೊಂಡು 'ಅಳಬೇಡ ಅಪ್ಪಾ' ಎಂದು ತಂದೆಗೆ ಸಮಾಧಾನ ಮಾಡುತ್ತಾನೆ.

ಆದಿತ್ಯ ಎಂಬ ತಮ್ಮ 'ವಿಶೇಷ' ಮಗನ ಪಾಲನೆಯನ್ನೇ ತಮ್ಮ ಬದುಕಿನ ಆದ್ಯತೆಯನ್ನಾಗಿಸಿಕೊಂಡು ಬದುಕುತ್ತಿರುವ ಶೌರಿ ಮತ್ತು ಅನಿತಾರ ಜೀವನದಲ್ಲಿ ಇನ್ನೊಂದು ದುರಂತ ಸಂಭವಿಸುತ್ತದೆ. ಅನಿತಾ ಅವರು 43 ವರ್ಷದವರಾಗಿದ್ದಾಗಲೇ ಅವರಿಗೆ ಪಾರ್ಕಿನ್‌ಸನ್ಸ್ ರೋಗ ತಗುಲಿಕೊಳ್ಳುತ್ತದೆ. ಪಾರ್ಕಿನ್‌ಸನ್ಸ್ ರೋಗದಿಂದಾಗಿ ಅವರು ನಿಧಾನವಾಗಿ ತಮ್ಮ ನರಮಂಡಲದ ಮೇಲೆ ಹಿಡಿತ ಕಳೆದುಕೊಳ್ಳಲಾರಂಭಿಸುತ್ತಾರೆ. ಒಂದೆಡೆ ಬುದ್ಧಿಮಾಂದ್ಯನಾದರೂ ಪ್ರೀತಿಯ ಮಗ, ಇನ್ನೊಂದೆಡೆ ತನ್ನ ಬಟ್ಟೆ ಬದಲಿಸಿಕೊಳ್ಳಲೂ ಆಗದ ಊಟ ಮಾಡಲೂ ಆಗದ ಪ್ರೀತಿಯ ಮಡದಿ. ಬೇರೆ ಯಾರೇ ಇಂತಹ ಪರಿಸ್ಥಿತಿಯಲ್ಲಿದ್ದಿದ್ದರೆ ನುಚ್ಚುನೂರಾಗುತ್ತಿದ್ದರೇನೋ. ಆದರೆ ಶೌರಿ ಧೃತಿಗೆಡುವುದಿಲ್ಲ, ಭವಿಷ್ಯದ ಬಗ್ಗೆ ಚಿಂತಿಸುವುದಿಲ್ಲ. ಬದಲಾಗಿ ಈ ಕ್ಷಣ ತಾನು ಏನು ಮಾಡಬೇಕು ಎಂಬುದರ ಬಗ್ಗೆ ಮಾತ್ರ ಚಿಂತಿಸುತ್ತಾರೆ. ಮಗನನ್ನು ಟಾಯ್ಲೆಟ್‌ಗೆ ಕರೆದುಕೊಂಡು ಹೋಗುವುದರಿಂದ ಹೆಂಡತಿಗೆ ಊಟಮಾಡಿಸುವುದರ ತನಕ ಎಲ್ಲವನ್ನೂ ನಿಭಾಯಿಸುತ್ತಾರೆ.

ದೆಹಲಿಯ ವಾತಾವರಣ ಅನಿತಾರ ಆರೋಗ್ಯವನ್ನು ಹದಗೆಡಿಸುವುದರಿಂದ ತಮ್ಮ ಜೀವನದ ಉಳಿತಾಯವನ್ನೆಲ್ಲ ಒಟ್ಟುಗೂಡಿಸಿ ಮಹಾರಾಷ್ಟ್ರದ ಲವಾಸಾದಲ್ಲಿ ಒಂದು ಮನೆಯನ್ನು ಕಟ್ಟಿಸುತ್ತಾರೆ. ಬಹಳ ಪ್ರೀತಿಯಿಂದ ಕಟ್ಟಿಸಿರುವ ಆ ಮನೆ ತಮ್ಮ ಮಗ ಮತ್ತು ಹೆಂಡತಿಯ ಅಗತ್ಯಗಳನ್ನು ಇಟ್ಟುಕೊಂಡೇ ರೂಪಿಸಲಾಗಿದೆ. ಆದರೆ ಆ ಮನೆಯನ್ನು ಹೊಕ್ಕ ಕೆಲವೇ ದಿನಗಳಲ್ಲಿ ಕಷ್ಟಗಳೇನೆಂಬುದು ತಮ್ಮನ್ನು ಅಷ್ಟು ಸುಲಭವಾಗಿ ನೆಮ್ಮದಿಯಿಂದ ಇರಲು ಬಿಡುವುದಿಲ್ಲ ಎಂದು ಮತ್ತೊಮ್ಮೆ ಸಾಬೀತಾಗುತ್ತದೆ.

ಮೂವತ್ತು ವರ್ಷಗಳ ನಂತರ ಮತ್ತೆ ಆದಿತ್ಯನನ್ನು ಫಿಟ್ಸ್ ಕಾಡಲಾರಂಭಿಸುತ್ತದೆ. ಆದರೆ ಅದಕ್ಕೆ ಸೂಕ್ತವಾದ ಚಿಕಿತ್ಸಾ ಸೌಲಭ್ಯಗಳು ಲವಾಸಾದಲ್ಲಿ ಇಲ್ಲ. ವಿಧಿ ಇಲ್ಲದೆ ಶೌರಿ ಮತ್ತು ಅವರ ಪುಟ್ಟ ಸಂಸಾರ ತಮ್ಮ ಪ್ರೀತಿಯ ಮನೆಯನ್ನು ತೊರೆದು ಮತ್ತೆ ದೆಹಲಿಗೆ ತನ್ನ ವಾಸ್ತವ್ಯವನ್ನು ಬದಲಾಯಿಸಬೇಕಾಗುತ್ತದೆ.

ಇದೆಲ್ಲದರ ಬಗ್ಗೆ ಶೌರಿ ಪುಸ್ತಕದ ಕೊನೆಯಲ್ಲಿ ಹೀಗೆ ಹೇಳುತ್ತಾರೆ:

ಆದಿತ್ಯ ನಮಗೆ ನಮ್ಮ ಹಂಬಲಗಳನ್ನು ಹತ್ತಿಕ್ಕಲು ಕಲಿಸಿದ್ದ.

ಆದಿತ್ಯ ನಮಗೆ ಹಿಂದೆ ಆಗಿದ್ದರ ಬಗ್ಗೆ ಕೊರಗದಂತೆ, ಭವಿಷ್ಯದ ಬಗ್ಗೆ ಚಿಂತಿಸದಂತೆ ಎಚ್ಚರಿಸಿದ್ದ. ಆದಿತ್ಯ ಯಾವುದಕ್ಕೂ ಅಂಟಿಕೊಳ್ಳದೆ ಬದುಕುವುದನ್ನು ಕಲಿಸಿದ್ದ.

ನಾವು ನಮ್ಮ ವಾಸ್ತವ್ಯವನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ಬದಲಾಯಿಸಬಹುದು. ಹಾಗೆ ಮಾಡಿದರೆ ನಮ್ಮ ಬದುಕಿನ ಸಮಸ್ಯೆಗಳು ಬಗೆಹರಿಯುವುದಿಲ್ಲ, ಬದಲಾಗಿ ಅವು ನಾವು ಎಲ್ಲೇ ಹೋದರೂ ನಮ್ಮನ್ನು ಹಿಂಬಾಲಿಸುತ್ತವೆ.

ಆದ್ದರಿಂದ ನಾವು ಬದುಕಿನ ದಂಡನೆಗಳಿಂದ ಬಚಾವಾಗಿದ್ದೇವೆ ಎಂಬ ಭ್ರಮೆಯಲ್ಲಿ ಬದುಕುವುದಕ್ಕಿಂತ ನಾವು ಎಲ್ಲಿದ್ದೇವೋ ಅಲ್ಲೇ ಇದ್ದು ಸಮಸ್ಯೆಗಳನ್ನು ಎದುರಿಸಬೇಕು....

ಶೌರಿ ಅವರು ವಿವಿಧ ಧರ್ಮಗಳ ಬಗ್ಗೆ ಈ ಪುಸ್ತಕದಲ್ಲಿ ಏನೇನು ಹೇಳಿದ್ದಾರೆ ಎಂಬುದನ್ನು ನಾನಿನ್ನೂ ಓದಿಲ್ಲ. ಆದರೆ ಓರ್ವ ಬುದ್ಧಿಮಾಂದ್ಯ ಮಗನ ತಂದೆಯಾಗಿ, ಪಾರ್ಕಿನ್‌ಸನ್ಸ್ ರೋಗಕ್ಕೆ ತುತ್ತಾಗಿರುವ ಪತ್ನಿಯ ಗಂಡನಾಗಿ ಅವರು ದಾಖಲಿಸಿರುವುದಂತೂ ಮನಮುಟ್ಟುವಂತಿದೆ..



ಪೋಸ್ಕೋ ಪಲಾಯನ-2

ಲಕ್ಷಕ್ಕೆ ಮನ ಸೋತವರು ರೈತರಲ್ಲ ಚೆಡ್ಡಿ ಚೇಲಾಗಳು!

ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಹಳ್ಳಿಗುಡಿ ಸೇರಿದಂತೆ ಇತರೆ ಗ್ರಾಮಗಳ ರೈತರು ತೋಂಟದಾರ್ಯ ಸ್ವಾಮೀಜಿಗಳ ನೇತೃತ್ವದಲ್ಲಿ ಸರ್ಕಾರದ ವಿರುದ್ಧ ಗಟ್ಟಿಯಾಗಿ ಹೋರಾಡಿ ತಮ್ಮ ಭೂಮಿ ಪೋಸ್ಕೋ ಕಂಪನಿಯ ಪಾಲಾಗದಂತೆ ನೋಡಿಕೊಂಡರು.

ಆದರೆ ಅದೇನೇ ಆದರೂ ಪೋಸ್ಕೋ ಕಂಪನಿ ಇಲ್ಲೇ ತಲೆ ಎತ್ತಲಿದೆ ಎಂದು ಭ್ರಮಿಸಿದ್ದ ಕೆಲವು ಚೆಡ್ಡಿ ಪಿಂಡಗಳು ರೈತರಿಗೆ ಪುಡಿಕಾಸು ಕೊಟ್ಟು ಅವರ ಜಮೀನನ್ನು ಖರೀದಿಸಿ ದೊಡ್ಡ ಲಾಭ ಸಿಗುತ್ತದೆಂದು ಬಾಯಿ ತೆರೆದುಕೊಂಡಿದ್ದರು. ಈಗ ರೈತರ ಯಶಸ್ವೀ ಹೋರಾಟವನ್ನು ಕಂಡು ಈ ರಿಯಲ್ ಎಸ್ಟೇಟ್ ದಂಧೆಕೋರರು ಅಕ್ಷರಶಃ ಬಾಯಿ ಬಡಿದುಕೊಳ್ಳುತ್ತಿದ್ದಾರೆ.


ಜಿಲ್ಲಾ ಮಂತ್ರಿ ಸಿ.ಸಿ. ಪಾಟೀಲ ಮತ್ತು ಕೈಗಾರಿಕಾ ಮಂತ್ರಿ ಮುರುಗೇಶ ನಿರಾಣಿಯ ಚೇಲಾಗಳಾದ ಇವರೆಲ್ಲ ತಾವು ಭೂಖರೀದಿಗೆ ಹಾಕಿದ್ದ ಬಂಡವಾಳವೆಲ್ಲ ಬುಡಮೇಲಾಗಿರುವುದನ್ನು ನೋಡಲಾರದೆ ಕಂಡವರ ಕಾಲುಹಿಡಿದು "ಪೋಸ್ಕೋ ಇಲ್ಲಿಗೆ ಬರಲಿ, ಇಲ್ಲೇ ಇರಲಿ" ಎಂದು ಬೇಡಿಕೊಳ್ಳುತ್ತಿದ್ದಾರೆ.


ಬೆಂಗಳೂರಿನಲ್ಲಿ ನಡೆದ ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆ ಸಮಾವೇಶ ಎಂಬ ಭೂಲೂಟಿ ಯೋಜನೆಯ ಹಿಂದೆ ರಿಯಲ್ ಎಸ್ಟೇಟ್ ಮಾಫಿಯಾ ಕೆಲಸ ಮಾಡಿದ್ದು ಈಗ ಎಲ್ಲರಿಗೂ ಗೊತ್ತಾಗುತ್ತಿದೆ. ಈ ಹಿಂದೆ ಬಳ್ಳಾರಿ, ಕೊಪ್ಪಳ, ಯಲಬುರ್ಗಾ, ಹಾವೇರಿಯಲ್ಲೂ ಕೈಗಾರಿಕೆಗಳು ಬರುತ್ತಿವೆ ಎಂಬುದನ್ನು ಮೊದಲೇ ತಮ್ಮ ರಾಜಕೀಯ 'ಗುರು'ಗಳಿಂದ ತಿಳಿದ ಈ ಚೆಡ್ಡಿ ಪಟಾಲಂ ಆ ಭಾಗದ ರೈತರಿಗೆ ಆಮಿಷಗಳನ್ನು ತೋರಿಸಿ ಕಡಿಮೆ ಬೆಲೆಗೆ ಅವರ ಭೂಮಿಯನ್ನು ಖರೀದಿಸಿದ್ದರು. ಆನಂತರ ಕೆಐಎಡಿಬಿಗೆ ಹತ್ತರಷ್ಟು ಲಾಭದಲ್ಲಿ ಆ ಭೂಮಿಗಳನ್ನು ಮಾರಿದ್ದರು. ಅದೇರೀತಿ ಮುಂಡರಗಿ ತಾಲೂಕಿನ ಹಳ್ಳಿಗುಡಿ ಭಾಗಕ್ಕೆ ಪೋಸ್ಕೋ ಆಗಮಿಸಲಿದೆ ಎಂಬ ನಿರೀಕ್ಷೆಯಲ್ಲಿ ಈ ಮಾಫಿಯಾ ಇಲ್ಲೂ ಅದೇ ಲಾಭದಾಯಕ ದಂಧೆ ನಡೆಸಲು ಸಜ್ಜಾಗಿತ್ತು.

ಜಿಲ್ಲಾ ಮಂತ್ರಿ ಸಿ.ಸಿ.ಪಾಟೀಲ, ಶಾಸಕರಾದ ಕಳಕಪ್ಪ ಬಂಡಿ ಮತ್ತು ಕೋಲಿ ಬಸವ ಶ್ರೀಶೈಲಪ್ಪ ಬಿರಾದರನ ಖಾಸಾ ಚೇಲಾಗಳೇ ಇರುವ ಈ ಮಾಫಿಯಾದವರು ಹಳ್ಳಿಗುಡಿ ಮತ್ತಿತರ ಹಳ್ಳಿಗಳ ಸಾವಿರಾರು ಎಕರೆ ಜಮೀನುಗಳನ್ನು ಹಂತಹಂತವಾಗಿ ಖರೀದಿಸಿದರು. ಆದರೆ ಅವರೆಲ್ಲ ಎಕರೆಯೊಂದಕ್ಕೆ ರೈತರಿಗೆ ನೀಡಿದ್ದು ಬರೊಬ್ಬರಿ ಎಂದರೆ 50-60 ಸಾವಿರ ರೂಪಾಯಿ ಮಾತ್ರ. ಈಗ ಅದೇ ಭೂಮಿಗೆ ಎಕರೆಗೆ 30 ಲಕ್ಷ ರೂಪಾಯಿ ಮತ್ತು ಪೋಸ್ಕೋ ಕಂಪನಿಯಲ್ಲೊಂದು ನೌಕರಿ ನೀಡಿದರೆ ತಮ್ಮ ಜಮೀನು ನೀಡುತ್ತೇವೆ ಎಂದು ಕರಾರುಪತ್ರ ತಯಾರಿಸಿ ಕೆಐಎಡಿಬಿಗೆ ನೀಡಿದ್ದಾರೆ. ಆ ಮೂಲಕ ಪೋಸ್ಕೋ ವಿರೋಧಿ ರೈತರಲ್ಲಿ ಗೊಂದಲ ಹುಟ್ಟಿಸಲು ಯತ್ನಿಸುತ್ತಿದ್ದಾರೆ.

ಈ ಮಾಫಿಯಾದೊಂದಿಗೆ ಕೈಜೋಡಿಸಿದವನು ಇಲ್ಲಿನ 7182 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ನೇಮಕಗೊಂಡಿದ್ದ ವಿಶೇಷ ಭೂಸ್ವಾಧೀನಾಧಿಕಾರಿ ಬಿಳಗಿ. ಈಗ ಸಿ.ಸಿ.ಪಾಟೀಲ ಕಾಲಲ್ಲಿ ತೋರಿಸಿದ್ದನ್ನು ಕೈಗೆತ್ತಿ ಮಾಡುವವನು. ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಗೆ ಸರ್ಕಾರದಿಂದ ಲಕ್ಷಾಂತರ ರೂಪಾಯಿ ಸಿಗುತ್ತದೆ ಎಂದು ರಿಯಲ್ ಎಸ್ಟೇಟ್ ದಂಧೆಕೋರರೊಂದಿಗೆ ಈ ಬಿಳಗಿ ಡೀಲ್ ಕುದುರಿಸಿಕೊಂಡಿದ್ದು, ಅವರಿಗೆ ಅನುಕೂಲವಾಗುವಂತೆ ತನ್ನ ಕೈಲಾಗಿದ್ದನ್ನೆಲ್ಲ ಮಾಡಿದ್ದ. ಈ ಬಿಳಗಿಯ ಮಾತು ಕಟ್ಟಿಕೊಂಡು ನೂರಾರು ಎಕರೆ ಜಮೀನು ಖರೀದಿಸಿ ಲಕ್ಷಾಂತರ ರೂಪಾಯಿ ಲಾಭದ ಕನಸು ಕಾಣುತ್ತಿದ್ದವರು ಈಗ ಹಗಲಲ್ಲೇ ಬೆಚ್ಚಿಬೀಳುವಂತಾಗಿದೆ.

ಲಕ್ಷಕ್ಕೆ ಮರುಳಾದವರು ಮಂತ್ರಿಯ ಚೇಲಾಗಳು





ಕೃಷಿಯನ್ನೇ ನಂಬಿಕೊಂಡು ತನ್ನ ಬದುಕನ್ನು ರೂಪಿಸಿಕೊಂಡಿರುವ ಯಾವೊಬ್ಬ ರೈತನೂ ತನ್ನ ಜಮೀನನ್ನು ಸಲೀಸಾಗಿ ಬಿಟ್ಟುಕೊಡಲು ಒಪ್ಪುವುದಿಲ್ಲ. ಅಂಥಾದ್ದರಲ್ಲಿ ಪುಂಡ ಸಿ.ಸಿ.ಪಾಟೀಲ ಮತ್ತು ಫ್ಯಾಕ್ಟರಿ ಪೀಡೆ ಮುರುಗೇಶ ನಿರಾಣಿ ಮಾತ್ರ "ಮುಕ್ಕಾಲು ಭಾಗ ರೈತರು ತಮ್ಮ ಭೂಮಿ ಕೊಡಲು ಮುಂದೆ ಬಂದಿದ್ದಾರೆ. ಹಾಗೆಂದು ಮುಚ್ಚಳಿಕೆಯನ್ನೂ ಬರೆದುಕೊಟ್ಟಿದ್ದಾರೆ" ಎಂದು ಮಾಧ್ಯಮಗಳ ಮುಂದೆ ಸುಳ್ಳು ಹೇಳಿದ್ದಾರೆ. ವಾಸ್ತವವಾಗಿ ಪೋಸ್ಕೋ ಕಂಪನಿಗೆ ತಮ್ಮ ಭೂಮಿ ನೀಡಲು ಒಪ್ಪಿರುವವರೆಲ್ಲ ಇವರ ಚೇಲಾಗಳೇ!

ಜಿಲ್ಲಾ ಮಂತ್ರಿ ಸಿ.ಸಿ. ಪಾಟೀಲನ ಖಾಸಾ ಚೇಲಾ ಕಂಸಿವಿಲ್ ಗುತ್ತಿಗೆದಾರ ಸೋಮಶೇಖರ ಚಿನ್ನಳ್ಳಿ ಸುಮಾರು 60 ಮಂದಿಯ ಗುಂಪು ಕಟ್ಟಿಕೊಂಡು "ಪೋಸ್ಕೋ ಇಲ್ಲೇ ಇರಲಿ. ಇದು ಜಿಲ್ಲೆಯ ಅಭಿವೃದ್ಧಿಯ ನಾಂದಿ" ಎಂದೆಲ್ಲಾ ಭಾಷಣ ಬಿಗಿದಿದ್ದ. ಅದಕ್ಕೆ ಕಾರಣ ಈತನ 368 ಎಕರೆ ಜಮೀನಿಗೆ ಕೆಐಎಡಿಬಿ ಕೊಡಲಿರುವ ಕೋಟ್ಯಾಂತರ ರೂಪಾಯಿಗಳ ಮೇಲಿನ ಆಸೆ!

ಈ ಸೋಮಶೇಖರ ಚಿನ್ನಳ್ಳಿ ಇತ್ತೀಚಿಗೆ ತನ್ನ ಸಂಬಂಧಿ ನಾಲ್ಲೂರಿ ಎಂಬಾತನೊಂದಿಗೆ ಸೇರಿಕೊಂಡು ರೈತರಿಂದ ಕಡಿಮೆ ದರಕ್ಕೆ ನೂರಾರು ಎಕರೆ ಜಮೀನು ಖರೀದಿಸಿದ್ದ. ಅದಕ್ಕೂ ಸರ್ಕಾರದಿಂದ ಕೋಟ್ಯಾಂತರ ರೂಪಾಯಿಗಳು ಬರುತ್ತದೆ ಎಂದು ಕನಸು ಕಂಡಿದ್ದ. ಆದರೆ ಯಾವಾಗ ರೈತರ ವಿರೋಧವನ್ನು ಸಹಿಸದೆ ಪೋಸ್ಕೋ ಇಲ್ಲಿಂದ ಪಲಾಯನ ಮಾಡಲಿದೆ ಎಂದು ಗೊತ್ತಾಯಿತೋ ಆಗ ಈತ ಸುಮಾರು 60 ರೈತರನ್ನು ಕರೆದಿದ್ದಾನೆ. ಅವರ್‍ಯಾರಿಗೂ ಸರಿಯಾಗಿ ವಿಷಯ ತಿಳಿಸದೆ ಅವರನ್ನೆಲ್ಲ ಮಂತ್ರಿ ಸಿ.ಸಿ. ಪಾಟೀಲ ಕಳಿಸಿದ್ದ ಎರಡು ವಿಶೇಷ ಬಸ್‌ಗಳಲ್ಲಿ ತುಂಬಿಕೊಂಡು ಬೆಂಗಳೂರಿಗೆ ಹೊರಟಿದ್ದಾನೆ.

ಬೆಂಗಳೂರಿನಲ್ಲಿ ಅವರನ್ನೆಲ್ಲ ಮುಖ್ಯಮಂತ್ರಿ ಯಡಿಯೂರಪ್ಪನ ಮುಂದೆ ನಿಲ್ಲಿಸಿ "ಇವರೆಲ್ಲಾ ಪೋಸ್ಕೋ ಕಂಪನಿಗೆ ತಮ್ಮ ಭೂಮಿ ಕೊಡಲು ಒಪ್ಪಿದ್ದಾರೆ" ಎಂದು ರೀಲ್ ಬಿಟ್ಟಿದ್ದಾನೆ. ಆದರೆ ಈ ಸೋಮಶೇಖರ ಚಿನ್ನಳ್ಳಿಯ ಜೊತೆ ಇರುವವರು ಯಾರ್‍ಯಾರು ಎಂದು ನೋಡಿದರೆ ಈತನ ಮಸಲತ್ತು ಅರ್ಥವಾಗುತ್ತದೆ.


ಈ ಚಿನ್ನಳ್ಳಿಯ ರಿಯಲ್ ಎಸ್ಟೇಟ್ ಮಾಫಿಯಾದಲ್ಲಿ ಚನ್ನವೀರಪ್ಪ ಅಂಗಡಿ, ಅಡಿವೆಪ್ಪ ಬಳಗನೂರ, ಶಂಕ್ರಪ್ಪ ಬೇವೂರ, ಬಸವರಾಜ ಕರಮುಡಿ, ಶೇಖರಪ್ಪ ಅಬ್ಬಿಗೆರೆ, ಮುತ್ತಪ್ಪ ಕರಮುಡಿ, ಚನ್ನಪ್ಪ ಪುರದ, ರಾಜೂ ಸಜ್ಜನ, ಡಿ.ಎಂ. ಚಿನ್ನಳ್ಳಿ ಎಂಬ ಹಳ್ಳಿಗುಡಿಯ ರೈತರಿದ್ದಾರೆ. ಇವರೆಲ್ಲ ಚೆಡ್ಡಿಗಳೆ. ಹಾಗೆಯೇ ಜಂತ್ಲಿ ಶಿರೂರ ಗ್ರಾಮದ ಚನ್ನಬಸಪ್ಪ ಚವರರೆಡ್ಡಿ, ಎಲ್ಲಪ್ಪ ರಾಮೇನಹಳ್ಳಿ, ಗೂರಪ್ಪ ಪಲ್ಲ?ದ, ಯಲ್ಲಪ್ಪ ಮುದಿಗೊಂಡ, ಮಲ್ಲಪ್ಪ ಮುದಿಗೌಣ್ಣವರ ಎಂಬುವರಿದ್ದಾರೆ. ಇವರೆಲ್ಲ ಮಂತ್ರಿ ಸಿ.ಸಿ. ಪಾಟೀಲ ಮತ್ತು ಶಾಸಕ ಕಳಕಪ್ಪ ಬಂಡಿಯ ಖಾಸಾ ಬಂಟರು.

ಇವರನ್ನೆಲ್ಲ ಭೇಟಿಯಾದ ಯಡ್ಡಿ "ಮೊದಲು ಸ್ವಾಮಿಗಳ ಅನುಮತಿ ಪಡೆದು ಬನ್ನಿ" ಎಂದು ಸಾಗಹಾಕಿದರು. ಅದರಂತೆ ಇವರು ಬೆಂಗಳೂರಿನಿಂದ ನೇರವಾಗಿ ಮುಂಡರಗಿಗೆ ಅಂದು ಅಲ್ಲಿರುವ ಅನ್ನದಾನೇಶ್ವರ ಸ್ವಾಮಿಗಳನ್ನು ಭೇಟಿ ಮಾಡಿದರು. ಆದರೆ ಇವರ ಅಸಲಿ ಉದ್ದೇಶವನ್ನರಿತ ಸ್ವಾಮಿಗಳು ಇವರ ಮನವಿಗೆ ಸೊಪ್ಪುಹಾಕಲಿಲ್ಲ. ಆನಂತರ ಇವರು ಗದುಗಿನ ತೋಂಟದಾರ್ಯ ಸ್ವಾಮಿಗಳನ್ನು ಭೇಟಿಯಾದರು. ಆಗ ಸಿದ್ದಲಿಂಗ ಮಹಾಸ್ವಾಮಿಗಳೂ ಇವರಿಗೆ ಬುದ್ಧಿ ಹೇಳಿದರು. ಚಿನ್ನಳ್ಳಿ ಮತ್ತಾತನ ಬಂಟರಿಗೆ ಬುದ್ಧಿ ಇದ್ದರೆ ಸ್ವಾಮಿಗಳ ಕಾಳಜಿ ಅರ್ಥವಾಗುತ್ತಿತ್ತು. ಆದರೆ ಇವರ್‍ಯಾರಿಗೂ ಬುದ್ಧಿ ಇಲ್ಲದಿರುವುದರಿಂದ ಅವರೆಲ್ಲ ತೋಂಟದಾರ್ಯ ಮಠದ ಮುಂದೆ ಪ್ರತಿಭಟನೆ ನಡೆಸಿದರು. ಅಷ್ಟು ಸಾಲದೆಂಬಂತೆ ಅಲ್ಲೇ ಉಪವಾಸ ಕೂಡುವುದಾಗಿ ಬೆದರಿಕೆಯನ್ನೂ ಹಾಕಿದರು. ಆದರೆ ಅದ್ಯಾವುದೂ ನಡೆಯಲಿಲ್ಲ. ಇದೆಲ್ಲದರಿಂದ ಈಗ ಧೃತಿಗೆಟ್ಟವರಂತೆ ಆಗಿರುವ ಈ ಚೆಡ್ಡಿ ಪಿಂಡಗಳು ತೊಲಗಿದ ಪೋಸ್ಕೊವನ್ನ ಮತ್ತೆ ತರಲು ಹೊಸ ಕಿರಿಕ್ಕು ಶುರು ಹಚ್ಚುವ ತಯಾರಿಯಲ್ಲಿದ್ದಾರೆ.



ತೋಂಟದಾರ್ಯ ಸ್ವಾಮಿ ಮತ್ತು ಅನ್ನದಾನೇಶ್ವರ ಸ್ವಾಮಿಗಳಿಗೆ ಚೆಡ್ಡಿ ಪಟಾಲಂ ಮನವಿಗಳನ್ನು ಸಲ್ಲಿಸುತ್ತಿರುವುದು

• ಹುರಳಿಕುಪ್ಪಿ ವಿನಯ



ಯಡ್ಡಿ, ನಿರಾಣಿ ಏನನ್ನು ತಿನ್ನುತ್ತಾರೆ?

ದಕ್ಷಿಣ ಕೊರಿಯಾ ಮೂಲದ ಪೋಹಾಂಗ್ ಸ್ಟೀಲ್ ಕಂಪನಿ ಅಲಿಯಾಸ್ ಪೋಸ್ಕೋ ಕಪ್ಪು ಪಟ್ಟಿ ಸೇರಿರುವ ವಂಚಕ ಕಂಪನಿ. ಇದರ ವಂಚನೆ ಕುರಿತು 2005ರಲ್ಲಿ ಕೇಂದ್ರ ಪರಿಸರ ಖಾತೆಯ ಸಚಿವಾಲಯ ನೀನಾ ಗುಪ್ತ ಎಂಬುವವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು.

ಆ ಸಮಿತಿಯು ಒರಿಸ್ಸಾದ ಜಗದೀಶ್‌ಸಿಂಗ್‌ಪುರದಲ್ಲಿ ಒಂದು ಘಟಕ ಸ್ಥಾಪಿಸಲು ಮುಂದಾದ ಪೋಸ್ಕೋ ಕಂಪನಿ ಅಲ್ಲಿ ಮಾಡಿರುವ ವಂಚನೆ ಕುರಿತು 270 ಪುಟಗಳ ಸವಿಸ್ತಾರವಾದ ವರದಿಯನ್ನು 2010 ಅಕ್ಟೋಬರ್ 18ರಂದು ಕೇಂದ್ರಕ್ಕೆ ನೀಡಿತು.

ಆ ವರದಿಯನ್ನಾಧರಿಸಿ ಉದ್ಯಮ ವ್ಯವಹಾರ ಸಚಿವಾಲಯವು ಪೋಸ್ಕೋವನ್ನ ಕಪ್ಪು ಪಟ್ಟಿಗೆ ಸೇರಿಸಿತು. ಜೊತೆಗೆ ಇದರ ಏಳು ಜನ ನಿರ್ದೇಶಕರು ಮತ್ತು ಕಾರ್ಯದರ್ಶಿಯನ್ನು ಮೋಸಗಾರರು ಎಂದು ಸಾರಿತು. ಆದರೂ ಇಂತಹ ಕಂಪನಿಯ ಪೂರ್ವಾಪರವನ್ನು ಮುಚ್ಚಿಟ್ಟು, ಅದರ ಅಕ್ರಮಗಳು ಹಾಗೂ ಕಾನೂನು ಬಾಹಿರ ಚಟುವಟಿಕೆಗಳ ಮಾಹಿತಿ ಜನರಿಂದು ಬಚ್ಚಿಟ್ಟು ಅದನ್ನು ರಾಜ್ಯಕ್ಕೆ ತರಲು ಯತ್ನಿಸಿದ ಬಿಜೆಪಿ ಚೆಡ್ಡಿಗಳಿಗೆ ಯಾವುದರಿಂದ ಹೊಡೆಯಬೇಕು?

ಇದೆಲ್ಲಕ್ಕಿಂತ ಆಘಾತಕಾರಿಯಾದದ್ದು ಆ ಕಂಪನಿಯೊಂದಿಗೆ ರಾಜ್ಯ ಸರ್ಕಾರ ಮಾಡಿಕೊಂಡಿರುವ ಒಪ್ಪಂದದ ವಿವರಗಳು. ಅವುಗಳಲ್ಲಿ ಪ್ರಮುಖವಾದವು ಹೀಗಿವೆ:

* ರೈತರ ಬದುಕಿಗೆ ಆಧಾರವಾದ ಐದು ಸಾವಿರ ಎಕರೆ ಭೂಮಿಯನ್ನು ಕಸಿದುಕೊಂಡು ಕಂಪನಿಗೆ ಕೊಡಬೇಕು. (ಅದರಲ್ಲಿ ನಾಲ್ಕು ಸಾವಿರ ಎಕರೆಯಲ್ಲಿ ಕಾರ್ಖಾನೆ ಸ್ಥಾಪನೆಯಾಗಲಿದ್ದು ಇನ್ನುಳಿದ 1000 ಎಕರೆಯಲ್ಲಿ ಟೌನ್‌ಶಿಪ್ ನಿರ್ಮಾಣವಾಗಲಿದೆ.)
* ಪರಿಸರವನ್ನು ನಾಶಮಾಡುವ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಅವಕಾಶ ಮಾಡಬೇಕು.
* ಸ್ವತಂತ್ರ ಗಣಿಗಾರಿಕೆಗೆ ಅನುಮತಿ ಮತ್ತು ಅದರಲ್ಲಿ 30 % ಅದಿರನ್ನು ತನ್ನ ಮೂಲ ಕೇಂದ್ರಸ್ಥಾನ ದಕ್ಷಿಣ ಕೊರಿಯಾ ಕಂಪನಿಗೆ ಸಾಗಿಸಲು ಅನುಮತಿ.
* ಜಸ್ಕಾಂನಿಂದ 184 ಮೆ.ವ್ಯಾ ವಿದ್ಯುತ್ ಪೂರೈಕೆ ಮಾಡಬೇಕು
* ತುಂಗಭದ್ರಾದಿಂದ 12000 ಲೀ ನೀರು ಸರಬರಾಜು ಮಾಡಬೇಕು.
* ಒಟ್ಟು ವ್ಯವಹಾರದ ಮೇಲೆ 13.5 % ರಷ್ಟು ವ್ಯಾಟ್ ರಿಯಾಯಿತಿ ಕೊಡಬೇಕು.
* ಇಲ್ಲಿ ಉತ್ಪಾದನೆಯಾಗಲಿರುವ ಉಕ್ಕಿನಲ್ಲಿ 50% ರಷ್ಟನ್ನು ಹೊರದೇಶಗಳಿಗೆ ಮಾರುವ ಅವಕಾಶ ಕೊಡಬೇಕು.
* ಕಾರ್ಖಾನೆ ಇರುವ ಪ್ರದೇಶವನ್ನು ವಿಶೇಷ ಆರ್ಥಿಕ ವಲಯ ಎಂದು ಘೋಷಿಸಬೇಕು
* ಇದು ಪೋಸ್ಕೋ ಕಂಪನಿ ರಾಜ್ಯ ಸರ್ಕಾರಕ್ಕೆ ಹಾಕಿರುವ ಷರತ್ತುಗಳು.

ಅದಕ್ಕೆ ಒಪ್ಪಿಕೊಂಡಿದ್ದಾರೆ ರೈತ ದ್ರೋಹಿಗಳಾದ ಯಡ್ಡಿ ಮತ್ತು ನಿರಾಣಿ ಪಟಾಲಂ. ಇವರು ಹೊಟ್ಟೆಗೆ ಏನನ್ನು ತಿನ್ನುತ್ತಾರೆ?


ರೈತರು ಬೀದಿಗೆ ಬಿದ್ದಾಗ ವಿಮಾನವೇರಿದ ಕಳಕಪ್ಪ



ಅನ್ನ ನೀಡುವ ಭೂಮಿ ತಮ್ಮ ಕೈ ತಪ್ಪಿಹೋಗುತ್ತದೆ ಎಂದು ಆತಂಕಗೊಂಡ ರೈತರು ಊಟ, ನಿದ್ದೆ ಬಿಟ್ಟು ತಮ್ಮ ಭೂಮಿಯನ್ನು ಉಳಿಸಿಕೊಳ್ಳಲು ಬೀದಿಗೆ ಬಂದರೆ ಇವರಿಂದ ಓಟು ಹಾಕಿಸಿಕೊಂಡು ವಿಧಾನಸಭೆ ಸೇರಿರುವ ರೋಣದ ಶಾಸಕ ಕಳಕಪ್ಪ ಬಂಡಿ ಕೃಷಿ ಅಧ್ಯಯನಕ್ಕೆಂದು ದಕ್ಷಿಣ ಆಫ್ರಿಕಾಕ್ಕೆ ವಿಮಾನವೇರಿದ್ದ! ತನ್ನ ಕ್ಷೇತ್ರದ ರೈತರ ಬದುಕು, ಭವಿಷ್ಯ, ಕೃಷಿ ಚಟುವಟಿಕೆ ಬುಡಮೇಲಾಗುತ್ತಿರುವಾಗ ಈ ಕಳಕಪ್ಪ ಅದ್ಯಾವ ಕೃಷಿ ಅಧ್ಯಯನಕ್ಕೆ ದೂರದ ದಕ್ಷಿಣ ಆಫ್ರಿಕಾಗೆ ಅಲ್ಲಿಗೆ ಹೋದನೋ. ಸದಾ ಬೇರೆ ಧ್ಯಾನದಲ್ಲಿ, ಯೋಗಾಸನದಲ್ಲಿ ಮಗ್ನನಾಗಿರುವ ಈತ ಯಡ್ಡಿ ಮತ್ತು ನಿರಾಣಿಯ ಇಷಾರೆಯಂತೆ ವಿಮಾನ ಹತ್ತಿದ್ದನಂತೆ. ತಾನು ಇಲ್ಲೆ ಇದ್ದರೆ ತನಗೆ ಓಟು ಹಾಕಿದವರು ಬೂಟು ತಗೊಂಡಾರು ಎಂಬ ಭಯ ಇದ್ದಿರಲಿಕ್ಕೂ ಸಾಕು!

ಎಲ್ಲ ಮುಗಿದ ಮೇಲೆ ಊರಿಗೆ ವಾಪಸ್ ಬಂದಿರುವ ಕಳಕಪ್ಪ ಈಗ ತನ್ನ ಚೇಲಾಗಳನ್ನು ಮುಂದೆ ಬಿಟ್ಟು ಹೊಸ ಆಟ ಆಡಿಸಲು ತಂತ್ರ ಹೆಣೆಯುತ್ತಿದ್ದಾನೆ. ಆತ ಬೀದಿಗೆ ಬಂದರೆ ಕ್ಷೇತ್ರದ ಜನರೇ ಇವನನ್ನು ಹಣಿಯುವುದರಲ್ಲಿ ಸಂಶಯವಿಲ್ಲ...

ನಿರಾಣಿಯ ನೀಚ ಬುದ್ಧಿ



"ತೋಂಟದಾರ್ಯ ಸಿದ್ದಲಿಂಗ ಸ್ವಾಮಿಗಳು ಒಪ್ಪಂದಕ್ಕೆ ಸಿದ್ಧರಾಗಿದ್ದಾರೆ. ಅವರಿಗೆ ಬೇಕಾದುದನ್ನು ನಾವು ನೀಡಿದರೆ ಪೋಸ್ಕೋ ಸ್ಥಾಪನೆಗೆ ತಾವೇ ರೈತರನ್ನು ಒಪ್ಪಿಸುತ್ತಾರೆ" ಎಂದು ರೈತರ ಮುಂದು ಹೇಳುವ ಮೂಲಕ ಕೈಗಾರಿಕೆ ಮಂತ್ರಿ ಮುರುಗೇಶ ನಿರಾಣಿ ತನ್ನ ನೀಚ ಬುದ್ಧಿಯನ್ನು ಪ್ರದರ್ಶಿಸಿದ್ದಾನೆ.

"ತೋಂಟದ ಡಾ|| ಸಿದ್ಧಲಿಂಗ ಸ್ವಾಮಿಗಳು ತಮಗೊಂದು ಆಯುರ್ವೇದಿಕ್ ಕಾಲೇಜು ಬೇಕೆಂದಿದ್ದಾರೆ. ಅದನ್ನು ಸರ್ಕಾರ ಮಂಜೂರು ಮಾಡಿದರೆ ಅವರೇ ಮುಂದೆ ನಿಂತು ಪೋಸ್ಕೋ ಕಾರ್ಖಾನೆ ಪ್ರಾರಂಭಕ್ಕೆ ನೆರವಾಗುವುದಾಗಿ ಹೇಳಿದ್ದಾರೆ. ರೈತರು ಅವರನ್ನು ನಂಬಬಾರದು" ಎಂದೆಲ್ಲ ಬೆಂಗಳೂರಿಗೆ ಸ್ಪೆಷಲ್ ಬಸ್ಸಿನಲ್ಲಿ ತೆರಳಿದ್ದ ರೈತರಿಗೆ ನಿರಾಣಿ ಹೇಳಿದ್ದಾನೆ.

ಆದರೆ ಅವತ್ತು ಅಲ್ಲಿದ್ದ ರೈತರಲ್ಲಿ ಕೆಲವರು ತೋಂಟದಾರ್ಯ ಸ್ವಾಮಿಗಳನ್ನು ಹತ್ತಿರದಿಂದ ಬಲ್ಲವರಾಗಿದ್ದರು. ಸ್ವಾಮಿಗಳ ನಡವಳಿಕೆ, ಕಳಕಳಿಯನ್ನು ತಿಳಿದವರಾಗಿದ್ದರು. ಅವರಲ್ಲ ನಿರಾಣಿಯ ನೀಚ ಬುದ್ಧಿ ಕಂಡು ಹೇಸಿಗೆ ಪಟ್ಟುಕೊಂಡು ವಾಪಸ್ ಬಂದಿದ್ದಾರೆ.


ವಿಶಾಲಾಕ್ಷಿ ದೇವಿ

ಅರಣ್ಯ ಇಲಾಖೆ-ಒಡೆಯರ್ ಫ್ಯಾಮಿಲಿ
ಚಿರತೆ ಸಾಕುವ ಮೂರ್ಖರ ಕತೆ

-ಪಾರ್ವತೀಶ್


ಗಜೇಂದ್ರ ಸಿಂಗ್...

ಇದೊಂದು ದುರಂತ ಕತೆ.


ಬರೀ ದುರಂತ ಮಾತ್ರವಲ್ಲ, ದುರಹಂಕಾರ, ಮೂರ್ಖತನ, ಠೇಂಕಾರಗಳೆಲ್ಲಾ ಒಟ್ಟಿಗೆ ಸೇರಿದರೆ ಸಂಭವಿಸಬಹುದಾದ ಪ್ರಾಣಿಬಲಿ ಹಾಗೂ ನರಬಲಿಗಳ ಪ್ರಕರಣ.

ಮೈಸೂರಿನ ಒಡೆಯರ್ ರಾಜ ವಂಶಿಕರು ಹಾಗೂ ಕರ್ನಾಟಕದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಕೆ. ಸಿಂಗ್ ಸೇರಿಕೊಂಡು ಎರಡು ಚಿರತೆಗಳನ್ನು ಹಾಗೂ ಇಬ್ಬರು ಅಮಾಯಕ ಯುವಕರನ್ನು ಬಲಿ ತೆಗೆದುಕೊಂಡಿದ್ದಾರೆ.

ಅದೇ ದಿನ ದಾಳಿ ನಡೆಸಿದ ಚಿರತೆಯನ್ನು ಜೇನು ಕುರುಬರು ದೊಣ್ಣೆಗಳಿಂದ ಹೊಡೆದು ಕೊಂದು ಹಾಕಿದರು. ಈ ಸುದ್ದಿ ಮಾತ್ರ 'ಹುಲಿ ದಾಳಿಗೆ ಸಿಲುಕಿ ಚಿರತೆಯ ಸಾವು' ಎಂದು ಬೇರೆ ರೀತಿ ಪ್ರಕಟವಾಯಿತು.

ಇದರ ಹಿನ್ನೆಲೆ ವಿಚಿತ್ರವಾಗಿದೆ.

ಈಗ್ಗೆ ಎರಡು ವರ್ಷಗಳ ಹಿಂದೆ 2009 ರಲ್ಲಿ ಬಂಡೀಪುರ ರಕ್ಷಿತಾರಣ್ಯ ಪ್ರದೇಶದಲ್ಲಿ ಎರಡು ಚಿರತೆ ಮರಿಗಳು ಅರಣ್ಯ ಇಲಾಖೆಯವರಿಗೆ ಸಿಕ್ಕವು. ಇವರ ಕಣ್ಣಿಗೆ ಚಿರತೆ ಮರಿಗಳು ಕಂಡದ್ದೇ ತಪ್ಪಾಯಿತೆನ್ನುವಂತೆ ಇಲಾಖೆಯ ಜನ ಮರಿಗಳನ್ನು ಎತ್ತಿಕೊಂಡು ಫಾರೆಸ್ಟ್ ಆಫೀಸಿಗೆ ತಂದುಬಿಟ್ಟಿದ್ದರು.


ಕೆಂಪ


ರಾಮ

ವಾಸ್ತವವಾಗಿ ತಾಯಿ ಚಿರತೆ ಆಹಾರ ಹುಡುಕಿಕೊಂಡು ಹೋಗಿದ್ದಾಗ ಆ ಚಿರತೆ ಮರಿಗಳನ್ನು ನೋಡಿದವರು 'ಅನಾಥ ಮರಿ'ಗಳೆಂದು ತಪ್ಪು ತಿಳಿದಿದ್ದರು.

ಅದೇ ಏರಿಯಾದಲ್ಲಿ ಒಡೆಯರ್ ವಂಶದ ರಾಜಕುಮಾರಿ ವಿಶಾಲಾಕ್ಷಿ ದೇವಿ-ಗಜೇಂದ್ರ ಸಿಂಗ್ ದಂಪತಿಗಳ ಒಡೆತನದ 'ಟಸ್ಕರ್ ಟ್ರೈಲ್ಸ್' ಎಂಬ ಖಾಸಗಿ ರೆಸಾರ್ಟ್ ಇದೆ. ಅಲ್ಲೊಂದು ಖಾಸಗಿ ಬಂಗಲೆಯೂ ಇವರಿಗಿದೆ. ಕಾಡಿನಲ್ಲಿ ಚಿರತೆಮರಿ ಸಿಕ್ಕ ಸುದ್ದಿ ತಿಳಿದು ಇಲಾಖಾ ಕಚೇರಿಗೆ ಹೋದ ರಾಜಕುಮಾರಿ "ಮರಿಗಳನ್ನು ನನಗೆ ಕೊಡಿ, ನಾನು ಸಾಕ್ತೀನಿ" ಅಂದಿದ್ದಾರೆ. "ನನಗೆ ಅದರಲ್ಲಿ ಅನುಭವವೂ ಇದೆ ನಾನು ಪ್ರಾಣಿಪ್ರಿಯೆ" ಅಂತಲೂ ಈಕೆ ಕತೆ ಹೇಳಿದ್ದಾಳೆ. ಬಂಡೀಪುರದ ಶತದಡ್ಡ ಅರಣ್ಯಾಧಿಕಾರಿಗಳು ದೂಸರಾ ಮಾತಾಡದೆ ಚಿರತೆ ಮರಿಗಳನ್ನು ವಿಶಾಲಾಕ್ಷಿ ದೇವಿಯ ಕೈಗಿಟ್ಟು ಮನೆಗೆ ಹೋಗಿದ್ದಾರೆ. ವಾಸ್ತವವಾಗಿ ಈ ವಿಶಾಲಾಕ್ಷಿಗೆ ಚಿರತೆ ಮರಿಗಳನ್ನು ಸಾಕುವ ಬಗ್ಗೆ ಯಾವುದೇ ವೈಜ್ಞಾನಿಕ ವಿಧಾನಗಳೂ ತಿಳಿದಿಲ್ಲ, ಸುಮ್ಮನೆ ಶೋಕಿಗಾಗಿ ಚಿರತೆ ಮರಿ ಇಟ್ಟುಕೊಳ್ಳುವುದು ಅವರಿಗೆ ಬೇಕಿತ್ತು. ಇದಾದನಂತರ ಅರಣ್ಯ ಇಲಾಖೆಯ ಜೊತೆಗೆ ಒಂದಷ್ಟು ಪತ್ರ ವ್ಯವಹಾರ ನಡೆಯಿತು. ಚಿರತೆ ಮರಿಗಳು ಈ ಮುದಿ ರಾಜಕುಮಾರಿಯ ಕೈಗೆ ಹೋದ ಎಂಟು ತಿಂಗಳ ನಂತರ ರಾಜ್ಯ ವನ್ಯಜೀವಿ ಮುಖ್ಯ ಸಂರಕ್ಷಣಾಧಿಕಾರಿ ಬಿ.ಕೆ. ಸಿಂಗ್ ಚಿರತೆ ಮರಿಗಳನ್ನು ರಾಜವಂಶಿಕರು ಇರಿಸಿಕೊಳ್ಳಲು ಅನುಮತಿ ಕೊಟ್ಟ. ಕಾಡಿನಲ್ಲೇ ಬದುಕುವ ಬುಡಕಟ್ಟು ಜನ ಅಪ್ಪಿತಪ್ಪಿ ಒಂದು ಬಿದಿರು ಕೊಂಬೆ ಕಡಿದರೆ, ಜೇನು ಕಿತ್ತರೆ ಅವರನ್ನು ಹಿಡಿದು ಬಡಿದು ಕೇಸ್ ಹಾಕುವ ಅರಣ್ಯ ಇಲಾಖೆಯ ಅಧಿಕಾರಿಗಳು ವಿಶಾಲಾಕ್ಷಿ ದೇವಿಗೆ ಎರಡು ಚಿರತೆ ಮರಿಗಳನ್ನೇ ಬಳುವಳಿಯಾಗಿ ಕೊಟ್ಟಿದ್ದರು.

ಅದು ಕಾನೂನುಬಾಹಿರ ಎಂದು ಗೊತ್ತಿದ್ದರೂ ಸಹ!

ಹೀಗೆ ಬಂಡೀಪುರ ಹತ್ತಿರದ ರಾಜಕುಮಾರಿಯ ರೆಸಾರ್ಟ್‌ನಲ್ಲಿ ಎರಡು ವರ್ಷ ಹಾಲು ಕುಡಿಯುತ್ತಾ, ಚಿಕನ್, ಮಟನ್ ತಿನ್ನುತ್ತಾ ಚಿರತೆ ಮರಿಗಳು ಬೆಳೆದು ದೊಡ್ಡದಾದವು.

ರಾಜಕುಮಾರಿ ಅವುಗಳಿಗೆ ಶಾಕೊ ಮತ್ತು ಲೈಟ್ ಎಂದು ಹೆಸರು ಬೇರೆ ಇಟ್ಟಿದ್ದಳು. ಮೇಟಿಕೊಪ್ಪ ರೇಂಜ್‌ನಲ್ಲಿ ಆಗ ವಾಸುದೇವಮೂರ್ತಿ ಆರ್‌ಎಫ್‌ಓ ಆಗಿದ್ದ. ಈ ಮಧ್ಯೆ ಬಂಡೀಪುರ ರೇಂಜರ್ ಎ.ಎ. ಖಾನ್ ಎಂಬಾತ ಕಾಡಿನಲ್ಲಿ ಸಿಕ್ಕ ಇನ್ನೊಂದು ಚಿರತೆ ಮರಿಯನ್ನೂ ತಂದು ವಿಶಾಲಾಕ್ಷಮ್ಮನ ಕೈಗೆ ಒಪ್ಪಿಸಿದ್ದ. ಆಕೆ ಅದಕ್ಕೆ ಕಲರ್ ಎಂದು ಹೆಸರಿಟ್ಟು ಹಾಲು ಕುಡಿಸಲು ಶುರು ಮಾಡಿದ್ದಳು.

ಇದಕ್ಕೂ ಯಾರೂ ಅನುಮತಿ ಕೊಟ್ಟಿರಲಿಲ್ಲ.

ಈ ಮಧ್ಯೆ ಮಹಾನ್ ವನ್ಯಜೀವಿ ತಜ್ಞೆಯಂತೆ ಯೋಚಿಸಿದ ವಿಶಾಲಾಕ್ಷಿ ದೇವಿ ಬೆಳೆದ ಚಿರತೆ ಮರಿಗಳನ್ನು ಕಾಡಿಗೆ ಬಿಡುವುದಾಗಿ ನಿರ್ಧರಿಸಿ ಬಿ.ಕೆ. ಸಿಂಗ್‌ಗೆ ಒಂದು ಪತ್ರ ಬರೆದಳು. ಆ ಅವಿವೇಕಿ ಹಿಂದುಮುಂದು ಒಂದೂ ಯೋಚಿಸದೆ 'ಆಯಿತು ಕರಕೊಂಡು ಹೋಗಿ ಕಾಡಲ್ಲಿ ಬಿಟ್ಟು ಬಿಡಿ' ಅಂದುಬಿಟ್ಟ.


ಗುಂಡಿಗೆ ಬಲಿಯಾದ ಚಿರತೆ

ಈ ಅವಿವೇಕಿಗಳಿಗೆ ಮುಂದಿನ ಪರಿಣಾಮಗಳ ಬಗ್ಗೆ ಕಿಂಚಿತ್ತೂ ಯೋಚನೆ ಇರಲೇ ಇಲ್ಲ. ಮೊದಲು ವಿಶಾಲಾಕ್ಷಮ್ಮ ಏನು ಮಾಡಿದರೆಂದರೆ ಗೋಪಾಲಸ್ವಾಮಿ ಬೆಟ್ಟ ಪ್ರದೇಶದ ಒಂದೆಡೆ ವಿದ್ಯುತ್ ಬೇಲಿ ಹಾಕಿದ ಚಿಕ್ಕ ಪ್ರದೇಶದಲ್ಲಿ ಚಿರತೆ ಮರಿಗಳನ್ನು ಬಿಟ್ಟಳು. ಅಲ್ಲಿ ಮರಿಗಳಿಗೆ ಸರಿಯಾಗಿ ಊಟ ಕೊಡದೆ ಸತಾಯಿಸಿದರು. 'ಊಟ ಬೇಕಿದ್ದರೆ ಚಿರತೆಗಳೇ ಏನನ್ನಾದರೂ ಹುಡುಕಿ ಬೇಟೆಯಾಡಿ ತಿನ್ನಲಿ' ಎಂಬುದೇ ಆಕೆಯ ಯೋಚನೆಯಾಗಿತ್ತು. ಆದರೆ ಚಿರತೆ ಮರಿಗಳು ಟೈಮಿಗೆ ಸರಿಯಾಗಿ ಪಾರ್ಸೆಲ್ ಊಟ ತಿಂದು ಬೆಳೆದಿದ್ದವು. ಅಷ್ಟು ಬೇಗ ಬೇಟೆ

...7

ಕಳೆದ ಒಂದೂವರೆ ತಿಂಗಳುಗಳಿಂದ ಕರ್ನಾಟಕದ ಅನೇಕ ಭಾಗದಲ್ಲಿ 'ಅಲ್ಲಿ ಆನೆ ನುಗ್ಗಿತು, ಇಲ್ಲಿ ಹುಲಿ ಬಂತು, ಇನ್ನೆಲ್ಲೋ ಚಿರತೆ ಊರಿಗೆ ಬಂತು'ಎಂಬ ಪ್ರಕರಣಗಳು ಭಾರಿ ಸುದ್ದಿ ಮಾಡುತ್ತಿವೆಯಷ್ಟೇ. ನಮ್ಮ ಬಹುತೇಕ ಮೀಡಿಯಾಗಳು ಈ ಘಟನೆಗಳ ರೋಚಕ ಅಂಶವನ್ನಷ್ಟೆ ಬಿಂಬಿಸುತ್ತಾ ಇವೆ. ಆದರೆ ಈ ಘಟನೆಗಳ ಹಿಂದೆ ಕೆಲವರ ಮೂರ್ಖ ವರ್ತನೆಗಳೂ ಹೇಗೆ ಕಾರಣವಾಗಿವೆಯೆಂಬುದು ಜನರ ಗಮನಕ್ಕೆ ಬರದಂತೆ ನೋಡಿಕೊಳ್ಳಲಾಗಿದೆ.

ಕ್ರಿಮಿನಲ್ ಅಪರಾಧಕ್ಕೆ ಸಮನಾದ ಈ ಘಟನೆಗಳ ಹಿಂದೆ ಮೈಸೂರಿನ ಒಡೆಯರ್ ಫ್ಯಾಮಿಲಿಯ ಚಿಲ್ಲರೆ ಶೋಕಿಯ ಕೆಲವರಿದ್ದಾರೆ.

ವಿಶಾಲಾಕ್ಷಿ ದೇವಿ ಹಾಗೂ ಗಜೇಂದ್ರ ಸಿಂಗ್ ಅವರಲ್ಲಿಬ್ಬರು.

ಈಕೆ ರಾಜಕುಮಾರಿ, ಇನ್ನೊಂದು ರಾಜವಂಶದವನಾದ ಆತ ಆಕೆಯ ಪತಿ. ಕಾಡಿನಲ್ಲಿ ಸಿಕ್ಕ ಚಿರತೆ ಮರಿಗಳನ್ನು ಸಾಕಲು ಹೋಗಿ ಕೊನೆಗೆ ಅವನ್ನು ಕಾಡಿಗೆ ಬಿಡಲು ಯತ್ನಿಸಿ ರಾಮ ಎಂಬ ಕಾಡು ಕುರುಬನ ಸಾವಿಗೆ ಈ ರಾಜ ದಂಪತಿ ಕಾರಣರಾಗಿದ್ದಾರೆ.

ಮುಖ್ಯ ಅರಣ್ಯಾಧಿಕಾರಿ ಬಿ.ಕೆ. ಸಿಂಗ್ ಎಂಬ ಅವಿವೇಕಿಯೂ ಇದಕ್ಕೆ ಹೊಣೆಯಾಗಿದ್ದಾನೆ.

ಚಿರತೆ ಸಾಕ್ತೀನಿ ಅಂದಳು ರಾಜಕುಮಾರಿ

ಕಳೆದ ತಿಂಗಳ ಜೂನ್ 1 ರಂದು ಬಂಡೀಪುರ ನ್ಯಾಷನಲ್ ಪಾರ್ಕ್ ಬಳಿಯ ಲಕ್ಕೀಪುರದ ಜೇನು ಕುರುಬ ರಾಮ ಎಂಬುವನು ಚಿರತೆ ದಾಳಿಯೊಂದಕ್ಕೆ ಸಿಲುಕಿ ಸತ್ತ. ಈ ಸುದ್ದಿ ಯಾವ ಮಾಧ್ಯಮದಲ್ಲೂ ಪ್ರಕಟವಾಗಲಿಲ್ಲ.

ಒಡೆಯರ್ ಫ್ಯಾಮಿಲಿಯ ವಿಕೃತ ಪ್ರಾಣಿಪ್ರೀತಿ

ರಾಜಕುಮಾರಿ ವಿಶಾಲಾಕ್ಷಿ ದೇವಿಯ ನಕಲಿ ಪ್ರಾಣಿಪ್ರೀತಿಗೆ ಚಿರತೆಗಳು ಬಲಿಯಾಗುತ್ತಿರುವ ಘಟನೆ ಇದೇ ಮೊದಲೇನಲ್ಲ.

ಈಗ್ಗೆ ಹದಿಮೂರು ವರ್ಷಗಳ ಹಿಂದೆ ಈಕೆ ಇದೇರೀತಿ ಇನ್ನೆರಡು ಚಿರತೆ ಮರಿಗಳನ್ನು ಕಾನೂನುಬಾಹಿರವಾಗಿ ತನ್ನ ರೆಸಾರ್ಟ್‌ನಲ್ಲೇ ಸಾಕಿಕೊಂಡಿದ್ದಳು.

ಬುಲ್ಲಿ ಹಾಗೂ ಬೇಬಿ ಹೆಸರಿನ ಆ ಚಿರತೆಗಳಿಗೂ ಚಿಕನ್ ಮಟನ್ ಪಾರ್ಸೆಲ್ ಊಟ ತಿನ್ನಿಸಿ ಕೊನೆಗೊಂದು ದಿನ ಕಾಡಿಗೆ ಒಯ್ದು ಬಿಟ್ಟು ಬಂದಿದ್ದಳು. ಆದರೆ ಕಾಡಿನ



ಜೀವನದ ಅನುಭವವೇ ಇರದಿದ್ದ ಬುಲ್ಲಿ ಎರಡೇ ದಿನದಲ್ಲಿ ಸತ್ತು ಬಿತ್ತು, ಸಾಂಬಾರ (ದೊಡ್ಡ ಜಿಂಕೆ) ಒಂದರ ಕೊಂಬಿನ ಏಟು ತಿಂದು ಬುಲ್ಲಿ ಸತ್ತರೆ, ಬೇಬಿ ಎಂಬ ಚಿರತೆ ಏನಾಯಿತೋ ಯಾರಿಗೂ ಗೊತ್ತಾಗಲಿಲ್ಲ.

ಈ ಒಡೆಯರ್ ಫ್ಯಾಮಿಲಿಯವರಿಗೆ ತಾವಿನ್ನೂ ಮೈಸೂರು ರಾಜ್ಯದ ಮಾಲೀಕರೇನೋ ಎನ್ನುವ ಭ್ರಮೆಯಿದೆ. ಅಪ್ಪ ಜಯಚಾಮ ರಾಜೇಂದ್ರ ಒಡೆಯರ್‌ಗೆ ಕೂಡಾ ಆಗಿನ ಕಾಲದಲ್ಲಿ ಶಿಕಾರಿಗೆ ಹೋಗುವ ಚಟವಿತ್ತು. ಆತನ ಸೇವಕರು ಕಾಡಿನಲ್ಲಿ ಹುಲಿಯೊಂದನ್ನು ಹಿಡಿದು ಮರಕ್ಕೆ ಕಟ್ಟಿಹಾಕಿದ ಮೇಲೆ ಈ ಒಡೆಯರ್ ಅದರ ಹತ್ತಿರಹೋಗಿ ಗುಂಡು ಹಾರಿಸಿ ಕೊಂದು 'ವೀರಾಗ್ರಣಿ' ಎನಿಸಿಕೊಳ್ಳುತ್ತಿದ್ದ ಬಗ್ಗೆ ತಮಾಷೆಯ ಕತೆಗಳೇ ಇವೆ.

ಅದೇ ಜಯಚಾಮರಾಜೇಂದ್ರ ಒಡೆಯರ್ ಸ್ವತಂತ್ರ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ನ್ಯಾಷನಲ್ ಬೋರ್ಡ್ ಫಾರ್ ವೈಲ್ಡ್ ಲೈಫ್‌ಗೆ ಮೊದಲ ಅಧ್ಯಕ್ಷರಾಗಿದ್ದರು.

ಅದಿರಲಿ ಬಿಡಿ.

ಈಗ ನಮ್ಮಲ್ಲಿರುವ ಮಾಜಿ ರಾಜರು, ರಾಜಕುಮಾರಿಯರಿಗೆ ನಾವ್ಯಾರು ಬೆಲೆ ಕೊಡಬೇಕಿಲ್ಲ. ಇವರ್ಯಾರಿಗೂ ಕೊಂಬು, ಕಿರೀಟ ಇಲ್ಲ. ಹಾಗಿದ್ದಾಗಲೂ ಅರಣ್ಯ ಹಾಗೂ ವನ್ಯಜೀವಿ ರಕ್ಷಣೆ ಕಾಯ್ದೆ ಕಾನೂನುಗಳನ್ನು ಲೆಕ್ಕಿಸದೆ ವಿಶಾ ಲಾಕ್ಷಿ ದೇವಿಗೆ ಚಿರತೆ ಮರಿಗಳನ್ನು ಸಾಕಲು ಅರಣ್ಯಾಧಿಕಾರಿ ಗಳು ನೀಡುತ್ತಾರೆಂದರೆ ಏನು ಹೇಳುವುದು?

ಚಿರತೆ ದಾಳಿಯಲ್ಲಿ ಜೇನುಕುರುಬರ ರಾಮ ಸತ್ತರೂ ರಾಜಕುಮಾರಿ ವಿಶಾಲಾಕ್ಷಿ 'ನಾನು ಹೊಣೆಯಲ್ಲ' ಅನ್ನುತ್ತಿರುವುದು ವಿಚಿತ್ರವಾಗಿದೆ. ಈಕೆಯ ಬಂಡೀಪುರ ರೆಸಾರ್ಟ್‌ನಲ್ಲಿ ಜೇನು ಕುರುಬರ ಕೆಂಪನ ನೆಂಟ ಹೆಂಗಸೊಬ್ಬಳು ಕೆಲಸಕ್ಕಿದ್ದಾಳೆ. ಆಕೆಯ ಮೇಲೆ ರೇಗಾಡುತ್ತಾ 'ನೀವು ಕುರುಬರೆಲ್ಲ ಸೇರಿ ನನ್ನ ಚಿರತೇನಾ ಕೊಂದಿದ್ದೀರಾ. ನಿಮ್ಮ ಮೇಲೆ ಕೇಸ್ ಹಾಕಿಸುತ್ತೇನೆ' ಅನ್ನುತ್ತಿದ್ದಾಳೆ ಈ ರಾಜ್ಯವಿಲ್ಲದ ರಾಜಕುಮಾರಿ ವಿಶಾಲಾಕ್ಷಿ ದೇವಿ.

ಈಕೆಯ ವಿರುದ್ಧ ಕೇಸ್ ಹಾಕುವ ಬಗ್ಗೆ ವನ್ಯಜೀವಿಗಳ ಬಗ್ಗೆ ಕಾಳಜಿ ಇರುವವರು ಯಾರಾದರೂ ಪ್ರಯತ್ನಿಸಬಾರದಾ?

ಬಿ.ಕೆ.ಸಿಂಗ್ ಎಂಬ ಅವಿವೇಕಿ



ರಾಜ್ಯ ಅರಣ್ಯ ಇಲಾಖೆಯ ಚೀಫ್ ವೈಲ್ಡ್ ಲೈಫ್ ವಾರ್ಡನ್ ಆಗಿರುವ ಬಿ.ಕೆ. ಸಿಂಗ್‌ಗೆ ಬುದ್ಧಿ ನೆಟ್ಟಗಿದೆಯಾ ಎಂಬ ಪ್ರಶ್ನೆ ಕೇಳಬೇಕಿದೆ. ಕಾನೂನು ಬಾಹಿರವಾಗಿ ರಾಜಕುಮಾರಿ ವಿಶಾಲಾಕ್ಷಿಗೆ ಮೂರು ಚಿರತೆ ಮರಿಗಳನ್ನು ಸಾಕಲು ಅನುಮತಿ ನೀಡಿ ಅಮಾಯಕರ ಸಾವಿಗೆ ಸಿಂಗ್ ಸಹ ಹೊಣೆಗಾರನಾಗಿದ್ದಾನೆ. ಬಂಡೀಪುರದಲ್ಲಿ ಜೇನು ಕುರುಬರ ರಾಮ ಸತ್ತ ನಂತರ ಆತನ ಸಂಬಂಧಿಕರು ಹೋಗಿ 'ಏನಾದರೂ ಪರಿಹಾರ ಕೊಡಿ' ಎಂದು ಕೇಳಿದ್ದಾರೆ.

ಅದಕ್ಕೆ ಸಿಂಗ್ 'ಯಾವ ಪರಿಹಾರ, ನಿಮ್ಮಿಂದ ಕಾಡೆಲ್ಲ ಹಾಳಾಗ್ತಿದೆ. ನಿಮ್ಮನ್ನೆಲ್ಲ ಜೈಲಿಗೆ ಹಾಕಿಸ್ತೀನಿ' ಅಂತೆಲ್ಲ ಎಗರಾಡಿದ್ದಾನೆ.

ಸಿಂಗ್ ಈ ತರದ ಗಾಂಚಲಿಯ ಮಾತುಗಳನ್ನು ಇನ್ನು ಮುಂದಾದರೂ ನಿಲ್ಲಿಸಲಿ. ಕಾನೂನಿನ ಪ್ರಕಾರ ಸರಿಯಾದ ಕ್ರಮ ಕೈಗೊಂಡರೆ ಜೈಲಿಗೆ ಹೋಗುವುದು ಜೇನು ಕುರುಬರಲ್ಲ ಬದಲಾಗಿ ಇದೇ ಸಿಂಗ್ ಹಾಗೂ ರಾಜಕುಮಾರಿ ವಿಶಾಲಾಕ್ಷಿ ದೇವಿ ಎಂಬುದನ್ನು ಆತ ನೆನಪಿಟ್ಟುಕೊಂಡರೆ ಉತ್ತಮ. ಕರ್ನಾಟಕದ ಅರಣ್ಯ ಸಂಪತ್ತು ಪ್ರಾಣಿ ಸಂಕುಲಗಳೆಲ್ಲಾ ಈ ಸಿಂಗ್ ತನ್ನ ಖಾಸಗಿ ಆಸ್ತಿ ಎಂದು ತಿಳಿದಿರುವಂತಿದೆ.

ತರೀಕೆರೆ ವಿಶ್ವನಾಥನನ್ನು ಕೊಂದದ್ದು ಚಿರತೆಯಲ್ಲ ಅರಣ್ಯ ಇಲಾಖೆ!


ಮೊನ್ನೆ ಜೂನ್ ೬ರಂದು ತರೀಕೆರೆಯ ಕಾಲೇಜು ವಿದ್ಯಾರ್ಥಿ ವಿಶ್ವನಾಥನನ್ನು ಚಿರತೆಯೊಂದು ಕೊಂದು ಹಾಕಿತು. ಅದರ ಮರುದಿನವೇ ಅರಣ್ಯ ಇಲಾಖೆಯ ಜನ ಚಿರತೆಯನ್ನು ಗುಂಡಿಟ್ಟು ಕೊಂದುಹಾಕಿದರು.

ಗುಟ್ಟಿನ ಸಂಗತಿ ಏನೆಂದರೆ ಆ ಚಿರತೆಯೂ ಸಹ ಅರಣ್ಯಾಧಿಕಾರಿಯೊಬ್ಬರ ಮನೆಯಲ್ಲಿ ಬೆಳೆದಿದ್ದ ಚಿರತೆಯಾಗಿತ್ತು.

ಭದ್ರಾ ಅಭಯಾರಣ್ಯದ ಡಿಎಫ್‌ಓ ಲಿಂಗರಾಜ್ ಎಂಬುವವರಿಗೂ ಚಿರತೆ ಸಾಕುವ ಚಟವಿದೆ. ಕಾಡಿನಲ್ಲಿ ಹುಲಿ-ಚಿರತೆಗಳ ಮರಿಗಳೇನಾದರೂ ಕಂಡರೆ ಅವುಗಳನ್ನು ತಕ್ಷಣ ಹಿಡಿದು ಮನೆಗೆ ತಂದು ಹಾಲು ಕುಡಿಸಿ ನಾಯಿಮರಿಗಳ ರೀತಿ ಬೆಳೆಸುವ ದುಷ್ಟ ಹವ್ಯಾಸ ಈ ಅಧಿಕಾರಿಯದ್ದು. 2009ರಿಂದ ಲಿಂಗರಾಜ್ ಮನೆಯಲ್ಲಿ ಹಾಗೂ ಗ್ಯಾರೇಜ್‌ನಲ್ಲಿ ಹೀಗೆ ಐದು ಚಿರತೆ ಮರಿಗಳಿದ್ದವು. ಕೊನೆಗೊಂದು ದಿನ ಈ ಮೂರು ಚಿರತೆಗಳನ್ನು ಜೂನ್ ಮೊದಲ ವಾರದಲ್ಲಿ ಕಾಡಿಗೆ ಬಿಡಲಾಗಿದೆ. ಇವುಗಳಿಗೆ ಸರಿಯಾದ ಬೇಟೆಯ ತರಬೇತಿ ನೀಡದೆ, ಕಾಡಿನ ಬದುಕಿನ ಪರಿಚಯವನ್ನು ಮಾಡಿಸದೆ ಕಾಡಿನೊಳಗೆ ಬಿಟ್ಟ ಪರಿಣಾಮ ಕೆಟ್ಟದಾಯಿತು. ಜೂನ್ 6ರಂದು ತರೀಕೆರೆಯ ಉತ್ತರಬೀರನಹಳ್ಳಿಯಲ್ಲಿ ಕಾಲೇಜು ವಿದ್ಯಾರ್ಥಿ ವಿಶ್ವನಾಥನನ್ನು ಒಂದು ಚಿರತೆ ಕೊಂದು ತಿನ್ನಲು ಯತ್ನಿಸಿತು. ವಿಶ್ವನಾಥನ ರಕ್ಷಣೆಗೆಂದು ಹೋದ ಸೋದರ ಸೋಮನಾಥನನ್ನು ಚಿರತೆ ಕಚ್ಚಿ ಗಾಯಗೊಳಿಸಿತು. ನಂತರ ಜೂನ್ 17ರಂದು ಶಿವಮೊಗ್ಗ ಹತ್ತಿರ ಸುಬ್ರಮಣಿ ಹಾಗೂ ಶಿವನ ನಾಯಕ ಎಂಬುವವರ ಮೇಲೂ ಇನ್ನೊಂದು ಚಿರತೆ ದಾಳಿ ಮಾಡಿದೆ. ಈಗ ಅರಣ್ಯಾಧಿಕಾರಿಗಳು ಒಂದು ಚಿರತೆಯನ್ನು ಗುಂಡಿಟ್ಟು ಕೊಂದಿದ್ದಾರೆ. ಇನ್ನೆರಡು ಚಿರತೆಗಳು ಯಾವಾಗ ಜನ-ಜಾನುವಾರುಗಳ ಮೇಲೆ ದಾಳಿ ನಡೆಸಲಿವೆಯೋ ಗೊತ್ತಿಲ್ಲ, ಅಸಲಿ ವಿಚಾರ ಏನೆಂದರೆ ಸಾಕಿದ ಚಿರತೆಗಳನ್ನು ಹೀಗೆ ಕಾಡಿಗೆ ಬಿಡುತ್ತಿರುವ ಸಂಗತಿಯನ್ನು ಸಾರ್ವಜನಿಕರಿಗೆ ತಿಳಿಸಿಯೇ ಇಲ್ಲ, ಇದು ಗೊತ್ತಾದ ಮೇಲೆ ತರೀಕೆರೆಯ ಜನ ಅರಣ್ಯ ಇಲಾಖೆಯ ಜೀಪ್‌ಗೆ ಬೆಂಕಿ ಹಚ್ಚಿ ಕೈಗೆ ಸಿಕ್ಕ ಇಲಾಖೆಯವರಿಗೆ ಗೂಸಾ ಕೊಟ್ಟಿದ್ದಾರೆ. ಇವರಲ್ಲಿ ತಪ್ಪೇನೂ ಇಲ್ಲ.

ನೆಲಮಂಗಲದ ಗ್ಯಾಂಗ್‌ವಾರ್ ಚಿತ್ತನಗೆರೆ ಸೀನನ ಬಂದೂಕು ಪಡೆ!

• ರಾ.ಸೋಮನಾಥ್




ಚಿತ್ತನಗೆರೆ ಸೀನ

ನೆಲಮಂಗಲದ ಗ್ಯಾಂಗ್‌ವಾರ್ ವಿರುದ್ಧ ಪೊಲೀಸ್ ಸರ್ಜರಿ ಶುರುವಾಗಿದೆ!

ಚಿತ್ತನಗೆರೆ ಸೀನನ ಮೂವರು ಬಾಡಿಗಾರ್ಡ್‌ಗಳನ್ನು ಹಿಡಿದೊಯ್ದು ಅವರ ಕೈಗೆ ಸ್ಲೇಟು ಕೊಟ್ಟು ಜೈಲಿಗೆ ದಬ್ಬಿದ ಸಿಸಿಬಿ ಪೊಲೀಸರ ಹೊಸ ತಂತ್ರ ಕೇವಲ ನೆಲಮಂಗಲವನ್ನಷ್ಟೇ ಅಲ್ಲ; ಬೆಂಗಳೂರು ಪಾಪಕೂಪದ ಘಟಾನುಘಟಿಗಳನ್ನೂ ಥರಗುಟ್ಟಿಸಿಬಿಟ್ಟಿದೆ.

ಯುಪಿ, ಬಿಹಾರದಿಂದ ಬಂದೂಕುಧಾರಿ ಗನ್‌ಮನ್‌ಗಳನ್ನು ಮಾಸಿಕ ಸಂಬಳಕ್ಕೆ ನೇಮಿಸಿಕೊಂಡು ಪೋಸ್ ಕೊಡುತ್ತಿದ್ದ ಡಾನ್‌ಗಳಿಗೆ ಇದು ಪೊಲೀಸರು ಕೊಟ್ಟ ಶಾಕ್ ಟ್ರೀಟ್‌ಮೆಂಟು!



ಚಿತ್ತನಗೆರೆ ಶಂಕ್ರ

ಚಿತ್ತನಗೆರೆ ಸೀನ ಎಸ್ಕೇಪಾಗಿದ್ದಾನೆ. ತಿಂಗಳ ಹಿಂದೆ ಅಂದರೆ ಕಳೆದ ಜೂನ್ 12 ರಂದು ಮೈಸೂರು ಜೈಲಿಂದ ಜಾಮೀನು ಪಡೆದು ಹೊರಬಿದ್ದ ಸೀನನ ಮೇಲೆ ಹೊಸ ಆರೋಪಗಳಿರಲಿಲ್ಲ. ಹಿಂದಿದ್ದ ಕೇಸುಗಳ ಹೊರತಾಗಿ ಜೈಲಿಂದ ಬಂದ ನಂತರ ಆತ ಯಾವುದೇ ದುಷ್ಕೃತ್ಯಕ್ಕೂ ಕೈಹಾಕಿಲ್ಲ. ಇನ್ನು ಕೇವಲ ಮೂರು ದಿನ ಕಳೆದರೆ ನೆಲಮಂಗಲದಲ್ಲೊಂದು ಪತ್ರಿಕಾಗೋಷ್ಠಿ ಕರೆದು ತಾನು ಇನ್ನೆಂದೂ ಅಪರಾಧ ಎಸಗುವುದಿಲ್ಲವೆಂದೂ ನ್ಯಾಯಮಾರ್ಗದಲ್ಲೇ ನಡೆಯುತ್ತೇನೆಂದೂ ತನ್ನ ಪಾಡಿಗೆ ತನ್ನನ್ನು ಬದುಕಲು ಅವಕಾಶ ಕಲ್ಪಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಮನವಿ ಸಲ್ಲಿಸುತ್ತೇನೆಂದೂ ಸೀನ ನಿರ್ಧರಿಸಿದ್ದ.

ಜೈಲಿಂದ ಬಂದವನು ತನ್ನ ಪರಮಾಪ್ತ ಬಂಡೆ ಮಂಜನ ಮನೆಯಿರುವ ಸೊಂಡೆಕೊಪ್ಪ-ತಾವರೆಕೆರೆ ರಸ್ತೆಯ ಗಣೇಶನ ಗುಡಿ ಏರಿಯಾದ bisse ಫ್ಯಾಕ್ಟರಿ ಪಕ್ಕದಲ್ಲೇ ಮನೆಯೊಂದನ್ನು ಖರೀದಿಸಿದ್ದ. ಪಕ್ಕದಲ್ಲೇ ಬಂಡೆ ಮಂಜನ ಅಡ್ಡೆಯಿದೆಯಾದರೂ ಆತನ ರಕ್ಷಣೆಗಿರುವ ಸಶಸ್ತ್ರಧಾರಿ ಬೆಂಗಾವಲು ಪಡೆಯನ್ನೇ ತಾನೂ ಬಳಸಿಕೊಳ್ಳಬಹುದೆಂದು ಲೆಕ್ಕ ಹಾಕಿದ್ದ. ಹೊಸ ಮನೆಗೆ ರಹಸ್ಯವಾಗಿ ಸೀಸಿ ಟೀವಿ ಅಳವಡಿಸಿದ್ದ. ಕಿಟಕಿ, ಬಾಗಿಲು, ಮಹಡಿ, ಕಾಂಪೌಂಡು ಎಲ್ಲಕ್ಕೂ ಸೇರಿಸಿ ಬಲವಾದ ಕಬ್ಬಿಣದ ಗ್ರೀಲ್ ಹಾಕಿಸಿಕೊಂಡ. ಪೊಲೀಸ್ ಠಾಣೆ, ಕೋರ್ಟು, ಕಚೇರಿಗಳಿಗೆ ನಾಲ್ಕಾರು ಗಾಡಿಗಳಲ್ಲಿ ಬೆಂಗಾವಲು ಪಡೆ ಕಟ್ಟಿಕೊಂಡೇ ಓಡಾಡಿದ.


ಬಂಡೆ ಮಂಜನ ಬಂದೂಕುಧಾರಿ ಪಡೆಯನ್ನು ಜೊತೆಹಾಕಿಕೊಂಡು ಪ್ರಾಣ ಉಳಿಸಿಕೊಳ್ಳುವ ಸೀನನ ಲೆಕ್ಕಾಚಾರವೇ ಒಂದಾದರೆ ಪೊಲೀಸರ ಲೆಕ್ಕಾಚಾರವೇ ಬೇರೆಯಾಗಿತ್ತು. ಜುಲೈ 19 ರ ಬೆಳಿಗ್ಗೆ ಕ್ರೈಮ್ ಡಿಸಿಪಿ ಕೃಷ್ಣಂರಾಜು ಮತ್ತು ಸಿಸಿಬಿಯ ಎಸಿಪಿ ನ್ಯಾಮೇಗೌಡರ ತಂಡ ಸೀನ ಮತ್ತು ಬಂಡೆಮಂಜರ ಅಡ್ಡೆಯನ್ನು ಇನ್ನಿಲ್ಲದಂತೆ ಮುತ್ತಿಗೆ ಹಾಕಿತು. ಸಿಕ್ಕಿದ್ದು ಮಾತ್ರ ಬಡಪಾಯಿ ಗನ್‌ಮನ್‌ಗಳು!

ದೆಹಲಿಯ ಶಿಯೋಕುಮಾರ್ ತಿವಾರಿ, ಉತ್ತರ ಪ್ರದೇಶದ ಅಬ್ದುಲ್ ಹಮೀದ್ ಖಾನ್ ಮತ್ತು ಬಿಜೇಂದ್ರ ಕುಮಾರ್ ಸದ್ಯ ಜೈಲುಪಾಲಾಗಿದ್ದಾರೆ. ಅವರ ಬಳಿಯಿದ್ದ ಎರಡು ಪಿಸ್ತೂಲು ಮತ್ತೊಂದು ರೈಫಲ್ ಪೊಲೀಸರ ವಶವಾಗಿದೆ. ಇಲ್ಲಿ ಪೊಲೀಸ್ ತಂತ್ರ ಹೇಗಿದೆಯೆಂದರೆ; ಗನ್‌ಮನ್‌ಗಳ ಬಳಿಯಿದ್ದ ಪಿಸ್ತೂಲು, ರೈಫಲ್‌ಗಳನ್ನು ರೌಡಿ ಸೀನನಿಗೆ ಮಾರಲು ತಂದಿದ್ದೆಂದೂ ಆ ಕಾರಣಕ್ಕೇ ಅವರನ್ನು ಬಂಧಿಸಲಾಯಿತೆಂದೂ, ಸೀನ ತನ್ನ ಕಡುವೈರಿ ಚಿತ್ತನಗೆರೆ ಶಂಕ್ರ ಮತ್ತು ಪೊಲೀಸರ ಮೇಲೆ ದಾಳಿ ನಡೆಸಲು ಶಸ್ತ್ರಾಸ್ತ್ರಗಳನ್ನು ತರಿಸಿಕೊಂಡಿದ್ದನೆಂದೂ ತಿರುಮಂತ್ರ ಹಾಕಿಬಿಟ್ಟರು.

ಇದು ಸೀನನಿಗಷ್ಟೇ ಅಲ್ಲ, ಆತನ ಸಂಬಂಧಿ ಬಂಡೆ ಮಂಜನಿಗೂ ಆದ ಮರ್ಮಾಘಾತ. ಬೆಂಗಳೂರು ಭೂಗತ ಲೋಕದ ಕೆಲ ಡಾನ್‌ಗಳು ಈ ರೀತಿ ಯುಪಿ-ಬಿಹಾರ್‌ಗಳಿಂದ ಲೈಸೆನ್ಸ್‌ಧಾರಿ ಗನ್‌ಮನ್‌ಗಳನ್ನು ತಿಂಗಳ ಸಂಬಳಕ್ಕೆ ನೇಮಿಸಿಕೊಂಡು ಸಲೀಸಾಗಿ ಬಚಾವಾಗಬಹುದೆಂಬ ಲೆಕ್ಕಾಚಾರವನ್ನೇ ಪೊಲೀಸರು ಬುಡಮೇಲು ಮಾಡಿದ್ದಾರೆ. ನಾಳೆ ಬೇರೆ ಯಾರೇ ರೌಡಿ ಲೈಸೆನ್ಸ್‌ಧಾರಿ ಅಂಗರಕ್ಷಕರನ್ನು ಇಟ್ಟುಕೊಂಡು ಮೆರೆಯಲು ಹೊಂಟನೆಂದರೆ; ಅಂಥ ಬಾಡಿಗಾರ್ಡ್‌ಗಳ ಸಮೇತವೇ ಬಂಧಿಸಿ ಪೊಲೀಸರು ಜೈಲಿಗೆ ದಬ್ಬುತ್ತಾರೆ.

ಅಷ್ಟಕ್ಕೂ, ಚಿತ್ತನಗೆರೆ ಸೀನನನ್ನೇ ಪೊಲೀಸರು ಗುರಿಯಾಗಿಸಿಕೊಂಡಿದ್ದಕ್ಕೆ ಕಾರಣ ಮತ್ತು ಹಿನ್ನೆಲೆಯೇ ಬೇರೆಯಿದೆ. ಅದು ನೆಲಮಂಗಲದ ಪಾಲಿಟಿಕ್ಸ್. ಸೀನನ ಕಡುವೈರಿ ಚಿತ್ತನಗೆರೆ ಶಂಕ್ರ ಕೂಡ ಇಷ್ಟರಲ್ಲೇ ಜಾಮೀನು ಪಡೆದು ಜೈಲಿಂದ ಹೊರಬರುವ ಸೂಚನೆ ಪೊಲೀಸರಿಗೆ ಸಿಕ್ಕಿದೆ. ಸೀನ ಮತ್ತು ಬಂಡೆ ಮಂಜ ಜಂಟಿಯಾಗಿ ತಮ್ಮದೇ ಬಂದೂಕುಧಾರಿ ಬೆಂಗಾವಲು ಪಡೆಯೊಂದಿಗೆ ರೌಂಡಿಂಗ್ ಶುರುಹಚ್ಚಿಕೊಂಡರೆಂದರೆ ಮತ್ತೊಂದೆಡೆ ಶಂಕ್ರ ಮತ್ತು ಹಟ್ಟಿ ಮಂಜ ಸೇರಿಕೊಂಡು ನೆಲಮಂಗಲದಲ್ಲಿ ರೋಡ್ ಷೋ ಶುರು ಹಚ್ಚಿಕೊಳ್ಳುತ್ತಾರೆ. ಯಾವ ಗಳಿಗೆಯಲ್ಲಿ ಎರಡೂ ದುಷ್ಮನ್ ಪಡೆಗಳು ಮುಖಾಮುಖಿಯಾದರೂ ಅನಾಹುತ ತಪ್ಪಿದ್ದಲ್ಲ.

ಇದು ಪೊಲೀಸರು ಮೇಲ್ನೋಟಕ್ಕೆ ನೀಡುವ ಕಾರಣವಾದರೂ ಹಕೀಕತ್ತು ಬೇರೆಯದೇ ಇದೆ. ಸೀನ ಜೈಲಿಂದ ಹೊರಬೀಳುತ್ತಿದ್ದಂತೆ ಸಿಸಿಬಿ ಪೊಲೀಸರ ಮತ್ತೊಂದು ತಂಡ ನಟೋರಿಯಸ್ ಡಕಾಯಿತಿ ಗ್ಯಾಂಗ್ ಒಂದರ ಹಿಂದೆ ಬಿದ್ದಿತ್ತು. ಅದು ಚಾಮರಾಜಪೇಟೆಯ ಕುಖ್ಯಾತ ಪಾತಕಿ ಡೋಬಿಘಾಟ್ ರಾಮ ಉರ್ಫ್ ಕೆಂದಾರಾಮನ ಗ್ಯಾಂಗು. ಇಲ್ಲಿಗೆ ಎರಡು ವರ್ಷದ ಹಿಂದೆ ಡೋಬಿಘಾಟ್ ರಾಮ ಬಿನ್ನಿಮಿಲ್ ಬಳಿ ಮುಗ್ಧ ಯುವಕನೊಬ್ಬನನ್ನು ಕೊಚ್ಚಿ ಹಾಕಿದ್ದ. ಕಾರಣ ಆತ ಕೋರ್ಟಿನಲ್ಲಿ ಇದೇ ರಾಮನಿಂದ ಕೊಲೆಯಾಗಿದ್ದ ತನ್ನ ಅಣ್ಣನ ಪರ ಸಾಕ್ಷಿ ಹೇಳಿದ್ದ. ಅದೊಂದು ಲವ್ ಕೇಸಿನ ವಿಷಯದಲ್ಲಿ ನಡೆದ ಸರಣಿ ಕೊಲೆಯಾಗಿತ್ತು.



ಮೊದಲು ಅಣ್ಣನನ್ನು ಮುಗಿಸಿ ನಂತರ ಅಣ್ಣನ ಪರ ಕೋರ್ಟಿಗೆ ಬಂದು ಸಾಕ್ಷಿ ಹೇಳಿದ ತಮ್ಮನನ್ನೂ ಕೊಂದು ಹಾಕಿದ ಡೋಭಿಘಾಟ್ ರಾಮನಿಗೆ ಕೋರ್ಟು ಜೀವಾವಧಿ ಶಿಕ್ಷೆ ವಿಧಿಸಿದೆ. ಅದ್ಯಾವ ಗಳಿಗೆಯಲ್ಲಿ ಜೈಲಲ್ಲಿ ಈ ರಾಮನಿಗೂ ಚಿತ್ತನಗೆರೆ ಸೀನನಿಗೂ ಪರಿಚಯ ವಾಯಿತೋ ಗೊತ್ತಿಲ್ಲ. ಆದರೆ ಜೈಲೊಳಗಿದ್ದೇ ರಾಮ ತನ್ನ ಶಿಷ್ಯರನ್ನು ಬಿಟ್ಟು ಬೆಂಗಳೂರಿನ ವಿವಿಧೆಡೆ ರಾಬರಿ ಡಕಾಯಿತಿ ಶುರು ಹಚ್ಚಿಕೊಂಡ. ಇದು ಹೇಗೋ ಸಿಸಿಬಿ ಪೊಲೀಸರ ಕಿವಿ ಮುಟ್ಟಿ ಇಲ್ಲಿಗೆ ವಾರದ ಹಿಂದೆ ರಾಮನ ಇಡೀ ಡಕಾಯಿತಿ ಗ್ಯಾಂಗನ್ನು ಪೊಲೀಸರು ಹಿಡಿದಿದ್ದಾರೆ.

ಸಿಕ್ಕಿಬಿದ್ದವರ ಪೈಕಿ ಉಮೇಶ್ ಎಂಬಾತ ರಾಮನ ಖಾಸಾ ತಮ್ಮನಾದರೆ ಜೈರಾಮ ಆತನ ಅಕ್ಕನ ಮಗ!

ಸಿಕ್ಕಿಬಿದ್ದ ಗ್ಯಾಂಗ್ ಮಾಡಿದ ಯಡವಟ್ಟೆಂದರೆ ತಾವು ಸದ್ಯ ಮೈಸೂರು ಜೈಲಲ್ಲಿರುವ ಮಚ್ಚನ ಶಿಷ್ಯ ಕೋತಿರಾಮನ ಶಿಷ್ಯರೆಂದು ಸುಳ್ಳು ಹೇಳಿದ್ದು. ಕೋತಿ ರಾಮನೇ ಬೇರೆ ಡೋಬಿಘಾಟ್ ರಾಮನೇ ಬೇರೆ. ಪೊಲೀಸರಿಗಿದು ಚೆನ್ನಾಗಿ ಗೊತ್ತಿತ್ತು. ಡೋಬಿಘಾಟ್ ರಾಮನ ಜೊತೆ ಚಿತ್ತನಗೆರೆ ಸೀನನಿಗೆ ದೋಸ್ತಿಯಿದ್ದದ್ದು ಕೂಡ ಪೊಲೀಸರಿಗೆ ಪಕ್ಕಾ ಮಾಹಿತಿಯಿತ್ತು. ಸಿಕ್ಕಿಬಿದ್ದ ರಾಮನ ಶಿಷ್ಯರು ಪೊಲೀಸರ ದಿಕ್ಕು ತಪ್ಪಿಸುವುದಕ್ಕೋ ಅಥವಾ ಪೊಲೀಸರಿಂದ ಬಚಾವಾಗುವುದಕ್ಕೋ ತಾವು ಉದ್ಯಮಿಯೊಬ್ಬನ ಮೇಲೆ ಅಟ್ಯಾಕ್ ಮಾಡಿ ಕಿತ್ತುಕೊಂಡಿದ್ದ ರಿವಾಲ್ವರನ್ನು ಚಿತ್ತನಗೆರೆ ಸೀನನ ಕೈಗೆ ಕೊಟ್ಟಿದ್ದೇವೆಂದು ಕತೆ ಕಟ್ಟಿದ್ದರು.

ಸೀನನ ಮೇಲೆ ಸಿಸಿಬಿ ಪೊಲೀಸರ ಕಣ್ಣು ಬಿದ್ದಿದ್ದೇ ಆವಾಗ. ಜುಲೈ 16 ರ ಶನಿವಾರ ಸಂಜೆ ಬೆಂಗಳೂರು ಗ್ರಾಮಾಂತರ ಎಸ್.ಪಿ. ಪ್ರಕಾಶ್ ನೇತೃತ್ವದಲ್ಲಿ ಐದು ಜೀಪುಗಳ ತುಂಬ ಪೊಲೀಸರನ್ನು ಕರೆದೊಯ್ದಿದ್ದೇ ಸೀನ ಮತ್ತು ಬಂಡೆಮಂಜರ ಮನೆಯನ್ನು ಜಾಲಾಡಿಬಿಟ್ಟರು. ಬಂದ ಪೊಲೀಸರಿಗೆ ಎಂಥಾ ನಿರಾಶೆಯಾಗಿತ್ತೆಂದರೆ ಬಂಡೆ ಮಂಜನ ಮನೆಯಲ್ಲಿದ್ದ ಎರಡು ಕೇಸ್ ವಿಸ್ಕಿ ಬಾಟಲುಗಳನ್ನು ಬಿಟ್ಟರೆ ಗನ್ನು-ರಿವಾಲ್ವರ್ ಏನೆಂದೂ ಸಿಗಲೇ ಇಲ್ಲ. ಸಿಕ್ಕ ವಿಸ್ಕಿ ಬಾಟಲುಗಳನ್ನೇ ಜಪ್ತಿ ಮಾಡಿ ಬಂಡೆ ಮಂಜನ ವಿರುದ್ಧ ಅಬಕಾರಿ ಕೇಸೊಂದನ್ನು ಹಾಕಿ ಎಸ್.ಪಿ. ಪ್ರಕಾಶ್ ಕೈತೊಳೆದುಕೊಂಡಿದ್ದಾರೆ.

ವಿಪರ್ಯಾಸವೆಂದರೆ ಯಾವತ್ತೂ ತನ್ನ ಮನೆ ಬಿಟ್ಟು ಹೊರಬಾರದ ಚಿತ್ತನಗೆರೆ ಸೀನ ಆವತ್ತು ಪೊಲೀಸ್ ರೇಡಾಗುವ ಹೊತ್ತಿಗೆ ಸರಿಯಾಗಿ ಪರಾರಿಯಾಗಿಬಿಟ್ಟಿದ್ದ. ಆದರೆ ಬಂಡೆಮಂಜನ ಬೆಂಗಾವಲಿಗಿದ್ದ ಸಶಸ್ತ್ರಧಾರಿ ಬಾಡಿಗಾರ್ಡ್‌ಗಳನ್ನು ಆವತ್ತು ಕಂಡೂಕಾಣದಂತೆ ಪೊಲೀಸರು ಇದ್ದುಬಿಟ್ಟಿದ್ದರು. ಏಕೆಂದರೆ ಬಂಡೆಮಂಜ ಆ ಹೊತ್ತಿಗಾಗಲೇ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಕಂಡು ತನ್ನ ಪ್ರಾಣರಕ್ಷಣೆಗೆಂದು ಬಂದೂಕುಧಾರಿ ಬಾಡಿಗಾರ್ಡ್‌ಗಳನ್ನು ನೇಮಿಸಿಕೊಳ್ಳುತ್ತೇನೆಂದು ಅನುಮತಿ ಪಡೆದಿದ್ದ.

ಪೊಲೀಸರು ಬಂಡೆ ಮಂಜನಿಗೆ ಬಂದೂಕುಧಾರಿ ಬೆಂಗಾವಲು ಇಟ್ಟುಕೊಳ್ಳಲು ಅನುಮತಿಸಿದ್ದೇ ಬೇರೆ ಕಾರಣಕ್ಕೆ. ಆ ಹೊತ್ತಿಗಾಗಲೇ ಆತನ ವಿರುದ್ಧ ಶಂಕ್ರ-ಹಟ್ಟಿಮಂಜನ ಗ್ಯಾಂಗ್ ಮೂರು ಬಾರಿ ಕೊಲೆಯತ್ನಕ್ಕೆ ಕೈಹಾಕಿತ್ತು. ಶುರುವಿನಲ್ಲಿ ಬ್ರೇಕ್ ಜಗ್ಗಿಯ ಹುಡುಗರು ದಾಳಿಯಿಟ್ಟರೆ ಎರಡನೇ ಬಾರಿ ಹಟ್ಟಿ ಮಂಜನ ಹಂತಕ ಪಡೆ ಬಾಂಬ್ ದಾಳಿ ನಡೆಸಿ ಲಾಯರ್ ರವಿಯನ್ನೇ ಮಂಜನೆಂದು ಭಾವಿಸಿ ಕೊಂದು ಹಾಕಿತ್ತು. ಮೂರನೇ ಬಾರಿ ಮಂಜ ನೆಲಮಂಗಲದ ಜಯನಗರದಲ್ಲಿ ಶಂಕ್ರನ ಬಂಟ ಮುನಿಯ ಗ್ಯಾಂಗ್‌ನಿಂದ ಬಚಾವಾಗಿದ್ದ.


ಈ ರೀತಿ ಪದೇಪದೆ ದುಷ್ಮನ್‌ಗಳ ಕೊಲೆಯತ್ನ ದಿಂದ ಪಾರಾಗುತ್ತಲೇ ಇದ್ದ ಇದೆಲ್ಲಕ್ಕೂ ಪರಿಹಾರ ವೆಂಬಂತೆ ಜೆಡಿಎಸ್ ತೊರೆದು ಬಿಜೆಪಿ ಸೇರಿಕೊಂಡ. ಏಕೆಂದರೆ ಬಂಡೆಮಂಜನ ಕಡುವೈರಿ ಬಿನ್ನಮಂಗಲ ಕೃಷ್ಣಪ್ಪ ಕೂಡ ಈಗಾಗಲೇ ಜೆಡಿಎಸ್‌ಗೆ ಬಂದಾಗಿತ್ತು. ಬಿನ್ನಮಂಗಲ ಕೃಷ್ಣಪ್ಪನ ವಿರುದ್ಧ ಜಿಲ್ಲಾ ಪಂಚಾಯ್ತಿಗೆ ತನ್ನ ಸಂಬಂಧಿ ಕರಿವರದಯ್ಯನನ್ನು ಬಿಜೆಪಿ ಟಿಕೆಟ್ಟಿನಿಂದ ನಿಲ್ಲಿಸಿದ ಬಂಡೆಮಂಜ ಮತ್ತು ಹ್ಯಾಡಾಳು ದೇವಿಯ ಮಗ ಹರ್ಷ ಏನೇ ಪ್ರಯತ್ನಪಟ್ಟರೂ ಬಿನ್ನಮಂಗಲ ಕೃಷ್ಣಪ್ಪನನ್ನು ಸೋಲಿಸಲಾಗಲಿಲ್ಲ.

ಹಾಗಂತ ಬಂಡೆ ಕೈಕಟ್ಟಿ ಕೂರಲಿಲ್ಲ. ನೆಲಮಂಗಲದ ಒಕ್ಕಲಿಗರ ಸಂಘಕ್ಕೆ ಅಧ್ಯಕ್ಷನಾದ. ಆತನಕ ನೆಲಮಂಗಲದ ಒಕ್ಕಲಿಗರ ಅಧಿನಾಯಕನಂತಿದ್ದ ಬಿಎಮ್ಮೆಲ್‌ಗೆ ಇದು ದೊಡ್ಡ ಪೆಟ್ಟು. ಆದರೆ ಇದೆಲ್ಲವನ್ನೂ ತನ್ನ ರಕ್ಷಣೆಗೆಂದು ಬಂಡೆ ಮಂಜ ಮಾಡಿಕೊಂಡಿದ್ದ. ತಾನು ಅಧಿಕಾರಸ್ಥ ಬಿಜೆಪಿಯ ನಾಯಕನಷ್ಟೇ ಅಲ್ಲ, ಒಕ್ಕಲಿಗರ ಸಂಘಕ್ಕೂ ಅಧ್ಯಕ್ಷನಾದ್ದರಿಂದ ತನಗೆ ಗನ್‌ಮನ್ ಸಮೇತ ರಕ್ಷಣೆಗೆ ಅನುಮತಿ ನೀಡುವಂತೆ ಪೊಲೀಸ್ ವರಿಷ್ಠ ಎಸ್.ಪಿ. ಪ್ರಕಾಶ್‌ರ ಮನವೊಲಿಸಿದ್ದ.

ಯಾವತ್ತು ಸೀನ ಜೈಲಿಂದ ಬಂದು ಬಂಡೆಮಂಜನ ಗನ್‌ಮನ್‌ಗಳನ್ನೇ ಜೊತೆ ಹಾಕಿಕೊಂಡು ಓಡಾಡಲಾರಂಭಿಸಿದನೋ ಪೊಲೀಸರ ಕಣ್ಣುಬಿದ್ದಿದೆ. ಜೊತೆಗೆ ಬೆಂಗಳೂರಿನಲ್ಲಿ ಸೆರೆಸಿಕ್ಕ ಡೋಬಿಘಾಟ್ ರಾಮನ ಶಿಷ್ಯರ ಪಾಪವೂ ಸೀನನ ತಲೆಗೆ ಸುತ್ತಿಕೊಂಡಿದೆ. ಬಹುಶಃ ರೇಡಿಗೆ ಬಂದ ಪೊಲೀಸರ ಜೊತೆ ಸೀನ ಮಾತಾಡಿದ್ದರೂ ಸರಿಹೋಗುತ್ತಿತ್ತು. ಯಾವತ್ತು ಪೊಲೀಸರ ಕಣ್ಣುತಪ್ಪಿಸಿ ಪರಾರಿಯಾದನೋ ಡೋಬಿಘಾಟ್ ರಾಮನ ಗ್ಯಾಂಗಿನ ಡಕಾಯಿತಿಗೆ ಸೀನ ಕೂಡ ಕುಮ್ಮಕ್ಕು ಕೊಟ್ಟಿರಬಹುದೆಂಬ ಪೊಲೀಸರ ಗುಮಾನಿಗೆ ಪುಷ್ಠಿ ಸಿಕ್ಕಿದೆ. ಜುಲೈ 19 ರ ಮಂಗಳವಾರ ಬೆಳ್ಳಂಬೆಳಿಗ್ಗೆಯೇ ಕ್ರೈಮ್ ಡಿಸಿಪಿ ಕೃಷ್ಣಂರಾಜು ಮತ್ತು ಸಿಸಿಬಿಯ ಎಸಿಪಿ ನ್ಯಾಮೇ ಗೌಡರ ತಂಡ ಸೊಂಡೆಕೊಪ್ಪ ರಸ್ತೆಯ ಚಿತ್ತನಗೆರೆ ಸೀನನ ಅಡ್ಡೆಗೆ ಲಗ್ಗೆಯಿಟ್ಟಿದೆ.

ಈ ಬಾರಿಯೂ ಸೀನ ಎಸ್ಕೇಪಾಗಿದ್ದ. ಅಂಥಾದ್ದೇನೂ ಇಲ್ಲದೇ ಇದ್ದರೆ ಏಕೆ ಪೊಲೀಸರ ಕಣ್ಣುತಪ್ಪಿಸಿ ಭೂಗತ ನಾದ ಎಂಬ ಪೊಲೀಸರ ವಾದಕ್ಕೆ ಸೀನನ ದುಡುಕು ಬುದ್ಧಿಯೇ ಸಮರ್ಥನೆಯಂತಿತ್ತು. ಬಂಡೆ ಮಂಜನ ಬೆಂಗಾವಲು ಪಡೆಯ ಗನ್‌ಮನ್‌ಗಳನ್ನೇ ಎಳೆದೊಯ್ದು ಅವರ ಕೈಗೆ ಸ್ಲೇಟು ಕೊಟ್ಟು ಜೈಲಿಗೆ ದಬ್ಬಿದ್ದಾರೆ ಸಿಸಿಬಿ ಪೊಲೀಸರು.


ಗ್ರಹಚಾರ ಕೆಟ್ಟರೆ ಗರಿಕೆಯೂ ಹಾವಾಗಿ ಕಚ್ಚುತ್ತದೆಯಂತೆ. ಸೀನನ ಪಾಲಿಗೆ ಮಾಡಿದ ಪಾಪವೇ ಸೇಡಾಗಿ ಕಾಡುತ್ತಿದೆ.



ಹಟ್ಟಿ ಮಂಜ



ಬಂಡೆ ಮಂಜ




ಲಾಯರ್ ರವಿ



ಹರ್ಷ

ಮುಂಗಾರು ಮಳೆ ಕೃಷ್ಣಪ್ಪನ ಋಣಕ್ಕೆ ಬಿದ್ದು...!

ಸದ್ಯ ಯತಿರಾಜ್ ಎತ್ತಂಗಡಿಯಾಗಿ ಹೊಸ ಇನ್ಸ್‌ಪೆಕ್ಟರ್ ಆಗಿ ಬಂದ ಡಾ. ಪ್ರಕಾಶ್ ಇಡೀ ನೆಲಮಂಗಲಕ್ಕೆ ಎಂಥಾ ಬಿಸಿ ಮುಟ್ಟಿಸಿದ್ದಾರೆಂದರೆ; ಎರಡೂ ಗ್ಯಾಂಗುಗಳ ಯಾರೇ ಹುಡುಗರು ಸಿಕ್ಕರೂ ಎಳೆದು ತಂದು ರುಬ್ಬುತ್ತಿದ್ದಾರೆ. ವಿಶೇಷವಾಗಿ ಕಾಲೇಜುಗಳ ಪಡ್ಡೆ ಹುಡುಗರ ಕ್ರೈಮ್ ಖಯಾಲಿಯನ್ನು ಕಿತ್ತೆಸೆಯುವುದಕ್ಕೆ ಮೊದಲು ಆದ್ಯತೆಯಂತೆ. ಒಂದು ರೌಂಡ್ ಕಾಲೇಜು ಹುಡುಗರನ್ನು ಎಳೆದೊಯ್ದು ರಿಪೇರಿ ಮಾಡಿದ್ದಾಗಿದೆ.




ಜೈಲಿಂದ ಹೊರಬಿದ್ದ ಸೀನನನ್ನು ಕರೆಸಿದ್ದೇ 'ಬಾಲ ಬಿಚ್ಚಿದ ಅಂದ್ರೆ ನಾನೇ ಎನ್‌ಕೌಂಟರ್ ಮಾಡ್ತೀನಿ.....' ಎಂದು ವಾರ್ನ್ ಮಾಡಿದ ಇನ್ಸ್‌ಪೆಕ್ಟರ್ ಪ್ರಕಾಶ್ ಸದ್ಯ ನೆಲಮಂಗಲಕ್ಕೆ ಬಿಸಿ ಮುಟ್ಟಿಸಿರುವುದಂತೂ ಸತ್ಯ. ಇದೆಲ್ಲ ಲೆಕ್ಕ ಹಾಕಿಯೇ ಬಂಡೆಮಂಜ ಮತ್ತು ಹ್ಯಾಡಾಳು ದೇವಿಯ ಮಗ ಹರ್ಷ ಜೆಡಿಎಸ್ ತೊರೆದು ಬಿಜೆಪಿಗೆ ಬಂದಿದ್ದು. ಸೀನ ಕೂಡ ತಾನೂ ಬಿಜೆಪಿ ಎನ್ನುತ್ತಿದ್ದಾನೆ. ಆದರೆ ಬಿಜೆಪಿ ಮಟ್ಟಿಗೆ ಬಂಡೆ ಮಂಜ ಮತ್ತು ಸೀನರಿಗಿಂತ ಬಿಎಮ್ಮೆಲ್ ಕೃಷ್ಣಪ್ಪನೇ ಆಪ್ತ. ಏಕೆಂದರೆ ಹೆಸರಿಗೆ ಬಿಜೆಪಿಯಾದರೂ ಜೆಡಿಎಸ್‌ನ ಮತ್ತೊಬ್ಬ ನಾಯಕ ಮುಂಗಾರು ಮಳೆ ಕೃಷ್ಣಪ್ಪನ ಜೊತೆ ಹ್ಯಾಡಾಳು ದೇವಿ ಮಕ್ಕಳು ಮತ್ತು ಸೀನನಿಗೆ ಈಗಲೂ ಒಡನಾಟವಿದೆ.

ಮುಂಗಾರು ಮಳೆ ಕೃಷ್ಣಪ್ಪ ಜೆಡಿಎಸ್ ನಾಯಕ ಕುಮಾರಸ್ವಾಮಿಗೆ ಈಗಲೂ ಪರಮಾಪ್ತ. ಹಾಗಿದ್ದೂ ಗೃಹಮಂತ್ರಿ ಆರ್. ಅಶೋಕ್ ಜೊತೆ ಮುಂಗಾರು ಮಳೆ ಕೃಷ್ಣಪ್ಪನಿಗೆ ವ್ಯಾವಹಾರಿಕ ನಂಟಿದೆ. ಒಂದೆಡೆ ಅಶೋಕ್ ಮತ್ತೊಂದೆಡೆ ಕುಮಾರಸ್ವಾಮಿ ಇಬ್ಬರನ್ನೂ ಒಟ್ಟೊಟ್ಟಿಗೆ ಸಂಭಾಳಿಸುತ್ತಿರುವ ಮುಂಗಾರು ಮಳೆ ಕೃಷ್ಣಪ್ಪನ ಬೆನ್ನಿಗೆ ಸೀನ, ಬಂಡೆ ಮಂಜ, ಹ್ಯಾಡಾಳು ಮಕ್ಕಳು ಸದಾಕಾಲಕ್ಕೂ ಇರುತ್ತಾರೆಂಬುದು ಪೊಲೀಸರಿಗೆ ಚೆನ್ನಾಗಿ ಗೊತ್ತಿದೆ. ಮೇಲುನೋಟಕ್ಕೆ ಬಿಜೆಪಿಯಲ್ಲಿದ್ದು ಒಳಗೊಳಗೆ ಜೆಡಿಎಸ್ ಜೊತೆಗಿರುವ ಸೀನನ ಉಭಯ ಸಂಕಟವೇ ಆತನಿಗೆ ಮುಳುವಾಗಿದೆ.

ಈಟಿವಿ ಫಾರ್ ಸೇಲ್!

ಈಟಿವಿ ಕನ್ನಡ ಮಾರಾಟಕ್ಕಿದೆ!



ಮಾಲೀಕ ರಾಮೋಜಿರಾವ್ ಕೇವಲ ಕನ್ನಡ ಚಾನಲ್ ಅನ್ನು ಮಾತ್ರವಲ್ಲದೆ ತನ್ನ ಕೈಲಿರುವ ಒಟ್ಟು ಹನ್ನೊಂದು ಭಾಷೆಗಳ ಈಟಿವಿ ಚಾನಲ್‌ಗಳನ್ನು ಹೋಲ್‌ಸೇಲಾಗಿ ಮಾರಲು ತಯಾರಾಗಿ ನಿಂತಿದ್ದಾರೆ.

ಇದನ್ನು ಖರೀದಿಸುತ್ತಿರುವವರು ಮಲ್ಟಿ ಮೀಡಿಯಾ ಸ್ಕ್ರೀನ್ ಎಂಬ ಕಂಪನಿ. ಇಂಡಿಯಾದಲ್ಲಿ ಇವರು ಸೋನಿ ಎಂಟರ್‌ಟೇನ್‌ಮೆಂಟ್ ಗ್ರೂಪ್ ಹೆಸರಿನಲ್ಲಿ ಆಪರೇಟ್ ಮಾಡುತ್ತಾರೆ. ಅಂದಹಾಗೆ ಈ ಡೀಲ್‌ನಲ್ಲಿ ಕುದುರಿರುವ ರೇಟು 2400 ಕೋಟಿ ರೂಪಾಯಿಗಳು. ಬಹುಶಃ ಇಂಡಿಯಾ ದೇಶದಲ್ಲಿ ಇದುವರೆಗೂ ಆಗಿರುವ ಮೀಡಿಯಾ ಡೀಲ್‌ಗಳ ಪೈಕಿ ಈಟೀವಿ ಸೇಲ್ ಡೀಲೇ ಅತೀ ದೊಡ್ಡ ಮೊತ್ತದ ವ್ಯವಹಾರವಾಗಲಿದೆ.

ಒಂದು ಕಾಲದಲ್ಲಿ ಕನ್ನಡದ ಟಿವಿ ಚಾನಲ್‌ಗಳ ಪೈಕಿ ಬಹಳ ಪಾಪುಲರ್ ಆಗಿದ್ದ ಈಟೀವಿ ನಂತರ 24x7 ಕನ್ನಡ ನ್ಯೂಸ್ ಚಾನಲ್‌ಗಳು ಶುರುವಾದ ಮೇಲೆ ತನ್ನ ಹಿಂದಿನ ಖದರ್ ಕಳೆದುಕೊಂಡಿತ್ತು. ದಿನನಿತ್ಯ ಹದಿನಾಲ್ಕು ಸೀರಿಯಲ್ ತೋರಿಸುತ್ತಾ ಗುಂಪಿನಲ್ಲಿ ಗೋವಿಂದ ಎಂಬಂತಿರುವ ಕನ್ನಡ ಈಟಿವಿ ಮಾಲೀಕ ರಾಮೋಜಿಗೆ ಭಯಂಕರ ಲಾಸ್ ಮಾಡುತ್ತಿದೆ. ಆದರೆ ಚಾನಲ್ ಮಾರಾಟಕ್ಕೆ ಈ ಲಾಸ್ ಎಂಬುದು ಮುಖ್ಯ ಕಾರಣವಾಗಿಲ್ಲ. ಏಕೆಂದರೆ ಈಗ ಸೇಲ್ ಆಗುತ್ತಿರುವುದು ಕೇವಲ ಕನ್ನಡ ಚಾನಲ್ ಒಂದೇ ಅಲ್ಲ, ಈಟಿವಿ ಒರಿಯಾ, ಈಟಿವಿ ಗುಜರಾತಿ, ಈಟಿವಿ ಬಂಗಾಳಿ, ಈಟಿವಿ ಉರ್ದು.... ಹೀಗೆ ಸಾಲುಸಾಲಾಗಿ ಒಟ್ಟು ಹನ್ನೊಂದು ಪ್ರಾದೇಶಿಕ ಚಾನಲ್‌ಗಳನ್ನು ರಾಮೋಜಿ ಮಾರುತ್ತಿದ್ದಾರೆ.

ಇದೆಲ್ಲಾ ಏನು? ಇಷ್ಟು ದೊಡ್ಡಮಟ್ಟದ ಹಣ ನೀಡಿ ಚಾನಲ್ ಕೊಳ್ಳುತ್ತಿರುವ MSM ಅಂದರೆ ಏನು? ಎಂಬ ಪ್ರಶ್ನೆಗಳಿಗೆ ಉತ್ತರ ಬೇಕೆಂದರೆ ನಾವು ಬೆಂಗಳೂರಿನಿಂದ ಆಚೆಗೂ ನೋಡಬೇಕಾಗುತ್ತದೆ. ಅಖಿಲ ಭಾರತ ಮಟ್ಟದಲ್ಲಿ, ಜಾಗತಿಕವಾಗಿ ಮೀಡಿಯಾ ಜಗತ್ತಿನಲ್ಲಿ ಏನೇನು ಬದಲಾವಣೆ ತಲ್ಲಣಗಳೇಳುತ್ತಿವೆ ಎಂಬುದನ್ನೂ ಗಮನಿಸಬೇಕಾಗುತ್ತದೆ.

ಸಿಂಪಲ್ಲಾಗಿ ಹೇಳಬೇಕೆಂದರೆ ಭಾರತದಲ್ಲಿ ವರ್ಷಕ್ಕೆ ಅಂದಾಜು 8000 ಕೋಟಿ ರೂಪಾಯಿಗಳಷ್ಟು ಹಣವನ್ನು ಟಿವಿ ಜಾಹಿರಾತುಗಳಿಗಾಗಿ ಉದ್ಯಮಿಗಳು ಖರ್ಚು ಮಾಡುತ್ತಿದ್ದಾರೆ. ಹಾಗಾಗಿ ಯಾರ ಹತ್ತಿರ ಎಷ್ಟು ಜಾಸ್ತಿ ಚಾನಲ್‌ಗಳಿರುತ್ತದೋ ಅಂತವರಿಗೆ ಹೆಚ್ಚು ದುಡ್ಡು ಮಾಡಲು ಛಾನ್ಸ್ ಸಿಗುತ್ತದೆ. ಇದು ಮೀಡಿಯಾ ಮಾಲೀಕತ್ವದ ಹೊಸ ಹೊಸ ಧ್ರುವೀಕರಣಗಳಿಗೆ ಕಾರಣವಾಗುತ್ತಿದೆ.

ಕ್ಯಾಮೆರಾ ಮುಂದೆ ನಿಂತು 'ಹಲೋ, ಯಾರದು, ಹೇಳಿ ನಿಮಗೆ ಯಾವ ಸಾಂಗ್ ಬೇಕು?' ಎನ್ನುವ ಪೆದ್ದು ಆ್ಯಂಕರ್ ಹುಡುಗಿಯರು. 'ಕ್ಯಾಮರಾಮ್ಯಾನ್.... ಜೊತೆ ಈಟಿವಿಗಾಗಿ.... ' ಎನ್ನುವ ರಿಪೋರ್ಟರ್‌ಗಳೆಲ್ಲಾ ಲೆಕ್ಕಕ್ಕೇ ಇರದಂತೆ ಎಲ್ಲೋ ದೂರದ ದೊಡ್ಡ ನಗರಗಳಲ್ಲಿ ಈ ಡೀಲ್‌ಗಳು ಕುದುರುತ್ತಿರುತ್ತವೆ. ಎಲ್ಲೆಲ್ಲಿಂದಲೋ ಹೊರಟುಬರುವ ಸಾವಿರಾರು ಕೋಟಿ ರೂಪಾಯಿಗಳು ಯಾವ್ಯಾವುದೋ ಟಿವಿ ಚಾನಲ್ ಹಾಗೂ ಪತ್ರಿಕೆಗಳ ಮಾಲೀಕತ್ವವನ್ನೇ ರಾತ್ರೋರಾತ್ರಿ ಬದಲಾಯಿಸುತ್ತಿವೆ.

ಈಗ ಈಟಿವಿ ಗ್ರೂಪ್‌ನಲ್ಲೂ ಅದೇ ಆಗುತ್ತಿವೆ.

ಇಂಡಿಯಾದಲ್ಲಿ ಈಗ ಕೇವಲ ಮೂರ್ನಾಲ್ಕು ಬೃಹತ್ ಮೀಡಿಯಾ ಗ್ರೂಪ್‌ಗಳಿವೆ. ಪ್ರಿಂಟ್ ಮೀಡಿಯಾದಲ್ಲಿ ಟೈಮ್ಸ್ ಆಫ್ ಇಂಡಿಯಾ... ಮುಂತಾದವರಿದ್ದರೆ ಟಿವಿ ಮೀಡಿಯಾದಲ್ಲಿ ಸ್ಟಾರ್, ಜೀ ಹಾಗೂ ಸೋನಿಗಳೇ ದಾದಾಗಳು. ಸಾಧ್ಯವಿರುವ ಚಾನಲ್‌ಗಳನ್ನೆಲ್ಲಾ ಖರೀದಿಸುವುದು, ಅದಾಗದಿದ್ದರೆ ಹೊಸ ಚಾನಲ್‌ಗಳನ್ನೇ ಹುಟ್ಟುಹಾಕುವುದರಲ್ಲಿ ಈ ಗ್ರೂಪ್‌ಗಳು ನಿಸ್ಸೀಮವಾಗಿವೆ.

ಸೋನಿಯ ಒರಿಜಿನಲ್ ಮಾಲೀಕರಾಗಿರುವ ಮಲ್ಟಿ ಸ್ಕ್ರೀನ್ ಮೀಡಿಯಾ ಗ್ರೂಪ್‌ನವರಿಗೆ ಈಗಾಗಲೇ ಸೋನಿ ಟಿವಿ, ಸಬ್ ಟಿವಿ, ಅನಿಮ್ಯಾಕ್ಸ್, ಸೆಟ್ ಮ್ಯಾಕ್ಸ್ ಹಾಗೂ ಎಎಕ್ಸ್‌ಎನ್ ಚಾನಲ್‌ಗಳಿವೆ. ಆದರೆ ಇವರಿಗೆ ಪ್ರಾದೇಶಿಕ ಭಾಷಾ ಚಾನಲ್‌ಗಳಿರಲಿಲ್ಲ, ಹಾಗಾಗಿ ಈಟಿವಿಯ ಹನ್ನೊಂದು ಪ್ರಾದೇಶಿಕ ಭಾಷೆ ಚಾನಲ್‌ಗಳನ್ನು ಒಂದೇ ಸಾರಿ ನುಂಗಿ ತಮ್ಮ ಹೊಟ್ಟೆ ಬಾಯಿ ಎರಡನ್ನು ದೊಡ್ಡದು ಮಾಡಿಕೊಳ್ಳಲು ಹೊರಟಿದ್ದಾರೆ. ಆದರೆ ರಾಮೋಜಿ ರಾವ್ ಅಲ್ಲೂ ತನ್ನ ವ್ಯಾಪಾರಿ ಬುದ್ಧಿ ಬಿಡದೆ 'ಈನಾಡು' ಪತ್ರಿಕೆ ಹಾಗೂ ತೆಲುಗಿನ 'ಈಟಿವಿ 2' ಎಂಬ ನ್ಯೂಸ್ ಚಾನಲ್ಲನ್ನು ತಾನೇ ಉಳಿಸಿಕೊಂಡಿದ್ದಾರೆ. ಜೊತೆಗೆ ರಾಮೋಜಿ ಫಿಲಂ ಸಿಟಿಯೂ ಈತನ ಕೈಲಿ ಉಳಿಯಲಿದೆ.

ಪ್ರಿಯ ಉಪ್ಪಿನಕಾಯಿ ತಯಾರಿಸಿ ಸೇಲ್ ಮಾಡಿದಷ್ಟೇ ಸಲೀಸಾಗಿ ಟಿವಿ ಚಾನಲ್‌ಗಳನ್ನು ಹುಟ್ಟುಹಾಕಿ ಮಾರುವ ರಾಮೋಜಿ ಅಸಾಧ್ಯ ವ್ಯಕ್ತಿ.

ಈಗಿನ ಇದೊಂದೇ ಡೀಲ್‌ನಲ್ಲಿ ಅನಾಮತ್ತು ಎರಡೂವರೆ ಸಾವಿರ ಕೋಟಿ ರೂಪಾಯಿ ರಾಮೋಜಿ ಜೇಬಿಗೆ ಬೀಳುತ್ತಿದೆ.

ಅಂದಹಾಗೆ ಇಂಡಿಯಾದ ಟಿವಿ ಮಾರ್ಕೆಟ್ ವಶಪಡಿಸಿಕೊಳ್ಳಲು ಈಗ ಡಿಸ್ನಿ ಗ್ರೂಪ್, ನೆಟ್‌ವರ್ಕ್ 18, ಮರ್ಡಾಕ್‌ನ ಸ್ಟಾರ್ ಟಿವಿಗಳೆಲ್ಲಾ ದೊಡ್ಡ ದೊಡ್ಡ ಹಣದ ಥೈಲಿ ಹಿಡಿದುಬರುತ್ತಿವೆ. ಇವರ ಅಬ್ಬರದಲ್ಲಿ ಸಣ್ಣಪುಟ್ಟ ಚಾನಲ್‌ಗಳು, ಅಪ್ಪ-ಅಮ್ಮ ಇರದೆ ತಬ್ಬಲಿಗಳಂತೆ ಸೊರಗಿರುವ ಪ್ರಾದೇಶಿಕ ಭಾಷೆಗಳ ಸಿಂಗಲ್ ಚಾನಲ್‌ಗಳು ಬದುಕುಳಿಯುವುದು ನಿಜಕ್ಕೂ ಕಷ್ಟ.

ಅಂದಹಾಗೆ ಕನ್ನಡ ಈಟಿವಿಯ ಮಾಲೀಕತ್ವ ಸೋನಿ ಗ್ರೂಪ್ ಕೈಗೆ ಹೋದ ತಕ್ಷಣ ಬೆಂಗಳೂರಿನ ಈಟಿವಿ ಆಫೀಸಿನಲ್ಲಿ ಕೆಲವು ಮೇಜರ್ ಆಪರೇಷನ್ ಗಳಾಗಲಿವೆ. ಈಟಿವಿ ಹೆಸರಲ್ಲಿ ದುಡ್ಡು ಮಾಡಿದವರು, ಸೋಂಭೇರಿಗಳ ಲಿಸ್ಟ್ ಒಂದನ್ನು ರೆಡಿ ಮಾಡಿಸಲಾಗುತ್ತಿದೆಯಂತೆ.

ಹೊಸ ಮಾಲೀಕರು ಬಂದತಕ್ಷಣ ಅಂತವರಿಗೆ ಚಾನಲ್‌ನಿಂದ ಡೈವೋರ್ಸ್ ಸಿಗಲಿದೆ. ❖

Media ಮಾತು

ಸಮಯದಲ್ಲಿ ಶಾಂತಮ್ಮನ ಫಜೀತಿಗಳು

ಅದೇಕೊ ಏನೋ, ಲೆಕ್ಕವಿರದಷ್ಟು ಜನ ಸಮಯ ಚಾನಲ್ ಬಿಟ್ಟು ಹೊರನಡೆಯುತ್ತಿದ್ದಾರೆ. ನೆಲದಡಿಯಿಂದ ಇರುವೆ ಸಾಲು ಹೊರಬರುವಂತೆ ಸಮಯದಿಂದ ಇವರೇಕೆ ಹೊರಟುಹೋಗುತ್ತಿದ್ದಾರೊ ಗೊತ್ತಿಲ್ಲ?

ಅದಿರಲಿ,


ಕಳೆದ ವಾರ ಜೂನ್ ತಿಂಗಳ ಟಿಆರ್‌ಪಿ ರಿಪೋರ್ಟ್ ಬಂದಿದೆ. ಅದರಲ್ಲಿ 'ಸಮಯ'ಕ್ಕೆ ಸ್ವಲ್ಪ ಕಡಿಮೆ ರೇಟಿಂಗ್ ಸಿಕ್ಕಿದೆಯೆಂಬ ಸುದ್ದಿ ಚಾನಲ್ ಕಚೇರಿಯಲ್ಲಿ ಹಾಹಾಕಾರವೆಬ್ಬಿಸಿದೆ. ನಿಮಗೆ ಗೊತ್ತಿರಬಹುದೇನೊ. ಈ ಚಾನಲ್‌ನ ಹೆಡ್ ಶಾಂತಮ್ಮ ಎಂಬಾಕೆ. ಈಕೆಗೆ ಸ್ಯಾಮ್‌ಸಂಗ್ ಟಿವಿ ಸೆಟ್‌ಗೂ ಸಮಯ ಟಿವಿ ಚಾನಲ್‌ಗೂ ವ್ಯತ್ಯಾಸವೇ ತಿಳಿದಂತಿಲ್ಲ, ಇನ್ನೂ ನೇರವಾಗಿ ಹೇಳಬೇಕೆಂದರೆ ಒಂದು ಟಿವಿ ಚಾನಲ್ ಅನ್ನು ಹೇಗೆ ನಡೆಸಬೇಕು ಎಂಬಿತ್ಯಾದಿ ವಿಚಾರವೇ ಗೊತ್ತಿಲ್ಲ, ಸಮಯ ಟಿವಿ ಮಾಲೀಕರ ಪ್ರಾಕ್ಸಿಯಾಗಿ ಬಂದು ಕೂತಿರುವ ಶಾಂತಮ್ಮಗೆ ವಿಪರೀತ ಒಣ ಧಿಮಾಕು ಬೇರೆ. ಈಕೆ ಬೆಲ್ ಬಾರಿಸಿದ ತಕ್ಷಣ ಆಫೀಸ್ ಬಾಯ್ ಬರದಿದ್ದರೆ ತಕ್ಷಣ ಡಿಸ್‌ಮಿಸ್ ಮಾಡುತ್ತಾರೆ. ಶಾಂತಮ್ಮ ಲಿಫ್ಟ್ ಹತ್ತಿದರೆ ಇನ್ನೊಬ್ಬರು ಜೊತೆಗೆ ಇರುವಂತಿಲ್ಲ, ಅಕಸ್ಮಾತ್ ಯಾರಾದರೂ ಲಿಫ್ಟ್ ಹತ್ತಿದರೆ ಶಾಂತಮ್ಮ ಅವರನ್ನು ಹೊರ ಕಳಿಸುತ್ತಾರೆ. ಸಡನ್ನಾಗಿ ಸಿಬ್ಬಂದಿಯನ್ನು ಮೀಟಿಂಗ್‌ಗೆ ಕರೆಸಿ 'ನಿಮ್ಮ ಪ್ರೋಗ್ರಾಂನೆಲ್ಲಾ ತಕಂಬನ್ನಿ' ಅಂದು ನಗೆಪಾಟಲಿಗೀಡಾಗುತ್ತಿದ್ದಾರೆ.

ಅಂದಹಾಗೆ 'ಸಮಯ'ವೂ ಸೇಲಿಗಿದೆ ಎಂಬ ಸುದ್ದಿ ಕೇಳಿಬರುತ್ತಿದೆ. ಶಶಿಧರ ಭಟ್ಟರ ಕಾಂಟ್ರಾಕ್ಟ್ ಇನ್ನೆರಡು ತಿಂಗಳು ಮಾತ್ರವಿದೆ. ❖

ಸಂಕೇಶ್ವರರ 'ವಿಜಯವಾಣಿ'ಗೆ 11.11.11 ಕ್ಕೆ ಮುಹೂರ್ತ

ವಿಜಯ ಸಂಕೇಶ್ವರ್ 2011 ರ ನವೆಂಬರ್ 11 ರಂದು ಬೆಳಗ್ಗೆ ಹೊಸ ಪೇಪರ್ ಚಾಲು ಮಾಡುತ್ತಿದ್ದಾರೆ. ಹೆಸರು ವಿಜಯವಾಣಿ ಅಂತ!

ಈ ಮೊದಲು ಆನಂದ ಕರ್ನಾಟಕ ಮತ್ತಿತರ ಟೈಟಲ್ ಬಗ್ಗೆ ಸಂಕೇಶ್ವರ್ ಯೋಚಿಸಿದ್ದರು. ಆದರೆ ಅದು ಶಾಸಕ ಆನಂದ್‌ಸಿಂಗ್ ಕೈಲಿತ್ತು. ಆತ ಕೊಡಲು ಒಪ್ಪಿರಲೂ ಇಲ್ಲ. ಇತ್ತ ವಿಜಯವಾಣಿ ಟೈಟಲ್ಲು ತುಮಕೂರಿನಲ್ಲಿತ್ತು. ಎಚ್.ಆರ್. ಗುಂಡೂರಾವ್ ಎಂಬಾತ 1967 ರಲ್ಲಿ ಇದನ್ನು ರಿಜಿಸ್ಟರ್ ಮಾಡಿಸಿದ್ದರು. ಈಗ ಅವರ ಮಗ ವೆಂಕಟೇಶ್ ಮೂರ್ತಿ 'ವಿಜಯವಾಣಿ'ಗೆ ಸಂಪಾದಕ. ತುಮಕೂರಿನ ಲೋಪ್ರೊಫೈಲ್ ದಿನಪತ್ರಿಕೆಯಾಗಿರುವ 'ವಿಜಯವಾಣಿ' ಟೈಟಲ್ ಖರೀದಿಸಲು ಸಂಕೇಶ್ವರ್ 35 ಲಕ್ಷ ರೂಪಾಯಿ ಕೊಟ್ಟರೆಂಬ ಸುದ್ದಿಯಿದೆ. ಉದಯವಾಣಿಯ ಮಾಜಿ ಸಂಪಾದಕ ತಿಮ್ಮಪ್ಪ ಭಟ್ ಹೊಸ ವಿಜಯವಾಣಿಯ ಕ್ಯಾಪ್ಟನ್ ಆಗಿದ್ದಾರೆ. ಕನ್ನಡ ಪತ್ರಿಕಾರಂಗಕ್ಕೆ ಸಂಕೇಶ್ವರರ ಪುನರಾಗಮನ ಬೇರೆಯವರಲ್ಲಿ ಭಯ ಹುಟ್ಟಿಸಿರುವ ಬಗ್ಗೆ ಕೊಂಚ ಹೇಳಬೇಕು.





ವಿಜಯವಾಣಿ ಬೆಲೆ ಸಮರ ಸಾರಿಯೇ ಮಾರ್ಕೆಟ್‌ಗೆ ಬರುವ ಸಾಧ್ಯತೆಯಿದೆ. ಅಂದರೆ ಅದರ ಬೆಲೆ 2 ರೂಪಾಯಿನೊಳಗೆ ಇರಬಹುದು. ಇದು ಪ್ರಜಾವಾಣಿ ಹಾಗೂ ವಿಜಯ ಕರ್ನಾಟಕ ಮಾಲೀಕರಿಗೆ ಯೋಚನೆಯಾಗಿದೆ. ಈಗ್ಗೆ ಕೆಲ ದಿನಗಳ ಹಿಂದೆ ಈ ಎರಡೂ ಸಂಸ್ಥೆಗಳ ಮಾಲೀಕರು ಒಂದು ಮೀಟಿಂಗ್ ನಡೆಸಿ ತಮ್ಮ ಪತ್ರಿಕೆಗಳ ಬೆಲೆ ಏರಿಸುವ ಬಗ್ಗೆ ಚರ್ಚಿಸಿದ್ದಾರೆ. ಅವರ ಪ್ರಕಾರ ಇಂಗ್ಲಿಷ್ ಡೈಲಿಗಳ ರೇಟು 7 ರೂಪಾಯಿಗೂ, ಕನ್ನಡ ಪತ್ರಿಕೆಯ ಬೆಲೆ 5 ರೂಪಾಯಿಗೂ ಏರಿಸಬೇಕೆಂಬುದಾಗಿತ್ತು. ಆದರೆ ಸಹಮತ ಮೂಡದ ಕಾರಣ ಬೆಲೆ ಏರಿಕೆ ವಿಚಾರ ಸದ್ಯಕ್ಕೆ ಪೆಂಡಿಂಗ್‌ನಲ್ಲಿದೆ. ಆದರೆ ಯಾವಾಗ ಸಂಕೇಶ್ವರರ 'ವಿಜಯವಾಣಿ' ಬರುವ ಸುದ್ದಿ ಬಂತೋ ಇವರಿಬ್ಬರೂ ಮತ್ತೆ ಮೀಟಿಂಗ್ ಮಾಡಿದ್ದಾರೆ. ವಿಜಯವಾಣಿ ಮಾರುಕಟ್ಟೆಗೆ ಬರುವ ಮೊದಲೇ ಪ್ರಜಾವಾಣಿ ಹಾಗೂ ವಿಜಯ ಕರ್ನಾಟಕದ ಬೆಲೆಯನ್ನು ಐದು ರೂಪಾಯಿಗೆ ಏರಿಸುವ ಸಾಧ್ಯತೆ ನೋಡುತ್ತಿದ್ದಾರೆ. ಅಕಸ್ಮಾತ್ ವಿಜಯವಾಣಿ 2 ರೂಗೆ ಸಿಕ್ಕರೆ ತಾವೂ 5 ರೂ ನಿಂದ 3 ಅಥವಾ 3.50 ರೂಗೆ ನೀಡಬಹುದಲ್ಲ ಎಂಬ ತರ್ಕ ಅವರದ್ದು. ❖

...5

ಚಿರತೆ ಸಾಕುವ ಮೂರ್ಖರ ಕತೆ


ಕಲಿಯಲಿಲ್ಲ, ಆದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಕಳೆದ ತಿಂಗಳ ಜೂನ್ 1 ನೇ ತಾರೀಖು ಚಿರತೆಗಳನ್ನು ಕಾಡಿಗೆ ಒಯ್ದು ಬಿಟ್ಟರು.

ಕಾಡು ಕುರುಬರ ಮೇಲೆ ಚಿರತೆ ದಾಳಿ

ಅವತ್ತು ಬೆಳ್ಳಂಬೆಳಗ್ಗೆ ಬಂಡೀಪುರ ನ್ಯಾಷನಲ್ ಪಾರ್ಕ್ ವ್ಯಾಪ್ತಿಯ ಲಕ್ಕೀಪುರ ಗ್ರಾಮದ ರಾಮ, ಕೆಂಪ, ಬಸವ ಮುಂತಾದ ಐವರು ಜೇನು ಕುರುಬರು ಜೇನು ಹುಡುಕಲು ಕಾಡಿಗೆ ಹೊರಟಿದ್ದರು. ಕಾಡಿನ ಹಾದಿಯಲ್ಲೇ ರಾಮನಿಗೆ ಚಿರತೆ ಕಾಣಿಸಿತು. ಸಾಮಾನ್ಯವಾಗಿ ಮನುಷ್ಯರು ಕಂಡರೆ ಹುಲಿ, ಚಿರತೆಗಳು ಹೊರಟುಹೋಗುತ್ತವೆ. ಅದು ಗೊತ್ತಿದ್ದ ಆದಿವಾಸಿ ರಾಮನಿಗೇ ಆಶ್ಚರ್ಯವಾಗುವಂತೆ ಆ ಚಿರತೆ ಅಲ್ಲಿಂದ ಹೊರಟುಹೋಗುವ ಬದಲಾಗಿ ಜೇನುಕುರುಬರ ಗುಂಪಿನ ಮೇಲೇ ನುಗ್ಗಿ ಬಂತು. ಮೊದಲು ಎದುರಿಗೆ ಸಿಕ್ಕ ರಾಮನ ಮೇಲೆ ಹಾರಿ ಅವನ ಕತ್ತಿಗೇ ಬಾಯಿ ಹಾಕಿತು. ಅದನ್ನು ನೋಡಿ ಕೆಂಪ ರಾಮನ ರಕ್ಷಣೆಗೆ ನುಗ್ಗಿದ. ಆಗ ರಾಮನನ್ನು ಬಿಟ್ಟ ಚಿರತೆ ಕೆಂಪನ ಮೇಲೆ ಬಿತ್ತು, ಆದರೆ ಇನ್ನುಳಿದ ಮೂವರು ಹೆದರದೆ ತಮ್ಮ ಕೈಲಿದ್ದ ದೊಣ್ಣೆಗಳಿಂದ ಚಿರತೆಗೆ ಹೊಡೆದು ಕೊಂದು ಹಾಕಿಬಿಟ್ಟರು. ಆದರೆ ವಿಪರೀತ ರಕ್ತ ಹರಿದುಹೋದ ಕಾರಣ ರಾಮ ಅಲ್ಲೇ ಸತ್ತುಹೋದ. ಉಳಿದವರು ಗಾಯಗೊಂಡಿದ್ದ ಕೆಂಪನನ್ನು ಗುಂಡ್ಲುಪೇಟೆಯ ಸರ್ಕಾರಿ ಆಸ್ಪತ್ರೆಗೆ ತಂದು ಚಿಕಿತ್ಸೆ ಮಾಡಿಸಿದರು.



ಅತ್ತ ಫಾರೆಸ್ಟ್ ಇಲಾಖೆಯವರು ಲಕ್ಕೀಪುರಕ್ಕೆ ಹೋಗಿ ಚಿರತೆಯ ಶವ ತಂದರು. ಅವರಿಗೆ ಅರ್ಜೆಂಟಾಗಿ ಜನ ನಂಬುವಂತಹ ಒಂದು ಕತೆ ಹೆಣೆಯಬೇಕಿತ್ತು, ಹಾಗಾಗಿ ರಾಮನ ಸಾವಿನ ಸುದ್ದಿ ಹೊರಬರದಂತೆ ನೋಡಿಕೊಂಡರು. ಕೆಂಪನಿಗೆ ಚಿರತೆ ದಾಳಿಯ ಬಗ್ಗೆ ಉಸಿರೆತ್ತದಂತೆ ಧಮಕಿ ಹಾಕಿದರು. ಜೇನು ಕುರುಬರು ಕಾಡಿಗೆ ಅತಿಕ್ರಮ ಪ್ರವೇಶ ಮಾಡಿದ್ದಾರೆಂದು ಕೇಸ್ ಹಾಕಿ ಜೈಲಿಗೆ ತಳ್ಳುವುದಾಗಿ ಬೆದರಿಸಿದರು. ಕೊನೆಗೆ 'ಚಿರತೆಯ ಸಾವಿಗೆ ಹುಲಿ ದಾಳಿ ಕಾರಣ' ಎಂದು ಹೇಳಿಬಿಟ್ಟರು. ಈ ನೀಚರಿಗೆ ರಾಜಕುಮಾರಿ ವಿಶಾಲಾಕ್ಷಿ ದೇವಿ ಹಾಗೂ ಮುಖ್ಯ ಅರಣ್ಯಾಧಿಕಾರಿ ಬಿ.ಕೆ. ಸಿಂಗ್ ಮಾಡಿದ್ದ ತಪ್ಪುಗಳನ್ನು ಮುಚ್ಚಿಡಬೇಕಿತ್ತಲ್ಲ?


ವಿಶಾಲಾಕ್ಷಿ ದೇವಿ

ಈ ಮಧ್ಯೆ ಸತ್ತ ರಾಮನ ಸಂಬಂಧಿಕರು ಅರಣ್ಯ ಇಲಾಖೆಗೆ ಹೋಗಿ 'ಏನಾದರೂ ಪರಿಹಾರ ಕೊಡಿ' ಅಂದರೆ ಅವರ ಮೇಲೂ ಕೇಸ್ ಹಾಕುವುದಾಗಿ ಬೆದರಿಸಿ ಕಳಿಸಿದರು.

ಈ ನಡುವೆ ಕಾಡಿಗೆ ಬಿಡಲ್ಪಟ್ಟ ಎರಡನೆ ಚಿರತೆ 'ಲೈಟ್' ಅದೇ ಕಾಡಿನಲ್ಲಿದೆ. ಅದಕ್ಕೂ ಆಹಾರಕ್ಕಾಗಿ ಸ್ವಯಂ ಬೇಟೆಯಾಡಿ ಗೊತ್ತಿಲ್ಲ.

ಅದು ಮುಂದಿನ ದಿನಗಳಲ್ಲಿ ಜನರಿಗೆ ಏನೇನು ಅನಾಹುತ ಮಾಡಲಿದೆಯೋ ಗೊತ್ತಿಲ್ಲ.

ಚಿರತೆ ಸಾಕಲು ಅನುಮತಿಯೇ ಇರದಿದ್ದ ವಿಶಾಲಾಕ್ಷಿ ದೇವಿಗೆ ಎರಡು ಚಿರತೆ ಮರಿಗಳನ್ನು ಯಾವ ಮುಠ್ಠಾಳರು ಕೊಟ್ಟರು?

ಕಾನೂನುಬಾಹಿರವಾಗಿ ಚಿರತೆ ಮರಿ ಸಾಕಿ ಜನರ ಪ್ರಾಣ ತೆಗೆದ, ಆ ಚಿರತೆಯ ಸಾವಿಗೂ ಕಾರಣವಾಗಿರುವ ವಿಶಾಲಾಕ್ಷಿ ದೇವಿಯನ್ನು ಶಿಕ್ಷಿಸುವವರ್‍ಯಾರು? ❖


ನಾಗರಬಾವಿ: ಉಮೇಶ್ ಶೆಟ್ಟಿಯ ಸುಳ್ಳು ಅಫಿಡವಿಟ್!

ನಾಗರಬಾವಿಯ ಬಿಜೆಪಿ ಕಾರ್ಪೋರೇಟರ್ ಉಮೇಶ್ ಶೆಟ್ಟಿ ದಂಧೆ ದಗಲ್ಬಾಜಿಗಳ ಅಕ್ಷಯಪಾತ್ರೆಯಂಥವನು. ಈತನ ಬದುಕನ್ನು ಎತ್ತಲಿಂದ ದಿಟ್ಟಿಸಿದರೂ ತರಹೇವಾರಿ ವಂಚನೆಗಳೇ ಕಣ್ಣಿಗೆ ರಾಚುತ್ತವೆ. ಇಂಥಾ ಶೆಟ್ಟಿ ಬಿಬಿಎಂಪಿ ಚುನಾವಣೆಗೆ ಸ್ಪರ್ಧಿಸುವ ಸಂದರ್ಭದಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಅಫಿಡವಿಟ್ ಇದೀಗ ಕುಣಿಕೆಯಾಗಿ ಬದಲಾಗಿದೆ. ಶೆಟ್ಟಿಯನ್ನು ಗೆಲ್ಲಿಸಿದ ಜನರೇ ಅಸಹ್ಯಪಟ್ಟುಕೊಳ್ಳುವಂಥಾ ವಿಚಾರಗಳೂ ಬಯಲಾಗಿವೆ.

ವಾರ್ಡ್ ನಂ. 128 ಕ್ಕೆ ಬಿಜೆಪಿಯಿಂದ ಕಣಕ್ಕಿಳಿದ ಉಮೇಶ್ ಶೆಟ್ಟಿ ಅಫಿಡವಿಟ್‌ನಲ್ಲಿ ಶುದ್ಧ ವಂಚನೆ ನಡೆಸಿದ್ದಾನೆ. ಚುನಾವಣೆಗೆ ಸ್ಪರ್ಧಿಸುವ ಯಾವುದೇ ವ್ಯಕ್ತಿ ತನ್ನ ಸಮಗ್ರ ಆಸ್ತಿ ವಿವರ ಹಾಗೂ ಚಾರಿತ್ರ್ಯದ ಬಗ್ಗೆ ಚುನಾವಣಾ ಆಯೋಗಕ್ಕೆ ಅಫಿಡವಿಟ್ ಸಲ್ಲಿಸಬೇಕೆಂಬುದು ನಿಯಮ. ಉಮೇಶ್ ಶೆಟ್ಟಿ ಮೊದಲನೆಯದ್ದನ್ನು ನಾಜೂಕುತನದಿಂದ ಮಾಡಿದ್ದಾನೆ. ಆದರೆ ಚಾರಿತ್ರ್ಯದ ವಿಚಾರದಲ್ಲಿ ಮಾತ್ರ ಅಪ್ಪಟ ಸುಳ್ಳು ದಾಖಲೆಗಳನ್ನು ನೀಡಿದ್ದಾನೆ. ಅದರಲ್ಲೀತ ತನ್ನ ಮೇಲೆ ಐಪಿಸಿ ಸೆಕ್ಷನ್ 294 ರ ಅಡಿಯಲ್ಲಿ ಒಂದೇ ಒಂದು ಪ್ರಕರಣ ದಾಖಲಾಗಿರುವುದಾಗಿ ಬಿಂಬಿಸಿಕೊಂಡಿದ್ದಾನೆ.

ಆದರೆ.... ಈತನ ಮೇಲೆ ಅಖಂಡ ಆರು ಕೇಸುಗಳಿವೆ. ಇನ್ನೂ ಮುಖ್ಯ ಸಂಗತಿಯೆಂದರೆ ಆ ಕೇಸುಗಳೆಲ್ಲಾ ಉಮೇಶ್ ಶೆಟ್ಟಿ ಪಕ್ಕಾ ವೇಶ್ಯಾ ದಂಧೆಕೋರನೆಂಬುದನ್ನು ಸಾರಿ ಹೇಳುತ್ತಿವೆ!

ಉಮೇಶ್ ಶೆಟ್ಟಿಯ ಹೂಂಕಾರಗಳನ್ನು ಕಂಡವರು ಆತನೊಬ್ಬ ತಲೆಮಾಸದ ಪುಂಡ ಅಂದುಕೊಂಡಿರಬಹುದು. ಆದರೀತ ಎಂಥಾ ಪರಿಸ್ಥಿತಿಯಿಂದಲೂ ನಾಜೂಕುತನದಿಂದ ಬಚಾವಾಗಬಲ್ಲ ಪಳಗಿದ ದಂಧೆಕೋರ. ಈತನ ಅಣ್ಣ ಜಗದೀಶ್ ಶೆಟ್ಟಿ ಕೂಡಾ ಇಂಥವನೇ. ಇವರಿಬ್ಬರು ಸೇರಿ ನಡೆಸುತ್ತಿದ್ದದ್ದು ವೇಶ್ಯಾ ದಂಧೆ. ಈ ಸಂಬಂಧ 2000ನೇ ಇಸವಿಯೊಂದರಲ್ಲೇ ಕಲಾಸಿಪಾಳ್ಯ ಪೊಲೀಸ್ ಠಾಣೆಯಲ್ಲಿ ಶೆಟ್ಟಿ ಗ್ಯಾಂಗಿನ ಮೇಲೆ ಐದು ಪ್ರಕರಣಗಳು ದಾಖಲಾಗಿ ಇಂದಿಗೂ ಚಾಲ್ತಿಯಲ್ಲಿವೆ. ವೇಶ್ಯಾವಾಟಿಕೆಗೆ ಸಂಬಂಧಿಸಿದಂತೆಯೇ 2006 ರಲ್ಲಿ ಬಸವೇಶ್ವರನಗರ ಠಾಣೆಯಲ್ಲಿ ಪ್ರಕರಣವೊಂದು ಜಡಿದುಕೊಂಡಿದೆ!



ಮಂಗಳೂರು ಕಡೆಯಿಂದ ಬೆಂಗಳೂರು ಸೇರಿಕೊಂಡ ಶೆಟ್ಟಿ ಕೈಯಿಡದ ದಂಧೆಗಳೇ ಇರಲಿಕ್ಕಿಲ್ಲ. ಆದರೆ ಚಿಕ್ಕಾಸಿಗೆ ತೃಪ್ತಿ ಹೊಂದುವ ಜಾಯಮಾನವೂ ಇವನದ್ದಲ್ಲ. ದೊಡ್ಡಮಟ್ಟದಲ್ಲಿ ಕಾಸು ಮಾಡಬೇಕೆಂಬ ಹುಚ್ಚಿಗೆ ಬಿದ್ದ ಈತ ಕಲಾಸಿಪಾಳ್ಯಕ್ಕೆ ಕಾಲಿಟ್ಟವನೇ ಹರಿದರ್ಶನ್ ಲಾಡ್ಜಿಗೆ ತೂರಿಕೊಂಡ. ತದನಂತರ ಆ ಲಾಡ್ಜನ್ನು ಪಡೆದು ಅಣ್ಣ ಜಗದೀಶ ಶೆಟ್ಟಿಯೊಂದಿಗೆ ಅಲ್ಲೇ ಠಿಕಾಣಿ ಹೂಡಲಾರಂಭಿಸಿದ. ಬರಬರುತ್ತಾ ಲಾಡ್ಜಿನೆದುರು ರಾಜ್ಯ, ಹೊರರಾಜ್ಯಗಳ ಹುಡುಗೀರ ಕಲರವ ವಿಪರೀತವಾಗತೊಡಗಿತ್ತು.

ಆ ಸಂದರ್ಭದಲ್ಲಿ ಕಲಾಸಿಪಾಳ್ಯ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದವರು ಖಡಕ್ ಅಧಿಕಾರಿ ಅಜ್ಜಪ್ಪ. ಕಲಾಸಿಪಾಳ್ಯದಲ್ಲಿ ಪಿತಗುಡುತ್ತಿದ್ದ ಅಕ್ರಮ ಕ್ರಿಮಿಗಳನ್ನು ಜೈಲಿಗೆ ಗುಡುಮಿದ್ದ ಅಜ್ಜಪ್ಪನವರಿಗೆ ಹರಿದರ್ಶನ್ ಲಾಡ್ಜಿನಲ್ಲಿ ನಡೆಯುತ್ತಿದ್ದ ಅಕ್ರಮ ದಂಧೆಯ ವಾಸನೆ ಬಡಿಯಲಾರಂಭಿಸಿತ್ತು. ಇದೇ ಗುಮಾನಿಯಲ್ಲಿ ಆ ಲಾಡ್ಜಿಗೆ ರೇಡು ಬಿದ್ದ ಅಜ್ಜಪ್ಪನವರ ಕೈಗೆ ಉಮೇಶ್ ಶೆಟ್ಟಿ ಹಾಗೂ ಅವನಣ್ಣ ಜಗದೀಶ್ ಶೆಟ್ಟಿ ಮಾಲು ಸಮೇತ ತಗುಲಿಕೊಂಡಿದ್ದರು. ಈ ಬಗ್ಗೆ ಪದೇಪದೇ ಎಚ್ಚರಿಸಿದರೂ ಈ ದಗಲ್ಬಾಜಿ ಸಹೋದರರು ಮತ್ತೆ ಮತ್ತೆ ದಂಧೆಗಿಳಿದ ಪರಿಣಾಮವೆಂಬಂತೆ ಐದು ಕೇಸುಗಳನ್ನು ಜಡಿಸಿಕೊಂಡಿದ್ದರು. ಆದರೂ ಸಹ ಆರ್.ವಿ. ದೇವರಾಜ್ ಹಾಗೂ ಹಳೇ ಡಾನ್ ರೈ ಎಂಬಾತನ ಹೆಸರು ಹೇಳಿಕೊಂಡು ಹೇಗೋ ಬಚಾವಾಗುತ್ತಿದ್ದರು.

ಇದೆಲ್ಲದರ ನಡುವೆಯೂ ಈ ದಂಧೆಕೋರ ಸಹೋದರರು ಇನ್ಸ್‌ಪೆಕ್ಟರ್ ಅಜ್ಜಪ್ಪನವರ ಹೊಡೆತಕ್ಕೆ ಸಿಕ್ಕು ಕಂಗಾಲಾಗಿದ್ದು ನಿಜ. ಇನ್ನೊಂದಷ್ಟು ದಿನ ಕಳೆದಿದ್ದರೆ ಇವರಿಗೆ ಜೈಲು ಕಾಯಮ್ಮಾಗುತ್ತಿತ್ತೇನೋ. ಆದರೆ ಅಜ್ಜಪ್ಪನವರಿಗೆ ಬೇರೆಡೆಗೆ ವರ್ಗಾವಣೆಯಾಯಿತು. ಆ ಜಾಕ್ಕೆ ಬಂದು ಕೂತವರು ಸಿದ್ರಾಮಪ್ಪನೆಂಬ ಅಧಿಕಾರಿ. ಈ ಆಸಾಮಿಗೆ ದಂಧೆಕೋರರ ಬಗ್ಗೆ ಅದೊಂದು ರೀತಿಯ ಮಮಕಾರವಿತ್ತು. ಇವರ ಫಲವೆಂಬಂತೆ ಶೆಟ್ಟಿ ಸಹೋದರರು ಹರಿದರ್ಶನ್ ಲಾಡ್ಜಿನಲ್ಲಿ ಮತ್ತೆ ದಂಧೆ ಶುರುವಿಟ್ಟರು.

ಈ ದಂಧೆಯಿಂದಲೇ ಸಾಕಷ್ಟು ಹಡಬೆ ಹಣ ಮಾಡಿಕೊಂಡ ಶೆಟ್ಟಿ ಬಸವೇಶ್ವರ ನಗರದಲ್ಲೂ ಬ್ರಾಂಚು ತೆರೆದು ವೇಶ್ಯಾ ವ್ಯವಹಾರ ಆರಂಭಿಸಿದ. ಇಲ್ಲಿನ 3 ನೇ ಸ್ಟೇಜ್, 3 ನೇ ಬ್ಲಾಕ್‌ನಲ್ಲಿ ಇವರ ದಂಧೆ ಮನೆಯಿತ್ತು. ಈ ಬಗ್ಗೆ ನಿಖರವಾದ ಮಾಹಿತಿ ಸಿಗುತ್ತಲೇ 14-7-06 ರಂದು ಬಸವೇಶ್ವರ ನಗರ ಠಾಣಾ ಪೊಲೀಸರು ರೇಡು ನಡೆಸಿದ್ದರು. ಉಮೇಶ್ ಶೆಟ್ಟಿ ಹೀನಾಯವಾಗಿ ತಗುಲಿಕೊಂಡಿದ್ದ. ಆತನ ಜೊತೆಗೆ ದಾವಣಗೆರೆಯ ನಟೋರಿಯಸ್ ಪಿಂಪ್ ಕಿರಣ್ ಎಂಬಾತನೂ ಸಿಕ್ಕಿಬಿದ್ದಿದ್ದ. ಇವರು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದ ಮುಂಬೈ ಮೂಲದ ಪಿಂಕಿ ರಾಜು ಹಾಗೂ ದಾವಣಗೆರೆಯ ಕುಸುಮಾ ಎಂಬಾಕೆಯನ್ನು ಪೊಲೀಸರು ಎಳೆತಂದು ಜೈಲಿಗೆ ಹಾಕಿದ್ದರು. ಈ ಪ್ರಕರಣದಲ್ಲೂ ಶೆಟ್ಟಿ ಹತ್ತದಿನೈದು ದಿನಗಳ ಸೆರೆವಾಸ ಅನುಭವಿಸಿದ್ದ.

ಉಮೇಶ್ ಶೆಟ್ಟಿ ಎಂಥಾ ಕ್ರಿಮಿನಲ್ ಎಂದರೆ ಹೀಗೆ ಅನಿಷ್ಟ ದಂಧೆ ನಡೆಸಿ ಸಿಕ್ಕಿಬಿದ್ದಾಗಲೆಲ್ಲಾ ತರಹೇವಾರಿ ರೀತಿಯಲ್ಲಿ ಪೊಲೀಸರನ್ನೇ ಯಾಮಾರಿಸುತ್ತಿದ್ದ. ಎಲ್ಲಾ ಪ್ರಕರಣಗಳಲ್ಲೂ ಈತ ತಂದೆಯ ಹೆಸರನ್ನು ಪೊನ್ನಪ್ಪ ಅಂತಲೇ ಹೇಳಿಕೊಂಡಿದ್ದಾನೆ. ತಮಾಷೆಯೆಂದರೆ ಕಲಾಸಿಪಾಳ್ಯದಲ್ಲಿನ ಪ್ರಕರಣದಲ್ಲಿ ಅಣ್ಣತಮ್ಮ ಒಟ್ಟಿಗೇ ಪೊಲೀಸರ ಬಲೆಗೆ ಬಿದ್ದಿದ್ದರಲ್ಲಾ? ಆ ಸಂದರ್ಭದಲ್ಲಿ ಉಮೇಶ್ ಶೆಟ್ಟಿ ಅಪ್ಪನ ಹೆಸರನ್ನು ಪೊನ್ನಪ್ಪ ಅಂತ ನಮೂದಿಸಿದ್ದ. ಅವನ ಸ್ವಂತ ಅಣ್ಣ ಜಗದೀಶ ಶೆಟ್ಟಿ ಅಪ್ಪನ ಹೆಸರು ರಮಾನಾಥ ಶೆಟ್ಟಿ ಅಂತ ದಾಖಲಿಸಿದ್ದ! ಉಮೇಶ್ ಶೆಟ್ಟಿ ಇದೇ ವಂಚನೆಯನ್ನು ಎಷ್ಟೋ ಸಲ ಬಚಾವಾಗಲು ಬಳಸಿಕೊಂಡಿದ್ದಾನೆ. ಅಂದಹಾಗೆ ಈತನ ತಂದೆಯ ನಿಜವಾದ ಹೆಸರು ವಿಠ್ಠಲ ಶೆಟ್ಟಿ. ಪೊಲೀಸರು ವಿಚಾರಣೆಗೆ ಬಂದಾಗಲೆಲ್ಲಾ ಉಮೇಶ್ 'ನನ್ನ ಅಪ್ಪ ವಿಠ್ಠಲ ಶೆಟ್ಟಿ. ಅಲ್ಲಿರುವುದು ಪೊನ್ನಪ್ಪ ನನಗೂ ಕೇಸಿಗೂ ಸಂಬಂಧವಿಲ್ಲ' ಅಂತ ಅದೆಷ್ಟೋ ಸಾರಿ ಪೊಲೀಸರಿಗೇ ಚಳ್ಳೆಹಣ್ಣು ತಿನ್ನಿಸಿದ್ದಾನೆ!


ಇಷ್ಟೆಲ್ಲಾ ಭಾನಗಡಿಗಳ ಸರದಾರ ಉಮೇಶ್ ಶೆಟ್ಟಿ ಚುನಾವಣಾ ಇಲಾಖೆ ಸರಿಯಾದದ್ದೊಂದು ತನಿಖೆ ನಡೆಸಿದರೆ ಜೈಲು ಸೇರುವ ಎಲ್ಲಾ ಲಕ್ಷಣಗಳೂ ಇದೆ. ಇತ್ತೀಚೆಗೆ ತನ್ನ ವಾರ್ಡ್‌ನಲ್ಲಿ ಸುಳ್ಳು ಪ್ರವಾಹ ಸೃಷ್ಟಿಸಿ ಪರಿಹಾರಧನ ನುಂಗಿದ ಪ್ರಕರಣದ ತನಿಖೆಯಾದರಂತೂ ಜೈಲಿನ ಹಾದಿ ಇನ್ನಷ್ಟು ಸುಗಮವಾಗಲಿದೆ.

ಶಿಸ್ತಿನ ಬಗ್ಗೆ ಭಾಷಣ ಕುಟ್ಟುವ ಬಿಜೆಪಿಯಲ್ಲಿಂದು ಬಹುತೇಕ ಇಂಥಾ ಕಾರ್ಪೋರೇಟರ್‌ಗಳೇ ತುಂಬಿಕೊಂಡಿದ್ದಾರೆ. ತೀರಾ ವೇಶ್ಯಾದಂಧೆಕೋರನೊಬ್ಬ ಕಾರ್ಪೋರೇಟರ್ ಆಗಿರುವುದು ನಿಜಕ್ಕೂ ಶೋಚನೀಯ ಸಂಗತಿ.

• ವರದಿಗಾರ

ಗೋಕಾಕ್ ಮಿಲ್: ಭಾಸ್ಕರನ ಗೂಂಡಾಗಿರಿಗೆ ಕಾರ್ಮಿಕರ ಬದುಕು ಭಸ್ಮ!

ಗೋಕಾಕ್ ಮಿಲ್ಲಿನ ಖಾಸಗಿ ಗೂಂಡಾಗಳ ಅಟ್ಟಹಾಸ ಎಗ್ಗಿಲ್ಲದೆ ಮುಂದುವರೆದಿದೆ. ಮಿಲ್ಲಿಗಾಗಿ ಜೀವ ತೇಯ್ದ ಕಾರ್ಮಿಕರು ಕಡೆಗಾಲದಲ್ಲಿ ನಿಲ್ಲಲೊಂದು ಸೂರೂ ಇಲ್ಲದೆ ಕಂಗಾಲಾಗಿದ್ದಾರೆ. ಮಿಲ್ಲಿನ ಆಡಳಿತ ಮಂಡಳಿ ಮುಖ್ಯಸ್ಥ ಭಾಸ್ಕರನೆಂಬ ಬಕಾಸುರ ಕಾರ್ಮಿಕರನ್ನು ಬೀದಿಗೆ ತಳ್ಳಿ ಅಖಂಡ ಸಾವಿರ ಎಕರೆ ನುಂಗಲು ಬಾಯ್ತೆರೆದು ನಿಂತಿದ್ದಾನೆ. ಇಲ್ಲಿ ದಿನನಿತ್ಯ ಕಾರ್ಮಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ನಿಜಕ್ಕೂ ಕಂಗಾಲಾಗುವಂತಿವೆ. ಜನಪ್ರತಿನಿಧಿಗಳು, ಪೊಲೀಸ್ ಅಧಿಕಾರಿಗಳು ಹೋಲ್‌ಸೇಲಾಗಿ ಮಿಲ್ಲಿಗೆ ಮಾರಾಟವಾದಂತೆ ವರ್ತಿಸುತ್ತಿರುವುದರಿಂದ ಪಾಪದ ಕಾರ್ಮಿಕರ ಬದುಕು ಮತ್ತಷ್ಟು ದುಸ್ತರವಾಗಿದೆ.



ಭಾಸ್ಕರ್

ಬ್ರಿಟಿಷರ ಕಾಲದಲ್ಲಿ ಆರಂಭವಾದ ಗೋಕಾಕ್ ಮಿಲ್ಲಿಗೆ ನೂರಾಮೂವತ್ತು ವರ್ಷದ ಇತಿಹಾಸವಿದೆ. ಸ್ವಾತಂತ್ರ್ಯಾನಂತರ 1983ರಲ್ಲಿ ರಾಮಕೃಷ್ಣ ಹೆಗಡೆ ಸರ್ಕಾರದಲ್ಲಿ ಈ ಮಿಲ್ಲಿನ ಲೀಸ್ ನವೀಕರಣಗೊಂಡಿತ್ತು. ಇದರರ್ಥ ಮಿಲ್‌ನ ಮಾಲೀಕತ್ವ ಸರ್ಕಾರದ್ದು. ಆದರಿದಕ್ಕೆ ಖಾಸಗಿ ಷೇರ್ ಹೋಲ್ಡರ್ಸ್‌ಗಳ ಸಹಭಾಗಿತ್ವವಿರುತ್ತದೆ. ಇದರೊಳಗೆ ಯಾವುದೇ ಬದಲಾವಣೆ ತರಬೇಕೆಂದರೂ ಸರ್ಕಾರದ ಅನುಮತಿ ಪಡೆಯಬೇಕಿರುವುದು ಕಡ್ಡಾಯ. ಲೀಸ್ ಅವಧಿ ಮುಗಿದ ಬಳಿಕ ಜಾಗವನ್ನು ಯಥಾ ಸ್ಥಿತಿಯಲ್ಲಿ ಸರ್ಕಾರಕ್ಕೆ ಹಸ್ತಾಂತರಿಸಬೇಕೆಂಬುದು ನಿಯಮ.

ಆದರೆ ಈವರೆಗೆ ಬಂದ ಆಡಳಿತಮಂಡಳಿಗಳೆಲ್ಲ ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಿವೆ. ಈಗಿರುವ ಆಡಳಿತ ಮಂಡಳಿ ಮುಖ್ಯಸ್ಥನ ಹೆಸರು ಭಾಸ್ಕರ್. ಈತ ಮಾನವೀಯತೆಯ ಪಸೆ ಇಲ್ಲದ ಶುದ್ಧ ರಾಕ್ಷಸ. ಈತನ ನೇತೃತ್ವದ ಟೀಮಿನ ಕುಕೃತ್ಯಗಳಿಂದಾಗಿ ಕಾರ್ಮಿಕರನೇಕರು ಕಣ್ಣೀರ ನಡುವೆಯೇ ಕಾಲ ಕಳೆಯಬೇಕಾಗಿ ಬಂದಿದೆ. ಭಾಸ್ಕರನ ರಕ್ಕಸತನಕ್ಕೆ ಗೋಕಾಕ್ ಮಿಲ್ ಆವರಣದಲ್ಲಿ ಮುರುಕಲು ಸ್ಥಿತಿ ತಲುಪಿರುವ ಪುರಾತನ ವಸತಿ ಸಮುಚ್ಛಯಗಳು ಸಾಕ್ಷಿಯಾಗಿವೆ. ಇಂಥ ಭಾಸ್ಕರನ ಹೊಡೆತಕ್ಕೆ ಸಿಕ್ಕಿ ಅಕ್ಷರಶಃ ನಡುಬೀದಿಗೆ ಬಂದಿರುವುದು ಬಡ ಕಾರ್ಮಿಕ ಮಹಿಳೆ ಕಸ್ತೂರಿ ಖಾನಪ್ಪನವರ ಕುಟುಂಬ.

ಕಸ್ತೂರಿಯ ಗಂಡ ಖಾನಪ್ಪ ಗೋಕಾಕ್ ಮಿಲ್ಲಿನಲ್ಲಿ 25 ವರ್ಷ ಬೆವರು ಹರಿಸಿ ದುಡಿದಿದ್ದ. ದುಡಿಮೆಯ ಸಂದರ್ಭದಲ್ಲೇ ಕಾಯಿಲೆ ಬಿದ್ದ ಖಾನಪ್ಪ ಈಗ್ಗೆ ಹದಿನೇಳು ವರ್ಷದ ಹಿಂದೆ ಕಣ್ಮುಚ್ಚಿದ. ಆತನ ಹೆಂಡತಿ ಕಸ್ತೂರಿ ಮಕ್ಕಳೊಂದಿಗೆ ಕಂಗಾಲಾಗಿ ನಿಂತಿದ್ದರು. ಆದರೆ ಗಂಡನ ಮರಣಾನಂತರ ಮಿಲ್ಲಿನಲ್ಲಿ ಆಕೆಗೊಂದು ಕೆಲಸ ಸಿಕ್ಕ ಹೊರತಾಗಿ ಮತ್ತಾವ ಸೌಕರ್ಯಗಳೂ ಸಿಗಲಿಲ್ಲ. ಈ ಸಂದರ್ಭದಲ್ಲಾಗಲೇ ಗೋಕಾಕ್ ಮಿಲ್ಲಿನ ಆಡಳಿತ ಮಂಡಳಿಗೆ ಎಂ.ಡಿ. ಆಗಿ ವಕ್ಕರಿಸಿದವನು ಎಚ್.ಎಸ್.ಭಾಸ್ಕರ್.

ಭಾಸ್ಕರ್ ಕಾರ್ಮಿಕರನ್ನು ಕಣ್ಣೀರಿಡಿಸುವ ಮೂಲಕವೇ ಕೆಲಸ ಆರಂಭಿಸಿದವನು 70-80 ವರ್ಷಗಳಿಂದ ವಾಸಿಸುತ್ತಿದ್ದ ಕಾರ್ಮಿಕರನ್ನು ಮನೆಯಿಂದ ಹೊರದಬ್ಬಲಾರಂಭಿಸಿದ. 2010ರ ನವೆಂಬರ್ 1ರಂದು ಕಸ್ತೂರಿಯ ಮನೆಗೆ ಖಾಸಗಿ ಗೂಂಡಾಗಳನ್ನು ಛೂಬಿಟ್ಟ ಭಾಸ್ಕರ ಮನೆ ಛಾವಣಿ ಕೀಳಿಸಿ ಸಾಮಾನು ಸರಂಜಾಮು ಚೆಲ್ಲಾಪಿಲ್ಲಿಯಾಗಿಸಿ ಗೂಂಡಾಗಿರಿ ನಡೆಸಿದ್ದ. ಈ ಬಗ್ಗೆ ಪತ್ರಿಕೆ ವಿಸ್ತೃತ ವರದಿ ಪ್ರಕಟಿಸಿತ್ತು. ಆದರೆ 2011ರ ಮೇ ತಿಂಗಳಲ್ಲಿ ಮತ್ತೊಮ್ಮೆ ಕಸ್ತೂರಿ ಮನೆ ಮೇಲೆ ಖಾಸಗಿ ಗೂಂಡಾಗಳನ್ನು ಛೂಬಿಟ್ಟ ಭಾಸ್ಕರ ಕಸ್ತೂರಿಯ ಕೊನೇ ಮಗನ ಕೈಕಾಲು ಕಟ್ಟಿಹಾಕಿ ಮನೆ ಖಾಲಿ ಮಾಡಿಸಿ ಇಡೀ ಕುಟುಂಬ ವನ್ನು ಬೀದಿಗೆ ತಳ್ಳಿದ.

ಈ ನಡುವೆಯೇ ಕಸ್ತೂರಿ ಖಾನಪ್ಪ ತಮಗೆ ನ್ಯಾಯಯುತವಾಗಿ ಬರಬೇಕಿದ್ದ ಸವಲತ್ತುಗಳಿಗಾಗಿ ನ್ಯಾಯಾಲಯದ ಮೊರೆಹೋದರು. ಲೋಕ ಅದಾಲತ್ ಖಾನಪ್ಪನ ಸೇವೆಗಾಗಿ ಕೊಡಬೇಕಾದ ಎಲ್ಲಾ ಸವಲತ್ತುಗಳನ್ನು ಪೂರೈಸಬೇಕೆಂದು ಮಿಲ್‌ನ ಆಡಳಿತ ಮಂಡಳಿಗೆ ತಾಕೀತು ಮಾಡಿತು. ಆದರೆ ಈ ಕ್ಷಣಕ್ಕೂ ಸರ್ವಾಧಿಕಾರಿ ಭಾಸ್ಕರ ಅದರತ್ತ ಗಮನಹರಿಸಿಲ್ಲ. ಆದರೆ ಕಾರ್ಮಿಕರನ್ನು ಬೀದಿಗೆ ತಳ್ಳುವ ಕೆಲಸ ಮಾತ್ರ ಎಗ್ಗಿಲ್ಲದೆ ನಡೆಯುತ್ತಿದೆ.

ಕಸ್ತೂರಿ ಖಾನಪ್ಪನವರ ಕುಟುಂಬದ ಪರಿಸ್ಥಿತಿಯೇ ಮಿಲ್ಲಿನ ಬಹುತೇಕ ಕಾರ್ಮಿಕರಿಗೂ ಸುತ್ತಿಕೊಂಡಿದೆ. ಮಿಲ್ ಪ್ರದೇಶದಲ್ಲಿ ನಾಲ್ಕೈದು ತಲೆಮಾರಿಂದ ಬದುಕುತ್ತಾ, ಅದರ ಕಾರ್ಮಿಕರಾಗಿ ದುಡಿಯುತ್ತಿದ್ದ ಫಕೀರಮ್ಮ ಪಾತ್ರೂಟ್ ಕುಟುಂಬಕ್ಕೂ ಅದೇ ಗತಿಯಾಗಿದೆ. ಇವರದ್ದು ಗಂಟಿಚೋರ ಜನಾಂಗ. ಬ್ರಿಟಿಷ್ ಸರ್ಕಾರ ಗಂಟಿ ಚೋರರನ್ನ ಅಪರಾಧಿ ಜನಾಂಗವೆಂದು ಗುರುತಿಸಿ ಪುನರ್ವಸತಿ ನೀಡುವ ನಿಟ್ಟಿನಲ್ಲಿ ಈ ಪ್ರದೇಶದಲ್ಲಿ ವಾಸಿಸಲು ಅನುವು ಮಾಡಿಕೊಟ್ಟಿತ್ತು. ಇದು ಮಿಲ್ ಅಸ್ತಿತ್ವಕ್ಕೆ ಬರುವ ಪೂರ್ವದಲ್ಲೇ ನಡೆದ ವಿದ್ಯಮಾನ. ಇಂದಿಗೂ ಸರ್ಕಾರದ ಅಧಿಕೃತ ದಾಖಲೆಗಳಲ್ಲಿದು ಗೋಕಾಕ್ ಫಾಲ್ಸ್ ಪ್ರದೇಶ ಸೆಟಲ್‌ಮೆಂಟ್ ಏರಿಯಾ ಅಂತಲೇ ಗುರ್ತಿಸಲ್ಪಟ್ಟಿದೆ.

ಇಂಥ ಪ್ರದೇಶದಲ್ಲಿ ಬದುಕುತ್ತಿದ್ದ ಫಕೀರಮ್ಮ ಪಾತ್ರೂಟ್ ಕುಟುಂಬವನ್ನು ದುಷ್ಟ ಭಾಸ್ಕರ 2010ರಲ್ಲಿ ಬೀದಿಗೆ ತಳ್ಳಿದ. ಈ ಬಗ್ಗೆ ಎಲ್ಲೇ ದೂರು ದಾಖಲಿಸಿದರೂ ಕೂಡ ಯಾವ ಪ್ರಯೋಜನ ಆಗಲಿಲ್ಲ.

ಇನ್ನು ಮಿಲ್‌ನ ಆಡಳಿತ ಮಂಡಳಿ ವಿರುದ್ಧ ಧರಣಿ, ಹೋರಾಟ ನಡೆಸಿದರೆ ಅದರಲ್ಲಿ ಪಾಲ್ಗೊಂಡ ಕಾರ್ಮಿಕರ ಕುಟುಂಬ ದಿನದೊಪ್ಪತ್ತಲ್ಲೇ ಬೀದಿಪಾಲಾಗುವುದು ಖಚಿತ. 2001ರಲ್ಲೂ ಇಂಥದ್ದೇ ಒಂದು ಧರಣಿ ನಡೆದಿತ್ತು. ಇದರಲ್ಲಿ ಮಿಲ್ಲಿನ ಮಾಜಿ ನೌಕರ ಕೆಂಪಣ್ಣ ಭರನಟ್ಟಿಯೂ ಪಾಲ್ಗೊಂಡಿದ್ದ. ನಿವೃತ್ತಿಯ ಬಳಿಕ ಮಿಲ್ಲಿನ ಕಡೆಯಿಂದ ಯಾವುದೇ ಸೌಕರ್ಯ ಬಾರದೆ ಪಾನ್‌ಶಾಪ್ ಇಟ್ಟುಕೊಂಡು ಬದುಕುತ್ತಿದ್ದ ಭರನಟ್ಟಿ ಅಂಗವಿಕಲ. ಆದರೆ ಮಿಲ್ಲಿನ ರಕ್ಕಸ ಪಡೆ ಆತನ ಪಾನ್ ಶಾಪ್ ಅನ್ನೇ ಸುಟ್ಟು ಕೇಕೆ ಹಾಕಿತು. ಅಲ್ಲದೆ ಧರಣಿಯಲ್ಲಿ ಪಾಲ್ಗೊಂಡ 14 ಜನರ ಮನೆಗಳನ್ನು ಕೆಡವಿ ನಿರ್ಗತಿಕರನ್ನಾಗಿಸಿತು.

ಕಾರ್ಮಿಕರನ್ನು ಕಾಡುವುದು ಮಿಲ್ಲಿನ ಆಡಳಿತ ಮಂಡಳಿಗೆ ಸಾಂಕ್ರಾಮಿಕ ಕಾಯಿಲೆಯಾಗಿ ಅಮರಿಕೊಂಡಂತಿದೆ. 1995ರಲ್ಲಿ ಆಡಳಿತ ಮಂಡಳಿಯ ಕಡೆಯಿಂದ ದೊಡ್ಡ ಮಟ್ಟದಲ್ಲಿ ಕಾರ್ಮಿಕ ಹನನ ಕಾರ್ಯ ನಡೆದಿತ್ತು. ಅಖಂಡ ಸಾವಿರಾರು ಮಂದಿಯನ್ನು ನೂರಾರು ಟ್ರಕ್ಕುಗಳಲ್ಲಿ ಕಳಿಸಿದ ಆಡಳಿತ ಮಂಡಳಿ ನೂರಾರು ಕಾರ್ಮಿಕರ ಮನೆಗಳನ್ನು ಧ್ವಂಸಗೊಳಿಸಿತ್ತು. ಇನ್ನೇನು 200ರಷ್ಟು ಕುಟುಂಬಗಳು ಬೀದಿಗೆ ಬೀಳಲಿದ್ದವು. ಆದರೆ ಸಕಾಲದಲ್ಲಿ ಬೆಳಗಾವಿ ಜಿಲ್ಲಾಧಿಕಾರಿಗಳು ಸ್ಥಳಕ್ಕಾಗಮಿಸಿ ಅನಾಹುತ ತಡೆದಿದ್ದರು. ಆದರೆ ಬೀದಿಗೆ ಬಿದ್ದವರಿಗೆ ಇಂದಿಗೂ ನ್ಯಾಯ ಸಿಕ್ಕಿಲ್ಲ.

ಸದ್ಯ ಆಡಳಿತ ಮಂಡಳಿಯ ಎಂ.ಡಿ. ಭಾಸ್ಕರ ಎಲ್ಲಾ ಕಾರ್ಮಿಕ ಕುಟುಂಬಗಳನ್ನು ಬೀದಿಪಾಲು ಮಾಡಲು ಪಣ ತೊಟ್ಟು ನಿಂತಿದ್ದಾನೆ. ಈ ಕೆಲಸವನ್ನು ಆದಷ್ಟು ಬೇಗ ಮುಗಿಸಿ ಅಖಂಡ ಸಾವಿರ ಎಕರೆಯಲ್ಲಿ ಒಂದಷ್ಟನ್ನು ನುಂಗುವುದು ಆತನ ಹುನ್ನಾರ. ಈತ ಕಾರ್ಮಿಕರನ್ನು ಗೋಳಾಡಿಸಲು ಮಿಲ್ಲಿನ ಸೆಕ್ಯುರಿಟಿಗಳನ್ನೇ ಬಳಸಿಕೊಳ್ಳುತ್ತಾನೆ. ಈ ಕೆಲಸ ಮಾಡುವವರೆಲ್ಲ ಮಾಜಿ ಸೈನಿಕರು. ಮಂಡಳಿಯ ಹುಕುಂ ಅನ್ನು ಮಾನವೀಯತೆಯೇ ಇಲ್ಲದೆ ಪಾಲಿಸುವ ಈ ಮಾಜಿ ಸೈನಿಕ ಪಡೆ ಬಡ ಕಾರ್ಮಿಕರನ್ನು ಅಮಾನುಷವಾಗಿ ಬೀದಿಗೆ ತಳ್ಳುತ್ತಿದೆ.

ದುರಂತವೆಂದರೆ, ಈ ಭಾಗದ ಜನಪ್ರತಿನಿಧಿಗಳು, ಪೊಲೀಸರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಆಡಳಿತ ಮಂಡಳಿಯ ಎಂಜಲ ಮಡುವಿಗೆ ಬಿದ್ದಿದ್ದಾರೆ. ಆದುದರಿಂದಲೇ ಇಷ್ಟೆಲ್ಲ ಅನಾಹುತಗಳು ನಡೆದರೂ ಒಂದು ಪ್ರಕರಣವೂ ದಾಖಲಾಗುತ್ತಿಲ್ಲ. ಇದರ ಬಲದಿಂದಲೇ ಆಡಳಿತ ಮಂಡಳಿ ಕಾರ್ಮಿಕರ ಕೈಕಾಲು ಕಟ್ಟಿ ಊರ ನಡುವಿನ ಕಟ್ಟೆಯಲ್ಲಿ ಕೂರಿಸಿ ಅವರೆದುರೇ ಮನೆ ಧ್ವಂಸ ಮಾಡುತ್ತಿದ್ದಾರೆ. ದೈಹಿಕ ಹಲ್ಲೆಗಳನ್ನೂ ನಡೆಸುತ್ತಿದ್ದಾರೆ. ಬಡ ಕಾರ್ಮಿಕರ ಬದುಕುವ ಹಕ್ಕನ್ನೇ ಕಿತ್ತುಕೊಳ್ಳುತ್ತಿದ್ದಾರೆ.

ಗೋಕಾಕ್ ಫಾಲ್ಸ್ ಏರಿಯಾ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಳಪಟ್ಟಿಲ್ಲವೇ?



ಗೂಂಡಾಗಿರಿಯ ಸ್ಯಾಂಪಲ್...

• ಬಾಗಿಲಗದ್ದೆ

ಚಾನೆಲ್ ಮಂದಿಗಿದು ಸುದ್ದಿಯಲ್ಲ!


ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ಟಿವಿ ಚಾನೆಲ್‌ಗಳು ಟಿಆರ್‌ಪಿ ರೇಟಿನ ರೇಸಿಗೆ ಬಿದ್ದು ಮನುಷ್ಯತ್ವಕ್ಕೆ ಬೆನ್ನು ತಿರುಗಿಸಿವೆಯಾ?

ಗೋಕಾಕ್ ಮಿಲ್ ಕಾರ್ಮಿಕರ ದಯನೀಯ ಪರಿಸ್ಥಿತಿ ನೋಡಿದರೆ ಮೇಲ್ಕಂಡ ಪ್ರಶ್ನೆ ಯಾರಿಗಾದರೂ ಕಾಡದಿರದು. ಯಾಕೆಂದರೆ ಆಡಳಿತ ಮಂಡಳಿ ಕಾರ್ಮಿಕರ ಮೇಲೆ ಗೂಂಡಾಗಿರಿ ನಡೆಸಿದರೂ, ಇಲ್ಲಿ ಪಕ್ಕಾ ಪಾಳೇಗಾರಿಕೆ ವಿಜೃಂಭಿಸುತ್ತಿದ್ದರೂ ಒಂದೇ ಒಂದು ಚಾನೆಲ್‌ನಲ್ಲಿ ಈ ಬಗ್ಗೆ ಪ್ರಸ್ತಾಪವಾದ ಉದಾಹರಣೆಗಳಿಲ್ಲ.


ಹಾಗಂತ ಈ ವಿಚಾರವೇ ಕನ್ನಡ ವಾಹಿನಿಗಳ ಗಮನಕ್ಕೆ ಬಂದಿಲ್ಲವೆಂದೇನೂ ಅಲ್ಲ. ಆಡಳಿತ ಮಂಡಳಿ ದಾಂಧಲೆಯೆಬ್ಬಿಸಿದಾಗೆಲ್ಲ ಇಲ್ಲಿನ ಮಂದಿ ವಿವಿಧ ಚಾನೆಲ್ ವರದಿಗಾರರಿಗೆ ದುಂಬಾಲು ಬಿದ್ದರೂ ಯಾರೊಬ್ಬರೂ ಇತ್ತ ಸುಳಿಯುವುದಿಲ್ಲ.

ಅದ್ಯಾವಳೋ ನಟಿ ಬಸುರಾದರೆ, ಇನ್ಯಾವಳದ್ದೋ ಹುಕ್ಕು ಸಡಿಲಾದರೆ ಉಸಿರು ಬಿಗಿ ಹಿಡಿದು ಹೈಪೋಟಿಗೆ ಬಿದ್ದು ಸುದ್ದಿ ಮಾಡುವ ಚಾನೆಲ್‌ಗಳಿಗೆ ಬಡವರ ಗೋಳು ಕೇಳಿಸದಿರುವುದು ನಿಜಕ್ಕೂ ದುರಂತ.

ಲೋಕಾಯುಕ್ತ ವರದಿ ಅಧಿಕೃತ ಕಳ್ಳ




ಗಣಿ ಅಕ್ರಮ ಕುರಿತ ಲೋಕಾಯುಕ್ತರ ವರದಿ ಅನಧಿಕೃತವಾಗಿ ಬಿಡುಗಡೆಯಾಗಿ ಹೋಗಿದೆ. ಆದರೆ ಈ ವರದಿ ಒಂದು ಸಾರಿ ರಾಜ್ಯ ಸರ್ಕಾರದ ಕೈಗೆ ಹೋದ ಮೇಲೆ ಅಧಿಕೃತವಾಗಿ ಬಿಡುಗಡೆಯಾಗುವ ಸಾಧ್ಯತೆ ಕಡಿಮೆ ಇದೆ. ಅದೇ ರೀತಿ ಇದುವರೆಗೆ ಅನಧಿಕೃತ ಕಳ್ಳ ಎನಿಸಿಕೊಂಡಿದ್ದ ಮುಖ್ಯಮಂತ್ರಿ ಈಗ ಅಧಿಕೃತ ಕಳ್ಳ ಎನಿಸಿಕೊಂಡಿದ್ದಾನೆ. ಇವೆರಡು ಹೊಸ ವಿಚಾರ ಬಿಟ್ಟರೆ ಲೋಕಾಯುಕ್ತರ ವರದಿಯಲ್ಲಿ ಬೇರೆ ಏನೇನಿರಲು ಸಾಧ್ಯ?



ರೆಡ್ಡಿ ಸೋದರರ ಚೋರ ಪುರಾಣ, ಸರ್ಕಾರಿ ಅಧಿಕಾರಿಗಳ ಶಾಮೀಲು, ಗಣಿ ಕಳ್ಳರಿಂದ ಯಡ್ಡಿ ಮಕ್ಕಳು ತಮ್ಮ ಪ್ರೇರಣಾ ಟ್ರಸ್ಟ್‌ಗೆ ಅಕ್ರಮವಾಗಿ ಹಣ ಪಡೆದ ವಿಚಾರಗಳೂ ಈ ವರದಿಯಲ್ಲಿ ಖಂಡಿತಾ ಇರುತ್ತವೆ.

ರಾಜ್ಯದ ಜನರಿಗೆ ಈ ವಿಚಾರಗಳೆಲ್ಲಾ ಗೊತ್ತಿಲ್ಲ ಎಂದೇನೂ ಇಲ್ಲ. ಆದರೆ ಲೋಕಾಯುಕ್ತರು ಈಗ ದಾಖಲೆ ಪುರಾವೆ ಸಮೇತ ಈ ಆರೋಪಗಳನ್ನು ಸಾಬೀತು ಮಾಡುತ್ತಿದ್ದಾರಷ್ಟೇ.


ಕಳೆದ ಎರಡೂವರೆ ವರ್ಷಗಳಿಂದಲೂ 'ಲಂಕೇಶ್' ಈ ಗಣಿ ಹಗರಣಗಳ ಬಗ್ಗೆ ದಾಖಲೆ ಸಹಿತ ವರದಿಗಳನ್ನು ಪ್ರಕಟಿಸಿತ್ತು. ಈಗಿನ ಲೋಕಾಯುಕ್ತ ವರದಿಯೂ ಪತ್ರಿಕೆಯ ತನಿಖಾ ವರದಿಗಳಿಗೆ ಸಮರ್ಥನೆ ನೀಡುವಂತಿದೆ. ಸೋಮಣ್ಣನ ಗಣಿ ದಂಧೆ, ಪ್ರೇರಣಾ ಟ್ರಸ್ಟ್‌ಗೆ ಹಣ ನೀಡಿದ್ದು, ಅನಿಲ್ ಲಾಡ್‌ನ ಗಣಿ ದಂಧೆ, ರೆಡ್ಡಿಗಳ ಅಕ್ರಮಗಳು .... ಒಂದಾ ಎರಡಾ



ಗಣಿಹಗರಣದ ಬಗ್ಗೆ ಪತ್ರಿಕೆ ಮಾಡಿದ ವರದಿಗಳು

ಈಗಿನ ಪ್ರಶ್ನೆ ಏನೆಂದರೆ ವರದಿಯ ಬಗ್ಗೆ ಯಡ್ಡಿ ಸರ್ಕಾರದ ಪ್ರತಿಕ್ರಿಯೆ ಏನಿರುತ್ತದೆಂಬುದಷ್ಟೇ ಆಗಿದೆ. ಈಗ ದೇಶಬಿಟ್ಟು ಓಡಿಹೋಗಿರುವ ಯಡ್ಡಿ ಮಾರಿಷಸ್‌ನಿಂದ ನಾಳೆ ವಾಪಸ್ ಬಂದಮೇಲೆ ಏನು ಮಾಡಬಹುದು?

ಮುಖ್ಯಮಂತ್ರಿಯ ಕಚೇರಿಯ ಕೆಲವರು ಹೇಳುವುದೇನೆಂದರೆ ಸಿಎಂ ಇದಕ್ಕೆ ಕೇರ್ ಮಾಡುವುದಿಲ್ಲ. ವರದಿ ಕೈ ಸೇರಿದ ನಂತರ ಕ್ಯಾಬಿನೆಟ್ ಮುಂದೆ ಇರಿಸಿ, ನಂತರ ಅದರ ಪರಿಶೀಲನೆಗೆ ಕ್ಯಾಬಿನೆಟ್ ಉಪಸಮಿತಿ ರಚಿಸಿ ಕೈತೊಳೆದುಕೊಳ್ಳುತ್ತಾರೆ ಅಷ್ಟೆ ಅನ್ನುತ್ತಿವೆ ಆ ಮೂಲಗಳು. ಬಹುಶಃ ಈ ಅನುಮಾನ ಇರುವ ಕಾರಣದಿಂದಲೇ ಲೋಕಾಯುಕ್ತ ಸಂತೋಷ್ ಹೆಗ್ಡೆ ತಮ್ಮ ವರದಿಯ ಜಾರಿಯ ಬಗ್ಗೆಯೇ ಅನುಮಾನ ವ್ಯಕ್ತಪಡಿಸಿರುವುದು. 2008 ರಲ್ಲೇ ನೀಡಿದ್ದ ಮಧ್ಯಂತರ ವರದಿ ಮೂಲೆಗುಂಪಾಗಿರುವುದನ್ನು ಅವರು ಮರೆತಿಲ್ಲ.



ಬಿಜೆಪಿ ಹೈಕಮಾಂಡ್ ಕಷ್ಟಗಳು

ಕಾಂಗ್ರೆಸ್‌ನ ಕೇಂದ್ರ ಸರ್ಕಾರದ ಭ್ರಷ್ಟಾಚಾರಗಳ ಬಗ್ಗೆ ಚೀರಿಕೊಳ್ಳುತ್ತಿರುವ ಬಿಜೆಪಿ ಹೈಕಮಾಂಡ್‌ಗೆ ಯಡ್ಡಿಯ ಭ್ರಷ್ಟಾಚಾರ ಈಗ ನುಂಗಲಾರದ ತುತ್ತಾಗಿದೆ. ಯಡ್ಡಿ ಇದಕ್ಕೊಂದು ಪರಿಹಾರ ಸೂಚಿಸಿ 'ಶೋಭಾ ಸಿಎಂ ಆಗಲಿ, ನಾನು ರಾಜೀನಾಮೆ ನೀಡಿ ಪಾರ್ಟಿ ಪ್ರೆಸಿಡೆಂಟ್ ಆಗುತ್ತೇನೆ' ಅಂದದ್ದನ್ನು ಹೈಕಮಾಂಡ್ ಒಪ್ಪಿಲ್ಲ. ಜಗದೀಶ್ ಶೆಟ್ಟರ್ ಒಳಗೊಂಡಂತೆ ಬಹುತೇಕ ಹಿರಿಯ ಮಂತ್ರಿಗಳು 'ಶೋಭಾ ಸಿಎಂ ಆಗುವುದಾದರೆ ನಾವು ತಕ್ಷಣ ರಾಜೀನಾಮೆ ಕೊಡುತ್ತೇವೆ' ಎಂದು ಬೆದರಿಸಿದ್ದಾರೆ. ಕರ್ನಾಟಕದ ಗಣಿ ಹಣದಲ್ಲಿ ಪಾಲು ತೆಗೆದುಕೊಂಡಿರುವ ಗಡ್ಕರಿ ಯಡ್ಡಿ ಪರ ಇದ್ದರೆ ಅಡ್ವಾಣಿಗೆ ಯಡ್ಡಿ ಮುಖ ನೋಡುವುದೂ ಬೇಡವಾಗಿದೆ. ಮತ್ತೊಂದೆಡೆ ಕಾಂಗ್ರೆಸ್ ದೆಹಲಿಯಲ್ಲಿ ಬಿಜೆಪಿಗಳ ವಿರುದ್ಧ ಯಡ್ಡಿ ಅಸ್ತ್ರ ಪ್ರಯೋಗಿಸಿ ಬಾಯಿ ಮುಚ್ಚಿಸಲು ಸಜ್ಜಾಗುತ್ತಿದೆ.

ಬಹುಶಃ ಇದನ್ನು ಜೀರ್ಣಿಸಿಕೊಳ್ಳಲು ಯಡ್ಡಿಗೆ ಕೊಂಚ ಕಷ್ಟವಾಗಬಹುದು. ಅದಕ್ಕೆ ಯಡ್ಡಿ ಗ್ಯಾಂಗ್ ಹೊಸ ಪ್ಲಾನ್ ಹುಡುಕಿದೆ.

ಶಿವರಾಜ್ ಪಾಟೀಲ್ ಹೊಸ ಲೋಕಾಯುಕ್ತರಾಗುತ್ತಾರಾ?

ಆಗಸ್ಟ್ ಮೊದಲ ವಾರದಲ್ಲಿ ನಿವೃತ್ತರಾಗುತ್ತಿರುವ ಸಂತೋಷ್ ಹೆಗ್ಡೆ ಜಾಗಕ್ಕೆ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಾಧೀಶ ಶಿವರಾಜ್ ಪಾಟೀಲರನ್ನು ತಂದು ಕೂರಿಸುವ ಮಾತು ಯಡ್ಡಿ ಕ್ಯಾಂಪ್‌ನಲ್ಲಿ ಕೇಳಿಬರುತ್ತಿದೆ. ಈತ ಹೇಳಿಕೇಳಿ ಲಿಂಗಾಯತ. ಹಾಲಿ 2ಜಿ ಸ್ಪೆಕ್ಟ್ರಂ ಹಗರಣದ ತನಿಖೆ ನಡೆಸುತ್ತಿರುವ ಆಯೋಗದ ಮುಖ್ಯಸ್ಥರಾಗಿರುವ ಶಿವರಾಜ್ ಪಾಟೀಲ್ ರಾಯಚೂರಿನವರು. ಮೈಸೂರಿನ ಸುತ್ತೂರು ಸ್ವಾಮಿಯ ಆಪ್ತನೀತ. ಆ ಕಾರಣದಿಂದಲೇ ಯಡ್ಡಿ ಸರ್ಕಾರ ನಂಬಬಹುದಾದ ವ್ಯಕ್ತಿಯೂ ಹೌದೆಂಬ ಲೆಕ್ಕಾಚಾರ ನಡೆದಿದೆ.

ಈ ಶಿವರಾಜ್ ಪಾಟೀಲರನ್ನೇ ಹೊಸ ಲೋಕಾಯುಕ್ತರನ್ನಾಗಿ ನೇಮಿಸಲು ಶಿಫಾರಸ್ಸು ಮಾಡಲು ಯಡ್ಡಿ ಹೊರಟಿದ್ದಾರೆ.

ಆಗ ಸಂತೋಷ್ ಹೆಗ್ಡೆಯವರ ವರದಿಯನ್ನು ಮರುಪರಿಶೀಲನೆಗೆಂದು ವಾಪಸ್ ಕಳುಹಿಸಿ ಒಂದು ವರ್ಷ **time bargain** ಮಾಡಿಕೊಂಡರೆ ಸಾಕು ಎಂಬುದು ಯಡ್ಡಿಯ ಲೆಕ್ಕಾಚಾರ!

ಆದರೆ ಇದು ಅಷ್ಟು ಸಲೀಸಾದ ಸಂಗತಿಯಲ್ಲ. ಯಾಕೆಂದರೆ ಯಡ್ಡಿಯ ಭೂಹಗರಣವೊಂದು ಬಾಕಿ ಇದೆಯಲ್ಲ? ವಕೀಲರಾದ ಸಿರಾಜಿನ್ ಭಾಷಾ ಹಾಗೂ ಬಾಲರಾಜ್ ಯಡ್ಡಿಯ ಭೂಹಗರಣದ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ಸಲ್ಲಿಸಿದ್ದ ದೂರಿನ ತನಿಖೆಗೆ ಇದ್ದ ತಡೆಯಾಜ್ಞೆ ಈಗ ತೆರವುಗೊಂಡಿದೆ. ಈ ಭೂಹಗರಣದಲ್ಲಿ ಯಡ್ಡಿ ಆರೋಪಿ ನಂಬರ್ ಒನ್.

ಈಗಲೂ ಯಡ್ಡಿ ರಾಜೀನಾಮೆ ಕೊಡದಿದ್ದರೆ ಬಿಜೆಪಿಗಳಿಗೆ ನಾಚಿಕೆ, ಮಾನ ಮರ್ಯಾದೆ ಒಂದೂ ಇಲ್ಲ ಅನ್ನಬೇಕಾಗುತ್ತವೆ?

• ಪಾರ್ವತೀಶ

ಮುಂದು ಬರೊರು ನಿಮ್ಮಂಗೆ ಇದ್ರೆ ಆತ್ಮಹತ್ಯೆ ಮಾಡಿಕೊಳ್ತಿನಿ ಸಾರ್

ಥೂತ್ತೇರಿ — ಯಾಹೂ

ಲೋಕಾಯುಕ್ತ ಸಂತೋಷ್ ಹೆಗಡೆಯವರು ತಯಾರಿಸಿರುವ ಗಣಿಕಳ್ಳತನದ ವರದಿ ತಳದಲ್ಲೇ ಸೋರಿದೆಯಂತಲ್ಲಾ. ಇದರಿಂದ ಹಲವಾರು ಘಟಾನುಘಟಿ ರಾಜಕಾರಣಿಗಳ ಮುಖದಲ್ಲಿ ಯಾವುದೇ ಆತಂಕವಿಲ್ಲದೆ ಆರಾಮಾಗಿದ್ದಾರಂತಲ್ಲ, ಇದನ್ನು ನೋಡಿ ಎಡೂರಪ್ಪನ ಮುಖ ಮನಸ್ಸು ಹೇಗಿದೆಯೆಂಬುದನ್ನು ತಿಳಿದುಕೊಳ್ಳಬೇಕೆನಿಸಿತಲ್ಲಾ. ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಯಾರೇ ಕೂಗಾಡಲಿ, ಊರೇ ಹೋರಾಡಲಿ, ನಿನ್ನ ನೆಮ್ಮದಿಗೆ ಭಂಗವಿಲ್ಲ, ಎಮ್ಮೆ ನಿನಗೆ....."

"ಹಲೋ ಯಾರು?"

"ನಾನು ಸಾರ್ ಯಾಹು. ನಿಮ್ಮ ಜೊತೆ ಮಾತಾಡನ ಅಂತ ಫೋನ್ ಮಾಡಿದೆ. ಹ್ಯಾಗಿದೆ ಸಾರ್ ಮಾರಿಷಸ್?"

"ತುಂಬಾ ಚೆನ್ನಾಗಿದೆ. ಇಲ್ಲೊಂದು ರೆಸಾರ್ಟ್‌ಲ್ಲಿ ಉಳಕೊಂಡಿದ್ದಿವಿ. ನನ್ನ ಮೊಮ್ಮಕ್ಕಳು ಆಟ ಆಡ್ತಾಯಿದಾರೆ. ಇನ್ನ ಮಕ್ಕಳು ತಮ್ಮ ಆದಾಯ, ಆಸ್ತಿ ಖರೀದಿ ಬಗೆ ಮಾತಾಡ್ತ ಕಾಲ ಕಳಿತಾಯಿದಾರೆ. ಈ ಜಾಗ ನೋಡ್ತಾಯಿದ್ರೆ ಮತ್ತೆ ಕರ್ನಾಟಕಕ್ಕೆ ಹೋಗದೇ ಬೇಡಾ ಅನ್ನಿಸ್ತಾಯಿದೆ ಯಾಹೂ."

"ನಿಮ್ಮ ಅನ್ನಿಸಿಕೆ ಸರಿ ಸಾರ್. ಈ ಟೈಮಲ್ಲಿ ನೀವು ಇಲ್ಲಿ ಇಲ್ದೆಯಿರದೇ ಒಳ್ಳೆದಾಯ್ತು, ಯಾವ ಪತ್ರಿಕೆ ನೋಡಿದ್ರೂ ಬರೀ ಗಣಿಧೂಳು. ಎಲ್ಲಾ ಪಾರ್ಟಿಯವರೂ ಸಿಕ್ಕಿಬಿದ್ದಿರೋದ್ರಿಂದ ಪರಸ್ಪರ ಖುಷಿಯಾಗಿದ್ದಾರೆ ಸಾರ್."

"ಯಾರ್‍ಯಾರು ಸಿಕ್ಕಿ ಬಿದ್ದಿದಾರೆ ಯಾಹೂ?"

"ಅದು ನಿಮಗೂ ಗೊತ್ತಲ್ಲ ಸಾರ್. ಆ ಸೋಮಣ್ಣ ಮಹಾ ಸಭ್ಯಸ್ಥನಂಗೆ ಮಾತಾಡತಿದ್ದ. ಅವನೂ ಸಿಗ್ಹಾಯ್ಕಂಡವ್ನನೆ."

"ಅವನು ಆ ದಂಧೆ ಮಾಡಿದ ಕಾರಣಕ್ಕೇ ನಮ್ಮ ಜೊತೆ ಬಂದಿದ್ದು, ಇಲ್ಲ ಅಂದ್ರೆ ಕಾಂಗ್ರೆಸ್ನಲ್ಲೇ ಇರತಿದ್ದ."

"ಈಗ ವರದಿ ಬಂದಿದೆಯಲ್ಲ ಮುಂದಿನ ಕ್ರಮ ಏನು ಸಾರ್?"

"ಕ್ರಮ ಏನೂಯಿಲ್ಲ. ವರದಿ ಕೊಡೋದು ಅವುರ ಜವಾಬ್ದಾರಿ. ಉತ್ತರ ಕೊಡದು ನಮ್ಮ ಜವಾಬ್ದಾರಿ. ಯಾವುದೇ ವರದಿಯಿಂದ ಏನೂ ಆಗಲ್ಲ ಅನ್ನದು ನನಿಗೆ ಚೆನ್ನಾಗಿ ಗೊತ್ತು. ಒಂದು ವಾರ ಕಳೆದ ಮೇಲೆ ಎಲ್ರೂ ಸುಮ್ಮನಾಗ್ತರೆ. ನಾನು ಈ ಹಿಂದೆ ಎದುರಿಸಿದ ಸಮಸ್ಯೆಗಿಂತ ದೊಡ್ಡ ಸಮಸ್ಯೆ ಅಲ್ಲ ಇದು. ಸುದೈವಕ್ಕೆ ನನ್ನ ಜೊತೆ ವಿರೋಧ ಪಕ್ಷದೋರು ಇರೋದರಿಂದ 'ನೀವು ಮಾಡಿಲ್ವೊ? ನಿಮ್ಮ ಕತೆ ನನಿಗೂ ಗೊತ್ತು' ಅಂತ ಮಾತಾಡಬವುದು."

"ಅಂತೂ ಲೋಕಾಯುಕ್ತರ ವರದಿ ತಿರಸ್ಕರಿಸಕ್ಕೆ ನಿಮ್ಮ ಜೊತೆ ವಿರೋಧ ಪಕ್ಷದವರೂ ಇರತರೆ ಅನ್ನಿ."

"ಇರ್ಲೆಬೇಕಲ್ಲ, ಯಾರೂ ಹೆಚ್ಚೂ ಇಲ್ಲ, ಯಾರೂ ಕಡಮೆನೂ ಇಲ್ಲ, ಎಲ್ಲರೂ ಅಪರಾಧಿಗಳಾಗಿದ್ದೀವಿ."

"ಇನ್ನೊಂದು ವಿಷಯ ಸಾರ್. ನಿಮ್ಮ ಮಕ್ಕಳೆಲ್ಲಾ ಭ್ರಷ್ಟರಾಗಿ ಬಿಟ್ರಲ್ಲ, ಕಾರಣ ಏನು?"

"ದೇವೇಗೌಡರ ಇಡೀ ಫ್ಯಾಮಿಲಿ ಭ್ರಷ್ಟರಾಗ್ಯವುರಲ್ಲ, ಅದು ಕಾಣಲ್ವ ನಿಮಗೆ? ಬರಿ ಎಡೂರಪ್ಪನ್ನೆ ಕೇಳ್ತಿರಲ್ಲ."

"ಅವುರ ಮಕ್ಕಳ್ಯಾರು ಪತ್ರಕರ್ತರ ಸೈಟಿನ ಕೋಟಾ ಹೊಡೆದಿಲ್ಲ ಸಾರ್. ಆದೇ ನಿಮ್ಮ ಮಗಳು ಪತ್ರಕರ್ತರ ನಾಲ್ಕು ಸೈಟನ್ನ ಹೊಡಕಂಡವ್ಳೆ?"

"ಒಂದೇ ಒಂದು ಸೈಟ್ ತಗೊಂಡ್ರೆ ಅದರಲ್ಲೇನು ಮಾಡಕ್ಕಾಗುತ್ತೆರಿ? ಅದೇ ನಾಲ್ಕು ಸೈಟು ತಗೊಂಡ್ರೆ ಏನಾದ್ರು ಮಾಡಬವುದು. ಆ ಸೈಟ್ ತಗಂಡೋರು ಮನೆ ಕಟ್ಕೊ ಸ್ಥಿತಿಲಿರಲಿಲ್ಲ. ಒಳ್ಳೆ ಬೆಲೆಗೆ ಮಾರಾಟ ಮಾಡಿದಾರೆ. ಅವುರೆಗೂ ಅನುಕೂಲ, ನನ್ನ ಮಗಳ ವ್ಯವಹಾರಕ್ಕೂ ಅನುಕೂಲಾಯ್ತಲ್ಲ."

"ನಾನು ಮುಖ್ಯಮಂತ್ರಿ, ಅವರ ಮಗಳು, ಪ್ರಭಾವ, ಭ್ರಷ್ಟ ಕೆಲಸ, ಇಂತ ನೈತಿಕತೆ ಮನಸ್ಸಿನಲ್ಲಿಟ್ಕಗೊಂಡು ಕೇಳಿದೆ ಸಾರ್."

"ಈಗಿನ ರಾಜಕಾರಣದಲ್ಲಿ ಅವೆಲ್ಲಾ ಅಪ್ರಸ್ತುತ ಕಂಡ್ರಿ. ಅಧಿಕಾರ ಇದ್ದಾಗ ಎಲ್ಲಾನು ಮಾಡಿಕಬೇಕು. ಇಲ್ಲಾ ಅಂದ್ರೆ ಕಡಿದಾಳು ಮಂಜಪ್ಪ, ನಿಜಲಿಂಗಪ್ಪನ ತರ ಇರಬೇಕಾಯ್ತದೆ."

"ಅವುರು ನಡೆಸಿದ ಬದುಕಿನ ಬಗ್ಗೆ ನಿಮಗೆ ಗೌರವ ಇಲ್ವಾ?"

"ಇದೆ ಕಣ್ರೀ. ನಾನು ಅವುರಂಗೆ ಇರದಾದ್ರೆ ಮೊದಲು ನಮ್ಮ ಪಾರ್ಟಿ ಹೊರಗಾಕತ್ತೆ, ನಂತರ ನನ್ನ ಮಕ್ಕಳು ಹೊರಗಾಕ್ತರೆ. ಆಗೇನು ಮಾಡಬೇಕು ನಾನು?"

"ಬೂಕನಕೆರೆಗೋಗಿ ಬೇಸಾಯ ಮಾಡಬವುದಲ್ಲಾ."

"ನನಿಗೆ ಮೊದಲಿಂದ ಬೇಸಾಯ ಕಂಡ್ರಾಗಲ್ಲ ಕಂಡ್ರಿ."

"ಅದು ನಿಮ್ಮ ಸಹವಾಸ ದೋಷ ಸಾರ್. ಈ ದೇಶದ ಪುರೋಹಿತಶಾಹಿಗಳು ಅಂದ್ರೆ ಚೆಡ್ಡಿಗಳು ಎಂದೂ ಬೇಸಾಯ ಮಾಡಿದೋರಲ್ಲ. ಮತ್ತೆ ಬೇಸಾಯದ ಕಸುಬಿಗೆ ಬೆಲೆ ಕೊಟ್ಟವುರಲ್ಲ. ಆ ಕಸುಬಿಗೆ ಬೆಲೆ ಬಂದಿದ್ದು ಬಸವಣ್ಣನಿಂದ. ಅದ್ಕೆ ಅಲವೆ ಕರ್ನಾಟಕದ ರೈತ ಸಮೂಹ ಲಿಂಗಾಯತರಾದದ್ದು. ನೀವು ಬಸವಣ್ಣನ ಅನುಯಾಯಿಯಾಗಿದ್ದು ಬೇಸಾಯ ಮಾಡಲ್ಲ ಅಂದ್ರೆ ಆಶ್ಚರ್ಯ."

"ನನಿಗೆ ಬೇಸಾಯ ಮಾಡಕ್ಕೇ ಬರಲ್ಲ ಕಂಡ್ರೀ. ಬೇಕಿದ್ರೆ ಸೊಪ್ಪು, ತರಕಾರಿ, ನಿಂಬೆಹಣ್ಣು, ಕುಂಬಳನೆಲ್ಲಾ ಮಾರತಿನಿ. ರಾಜಕಾರಣಕ್ಕೆ ಬರೊ ಮೊದ್ಲು ಮಂಡ್ಯದಲ್ಲಿ ಇದೇ ಕೆಲಸ ಮಾಡತಿದ್ದೆ. ಇವತ್ತಿನ ದಿವಸದಲ್ಲಿ ರೈತ ಆತ್ಮಹತ್ಯೆ ಮಾಡಿಕೊಳ್ತಾಯಿದಾನೆ. ನಾನೂ ಆತ್ಮಹತ್ಯೆ ಮಾಡಿಕಳೊ ಪ್ಲಾನು ನೀವೇಳ್ತಯಿರೋದು."

"ಬೇಡಿ ಸಾರ್. ನೀವು ಆತ್ಮಹತ್ಯೆ ಮಾಡಿಕಳದು ಬೇಡಿ. ನೀವೇನಾದ್ರು ಅಂಗೆ ಮಾಡಿಕಂಡ್ರೆ, ಬ್ರಹ್ಮಾಂಡ ಭ್ರಷ್ಟತೆ, ಸ್ವಜನಪಕ್ಷಪಾತ, ಸುಳ್ಳು ಅಕ್ರಮ ದಂಧೆ ಭೂಒತ್ತುವರಿ, ಗಣಿ ಕಳ್ಳತನ ಇವುಕ್ಕೆಲ್ಲಾ ಒಂದೇ ಬಾರಿ ಗತಿ ಕಾಣಿಸಿದಂಗಾಯ್ತದೆ. ಕೆಲವು ದಿನ ಇಡೀ ಕರ್ನಾಟಕನೆ ಸ್ತಬ್ಧವಾಗಿರುತ್ತೆ, ಶಿಕಾರಿಪುರದ ಜನ ಪಟಾಕಿ ಹೊಡಿಬವುದು. ಅದಕಿಂತ ಕುಮಾರಸ್ವಾಮಿ ತಮ್ಮ ವಿರಿಯಾಗಳಲ್ಲಿ ಗರ್ಭತಲ್ಲಣದಂತಹ ಪಟಾಕಿ ಹೊಡಿಸಿ ರಂಗಾಯಣ ರಘು ತರ ಡ್ಯಾನ್ಸ್ ಮಾಡಬವುದು."

"ಅಂತದಕೆಲ್ಲಾ ನಾನು ಅವುಕಾಶ ಕೊಡಲ್ಲ ಕಂಡ್ರೀ."

"ಕೊಡಕ್ಕಾಗಲ್ಲ ಸಾರ್. ಭಂಡಬಾಳಿಗೆ ಗಂಟುಬಿದ್ದು ಬಹಳ ದೂರ ಬಂದಿರೊ ನೀವು, ಜೀವ ಹೋದ್ರು ಸರಿ ಸಂಭೋಗ ಮಾತ್ರ ಬಿಡಲ್ಲ ಅನ್ನೊ ಏಡ್ಸ್ ಗಿರಾಕಿ ತರ ಆಗಿಬಿಟ್ಟಿದ್ದಿರಿ. ಇಂತದಕ್ಕೆಲ್ಲಾ ಧೈರ್ಯ ಬೇಕು. ಅಂದ್ರೆ ಭಂಡ ಧೈರ್ಯ ಬೇಕು. ಮುಂದು ಬರೊ ಮುಖ್ಯಮಂತ್ರಿಗಳು ನಿಮ್ಮಂಗೇ ಆದ್ರೆ ನಾನಂತೂ ಆತ್ಮಹತ್ಯೆ ಮಾಡಿಕೊಳ್ತಿನಿ ಸಾರ್."

'ಥೂತ್ತೇರಿ!!!

ಸೋಗಲಾಡಿ ಸ್ವಾಮಿಗಳಿಬ್ಬರ ಬುಡಬುಡಿಕೆ!

ಉತ್ತರ ಕನ್ನಡವನ್ನು "ಕರ್ಮ ಕ್ಷೇತ್ರ" ಮಾಡಿಕೊಂಡಿರುವ ಬ್ರಾಹ್ಮಣ ಮಠಾಧೀಶರಿಬ್ಬರ ಬಡಬಡಿಕೆ ಅದ್ಯಾಕೋ ಇತ್ತೀಚೆಗೆ ಜೋರಾಗಿ ಬಿಟ್ಟಿದೆ! ರಾಮಚಂದ್ರಾಪುರ ಮಠಾಧೀಶ ರಾಘವ ಮತ್ತು ಸ್ವರ್ಣವಲ್ಲಿ ಮಠದ ಅಧಿಪತಿ ಗಂಗಾಧರ ಉತ್ತರ ಕನ್ನಡದ ಧರ್ಮಕಾರಣದ ಮೇಲೆ ಹಿಡಿತ ಸಾಧಿಸುವ ಹಠಕ್ಕೆ ಬಿದ್ದಂತೆ ಕಾವಿ ಕಸರತ್ತು ಮಾಡುತ್ತಿದ್ದಾರೆ. ಈ ಕೌಬಾಯ್ ಮತ್ತು ಪರಿಸರವ್ಯಾಧಿ ಪೋರನಿಗೆ ಒಬ್ಬನ ತಲೆ ಕಂಡರೆ ಇನ್ನೊಬ್ಬನಿಗಾಗುವುದಿಲ್ಲ. ಈ ಪುರೋಹಿತ ಶಾಹಿ ಗುರುದ್ವಯರ ಗುದ್ದಾಟದಿಂದ ಹೈಗರ ಸಮಾಜ ಬರೋಬ್ಬರಿ ಎರಡಾಗಿ ಒಡೆದು ಎಡವಟ್ಟು ಮಾಡುತ್ತಿರುವುದು ಮೋಜಾಗಿದೆ....

ಗೋಕರ್ಣದ ಅಶೋಕೆಯೇ ತನ್ನ ಮಹಾಮಠದ ಮೂಲವೆನ್ನುತ್ತ ಒಕ್ಕಲಿಸಿ ಹಣವಂತ ಮಹಾಬಲೇಶ್ವರನನ್ನು 'ಸರ್ಕಾರಿ ಬಲ'ದಿಂದ ಜೋಳಿಗೆಗೆ ಎಳೆದು ಹಾಕಿಕೊಂಡಿದ್ದ ರಾಘವನ ಆಟ ಕಂಡು ಗಂಗಾಧರ "ಅಕಟಕಟಾ... ಪಾಯಸದಲ್ಲಿ ಕಲ್ಲು ಸಿಕ್ಕಂತಾಯ್ತು......" ಎಂದು ತನ್ನ ಶಿಷ್ಯಕೋಟಿ ಎದುರು ಅಲವತ್ತುಕೊಂಡಿದ್ದ! ಗೋಕರ್ಣ ದೇವಾಲಯ ಹಸ್ತಾಂತರದ ವಿರುದ್ಧ ಬೀದಿಗೆ ಇಳಿದು ಪ್ರತಿಭಟನೆಯೂ ಮಾಡಿದ್ದ. ಆದರೆ ಆನಂತರ ಮಂತ್ರಿ ಕಾಗೇರಿ ಮಾಣಿಯ ಮಧ್ಯಸ್ಥಿಕೆಯಲ್ಲಿ ರಹಸ್ಯ ಒಪ್ಪಂದ ಮಾಡಿಕೊಂಡಿದ್ದ ಗಂಗಾಧರ ಬಾಯಿ ಮುಚ್ಚಿಕೊಂಡಿದ್ದ. ಹಾಗಂತ ಒಳಗೊಳಗೆ ಹಲ್ಲು-ಕತ್ತಿ ಮಸೆಯುವುದನ್ನು ರಾಘವ-ಗಂಗಾಧರ ಇಬ್ಬರೂ ನಿಲ್ಲಿಸಿರಲಿಲ್ಲ.

ಅಧಿಕಾರಸ್ಥ ಯಡ್ಡಿ-ಚೆಡ್ಡಿಗಳೊಂದಿಗೆ ನಿಕಟವಾಗಿ ಒಡನಾಡುತ್ತ ರಾಜಪುರೋಹಿತನಾಗಿರುವ ಪರಮಶತ್ರು ರಾಘವನಂತೆ ತಾನೂ ಲೋಕಪ್ರಸಿದ್ಧ ಸ್ವಾಮೀಜಿ ಆಗುವ ತೆವಲು ಗಂಗಾಧರನಿಗೆ ಶುರುವಾಗಿಬಿಟ್ಟಿತು. ಆಗಾತನಿಗೆ ಹೊಳೆದದ್ದೇ ಭಗವದ್ಗೀತಾ ಅಭಿಯಾನದ ಹುಕ್ಕಿ! ಸರ್ಕಾರಿ ಸಹಕಾರದಿಂದ ಹಿಂದೂ ಧರ್ಮಗ್ರಂಥ 'ಗೀತೆ'ಯನ್ನು ಹಿಡಿದು ರಾಜ್ಯದ ಉದ್ದಗಲಕ್ಕೆ ಗಂಗಾಧರ ಅಂಡಲೆಯತೊಡಗಿದ. ಸಂವಿಧಾನಧರ್ಮವನ್ನೇ ಧಿಕ್ಕರಿಸಿ ಶಾಲೆ-ಕಾಲೇಜಿಗೆಲ್ಲ ನುಗ್ಗಿ ಗೀತೆ ಬೋಧಿಸಿದರೆ ವೈರಿ ಶ್ರೀ ರಾಘವನನ್ನು ಸೈಡ್ ಹೊಡೆಯಬಹುದೆಂಬ ದೂರಾಲೋಚನೆ ಗಂಗಾಧರ ಹಾಕಿಕೊಂಡಿದ್ದನೋ ಏನೋ! ಕೋಲಾರದಲ್ಲಿ ಈ ಗೀತಾಭಿಯಾನಕ್ಕೆ ವಿರೋಧ ಎದುರಾಗಿ ಗಂಗಾಧರನ ಬಣ್ಣ ಬಯಲಾಯ್ತು. ಈತನ ಶಿಷ್ಯೋತ್ತಮ ಮಂತ್ರಿ ಕಾಗೇರಿಯ ಕರ್ಮವೂ ಬಹಿರಂಗವಾಯ್ತು.

ಗಂಗಾಧರನ ಗೀತಾಭಿಯಾನಕ್ಕೆ ಪಕ್ಕಾ ಕೇಸರೀಕರಣದ ರಂಗೇರಿಬಿಟ್ಟಿತು. ಕಾಗೇರಿ ಮತ್ತು ಸ್ವರ್ಣವಲ್ಲಿ ಸ್ವಾಮಿ ಗಂಗಾಧರನ ಮನುವಾದಿ ಮಸಲತ್ತು ರಾಜ್ಯದ 'ಧರ್ಮಪುಟ'ದಲ್ಲಿ ದಾಖಲಾಗಿಹೋಯ್ತು. ಈ ವಿವಾದ ಭುಗಿಲೆದ್ದಾಗ ಸಗಣಿ ಸ್ವಾಮಿ ತನ್ನ ಎದುರಾಳಿ ಕೆಸರು ಸ್ವಾಮಿಯ ಪರ ವಹಿಸಲಿಲ್ಲ. ಸ್ವರ್ಣವಲ್ಲಿ ಅಭಿಯಾನಕ್ಕೆ ರಾಜಕೀಯ ಬಣ್ಣ ಬಂದಿರುವುದರಿಂದ ತಾನೇನೂ ಕಮೆಂಟ್ ಮಾಡುವುದಿಲ್ಲ ಎಂದುಬಿಟ್ಟ. ಪೇಜಾವರರನ್ನೇ ಬದಿಗೆ ಸರಿಸಿ ಬಿಜೆಪಿಯ ಕುಲ ಪುರೋಹಿತನಾಗುವ ಅವಸರದಲ್ಲಿ ಪ್ರತಿದಿನವೂ ರಾಜಕಾರಣ ಮಾಡುತ್ತಿರುವ ರಾಘವನ ರಗಳೆ ಬಲ್ಲವರು ಇದು ಹೈಗರ ಮಠಾಧೀಶರ ರಾಜಕೀಯವೆಂದೇ ವ್ಯಾಖ್ಯಾನಿಸುತ್ತಿದ್ದಾರೆ! ಒಟ್ಟಿನಲ್ಲಿ ಸ್ವರ್ಣವಲ್ಲಿ ಸ್ವಾಮಿಯ ಮೇಲಿನ ಸಿಟ್ಟನ್ನು ಸಣ್ಣ ಪ್ರಮಾಣದಲ್ಲಿ ತೀರಿಸಿಕೊಳ್ಳಲು ಗೀತಾಭಿಯಾನವು ರಾಘವನಿಗೆ ಅಸ್ತ್ರವಾಗಿದೆ.

ತೀರಾ ಮೊನ್ನೆ-ಮೊನ್ನೆಯಷ್ಟೇ ಯಡ್ಡಿ ಅಧಿಕಾರದಲ್ಲಿರುವುದೇ ಮಠಾಧೀಶರ ಆಶೀರ್ವಾದ ಬಲದಿಂದ, ದಿನದಿನವೂ ಯಡ್ಡಿ ಪದಚ್ಯುತಿ ಬಗ್ಗೆ ಧಾರಾವಾಹಿಯಂತೆ ಸುದ್ದಿಗಳು ಬರುತ್ತಿದ್ದರೂ ಆತ ಅಭಾಧಿತವಾಗಿ ಅಧಿಕಾರದಲ್ಲಿ ಮುಂದುವರಿದಿರುವುದೇ ತನ್ನಂಥ ಯತಿಶ್ರೇಷ್ಠರ ಕೃಪಾಕಟಾಕ್ಷದಿಂದ ಎಂದು ಹಲುಬಿದ್ದ ರಾಘವ. ಗಣತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳಿಗಿಂತ ಮಠಾಧೀಶರೇ ಮುಖ್ಯವೆಂದು ಬಿಂಬಿಸುತ್ತ ಸಂವಿಧಾನಕ್ಕೆ ಅಪಚಾರ ಮಾಡುವ ರಗಳೆ ರಾಘವನ 'ರಾಜಕಾರಣ' ಸಾಬೀತುಪಡಿಸುವಂತಿದೆ ಆತ ಭ್ರಷ್ಟಾಚಾರದಲ್ಲಿ ಬಿದ್ದು ಒದ್ದಾಡುತ್ತಿರುವ ಬುರ್ನಾಸ್ ಯಡ್ಡಿಯನ್ನು ತಾರೀಫು ಮಾಡಿದ್ದು! ಹೀಗಾಗಿ ಸರ್ಕಾರಿ ಲಾಭಕ್ಕಾಗಿ ಹಗಲಿರುಳೂ ರಾಜಕಾರಣದಲ್ಲೇ ಮುಳುಗೇಳುತ್ತಿರುವ ರಾಘವ ಭಗವದ್ಗೀತಾ ಭಾನಗಡಿಯಿಂದ ತತ್ತರಿಸಿಹೋಗಿರುವ ಎದುರಾಳಿ ಮಠಾಧೀಶ ಸ್ವರ್ಣವಲ್ಲಿ ಗಂಗಾಧರನನ್ನು ಇನ್ನಷ್ಟು ಹೈರಾಣಾಗಿಸುವ ರಾಜಕಾರಣವನ್ನೇ ಮಾಡಿ ಮುಗಿಸಿದ್ದಾರೆ. ಇದು ಉತ್ತರ ಕನ್ನಡದ ಹೈಗರಲ್ಲಿ ವಿಚಿತ್ರ ಕಂಪನಗಳನ್ನೆಬ್ಬಿಸಿ ಕಾವಿ ರಾಜಕೀಯದ ಹಲವು ಆಯಾಮಗಳನ್ನು ಅನಾವರಣ ಮಾಡುತ್ತಿದೆ....

ಅಧಿಕಾರಸ್ಥ ಯಡ್ಡಿ-ಚೆಡ್ಡಿಗಳೊಂದಿಗೆ ನಿಕಟವಾಗಿ ಒಡನಾಡುತ್ತ ರಾಜಪುರೋಹಿತನಾಗಿರುವ ಪರಮಶತ್ರು ರಾಘವನಂತೆ ತಾನೂ ಲೋಕಪ್ರಸಿದ್ಧ ಸ್ವಾಮೀಜಿ ಆಗುವ ತೆವಲು ಗಂಗಾಧರನಿಗೆ ಶುರುವಾಗಿಬಿಟ್ಟಿತ್ತು. ಆಗಾತನಿಗೆ ಹೊಳೆದದ್ದೇ ಭಗವದ್ಗೀತಾ ಅಭಿಯಾನದ ಹುಕ್ಕಿ! ಬ್ರಾಹ್ಮಣತ್ವದ ಅಜೆಂಡಾವನ್ನು ಕಾವಿಯಲ್ಲಿ ಬಚ್ಚಿಟ್ಟುಕೊಂಡು ಹಿಂದೂತ್ವದ ಹಿಕಮತ್ತು ಮಾಡುತ್ತಿರುವ ಸ್ವರ್ಣವಲ್ಲಿಯದೊಂದೇ ಗುರಿ; ಹೇಗಾದರೂ ಮಾಡಿ ಪ್ರತಿಸ್ಪರ್ಧಿ ಸ್ವಾಮಿ ರಾಘವನನ್ನು ಮಣಿಸಿ ಶಿರಸಿ ಸೀಮೆಯ ಹೈಗರ ಏಕಮೇವಾದ್ವಿತೀಯ ಮಠಾಧಿಪತಿ ಆಗುವ ಹಠ. ಈ ಹೈಗರ ಮಠಾಧೀಶರಿಬ್ಬರ ಮಸಲತ್ತು ಮೇಲ್ನೋಟಕ್ಕೆ ಮೋಜೆನಿಸಿದರೂ ಬ್ರಾಹ್ಮಣೇತರರಿಗೆ ಈ ನಾಟಕ ಗಂಡಾಂತರಕಾರಿ! ಒಬ್ಬ ಗೋವು, ಇನ್ನೊಬ್ಬ ಗೀತೆ ಮುಂದಿಟ್ಟುಕೊಂಡು ಶೂದ್ರರ ದಿಕ್ಕೆಡಿಸಿ ಬೇಳೆ ಬೇಯಿಸಿಕೊಳ್ಳುತ್ತಿದ್ದಾರಷ್ಟೇ!

•ನಹುಷ



ಕಳೆದ ವಾರ ಈ ರಗಳೆ ರಾಘವ ಗೋಕರ್ಣದ ಅಶೋಕೆಯಲ್ಲಿ ತನ್ನ ಚಾತುರ್ಮಾಸ್ಯ ವ್ರತಾಚರಣೆಗೆ ಕುಂತಿದ್ದಾನೆ. ಈ ಪುಣ್ಯಾತ್ಮ ಪರ್ವಕಾಲದಲ್ಲಿ ಸದ್ರಿ ತ್ರಿಕಾಲಜ್ಞಾನಿಯಾಗಿದ್ದು ಗೋಮಾಂಸದಿಂದ ಕ್ಯಾನ್ಸರ್ ಬರುತ್ತದೆಂದು ಪತ್ರಕರ್ತರ ಮುಂದೆ ತನ್ನ 'ಸಂಶೋಧನಾ ದಂಡ' ಮಂಡಿಸಿದ್ದಾನೆ. ಈತನ 'ಥೀಸಿಸ್' ತುಂಬ ರೋಚಕವಾಗಿದೆ! ಗೋಮಾಂಸ ವಿಷಕಾರಕವಂತೆ. ಹೀಗಾಗಿ ಇದನ್ನು ಭಕ್ಷಿಸಿದರೆ ಕ್ಯಾನ್ಸರ್ ಬರುತ್ತದಂತೆ. ಹಾಗಾಗಿ ಗೋಮಾಂಸ ತಿನ್ನುವುದನ್ನು ಆರೋಗ್ಯ ಕಾರಣಕ್ಕಾದರೂ ಬಿಡಬೇಕಂತೆ. ಈ 'ಕ್ಯಾನ್ಸರ್ ಕತೆ' ಆತ ಹಿಂದೂತ್ವದ ಭಾವನೆಯಿಂದ ಹೇಳಿಲ್ಲವಂತೆ. ಗೋಮಾಂಸ ಭಕ್ಷಣೆ ಆರೋಗ್ಯಕ್ಕೆ ಹಾನಿಕರವಲ್ಲವೆಂದು ವೈಜ್ಞಾನಿಕವಾಗಿ ಸಾಬೀತಾದರೆ ತಿನ್ನಬಹುದಂತೆ. ಇದಿಷ್ಟು ಕಾಬಾಯ್ ರಾಘವನ ಗೋಸತ್ರದ ಲೇಟೆಸ್ಟ್ ಸ್ಟಂಟು!




ಕಾಗೇರಿ

ಇಷ್ಟು ದಿನ ಆಕಳು-ಎತ್ತುಗಳಲ್ಲಿ ಕೋಟ್ಯಾನುಕೋಟಿ ಹಿಂದೂ ದೇವಾನುದೇವತೆಗಳು ಅಡಗಿವೆ. ಹಸು-ಎತ್ತು ಕೊಂದು ತಿಂದರೆ ಪಾಪ ಬರುತ್ತದೆ. ಹಿಂದೂಗಳ ಭಾವನೆಗೆ ಘಾಸಿಯಾಗುತ್ತದೆ ಎಂದೆಲ್ಲ "ಮನುವಿಜ್ಞಾನಿ"ಯಂತೆ ಭಾಷಣ ಬಿಗಿಯುತ್ತಿದ್ದ ರಾಘವ ತನ್ನ 18ನೇ ಚಾತುರ್ಮಾಸ್ಯ ಸಂದರ್ಭದಲ್ಲಿ 'ವೈದ್ಯ ವಿಜ್ಞಾನಿ' ಗೆಟಪ್ಪಿನಲ್ಲಿ ಮಾತಾಡಿದ್ದು ನಿಗೂಢವಾಗಿದೆ! ಪಾಪ-ಪುಣ್ಯ ದಯೆ-ಧರ್ಮ ಎಲ್ಲ ಬಿಟ್ಟು ಹಸುವಿನ 'ವೈಜ್ಞಾನಿಕ ವಧೆ'ಗೆ ರಾಘವ ಒಪ್ಪಿಗೆ ಸೂಚಿಸಿದ್ದು ಯಾಕೆ? ಹಾಗಂತ ಆತನ ಅನುಯಾಯಿಗಳು ತಲೆ ಕೆಡಿಸಿಕೊಂಡಿದ್ದಾರೆ.

ಆದರೆ, ರಾಘವ ಗೋವನ್ನು ಮುಂದಿಟ್ಟುಕೊಂಡು ಮಾಡುತ್ತಿರುವ ಸಗಣಿ-ಗೋಮೂತ್ರದ ಬಿಸಿನೆಸ್‌ನ ರಹಸ್ಯ ಬಲ್ಲವರು ಮತ್ತು ಆತ ಭರ್ಜರಿ ಹಾಲು-ಸಗಣಿ-ಮೂತ್ರ ಕೊಡುವ ಆರೋಗ್ಯವಂತ-ದಷ್ಟ-ಪುಷ್ಟ ದನ-ಎತ್ತುಗಳ ಜೋಪಾನ ಮಾಡಿ ಬರಡು ಹಸು-ಎತ್ತುಗಳ ಬಗ್ಗೆ ಕಾಳಜಿ ತೋರದೆ ಎಲ್ಲೆಲ್ಲೋ ಕಟ್ಟಿಹಾಕುವ ಆತನ ಪರಿವಾರದ 'ಕಟುಕತೆ' ಗೊತ್ತಿರುವವರಿಗೆ ರಾಘವನ 'ವೈಜ್ಞಾನಿಕ ವಧೆ' ಮಾತೇನೂ ಬೆಚ್ಚಿ ಬೀಳಿಸಿಲ್ಲ. ರಾಘವನಿಗೆ ಹಸುವಿನ ಬಗ್ಗೆ ಯಾವ ಪೂಜ್ಯ ಭಾವನೆಯಾಗಲಿ, ಪ್ರೀತಿ-ಕಾಳಜಿಯಾಗಲಿ ಇರಲು ಸಾಧ್ಯವೇ ಇಲ್ಲ. ಗೋಮಾಂಸದಿಂದ ಕ್ಯಾನ್ಸರಾದರೂ ಬರಲಿ, ಏಡ್ಸಾದರೂ ಬರಲಿ ಸ್ವಾಮಿಯಾದವನಿಗೆ ಏನಂತೆ? ಆತನಿಗೆ ದಯೆ-ಧರ್ಮ-ಮುಖ್ಯವಾಗಬೇಕಷ್ಟೇ. ಗೋಮಾಂಸ ಆರೋಗ್ಯಕ್ಕೆ ಒಳ್ಳೆಯದೆಂದಾದರೆ ತಾನೇ ಬೆಂಬಲಿಸುತ್ತೇನೆಂದು ಬೇರೆ ಬೊಬ್ಬೆ ಹಾಕಿದ್ದಾನೆ ಈ ಸಗಣಿ ಸ್ವಾಮಿ! ತಲತಲಾಂತರದಿಂದ ಗೋಮಾಂಸವನ್ನು ಆಹಾರ ಪದ್ಧತಿಯಾಗಿ ಅನುಸರಿಸುತ್ತಿರುವವರು ಆರಾಮಾಗೇ ಇದ್ದಾರೆ. ಇನ್ನು ಹಸು-ಎತ್ತಿನ ಎಲುಬಿನ ಪುಡಿಯಲ್ಲವಾ ಸಕ್ಕರೆ ಬೆಳ್ಳಗಾಗಲು ಬಳಸುವುದು. ಹಾಗೆ ನೋಡಿದರೆ ರಾಘವ ಅಮೃತವೆಂದು ಹೇಳುವ ಆಕಳ ಹಾಲು ಕೆಲವರಿಗೆ ರೋಗಕಾರಕ. ಕಿಡ್ನಿಯಲ್ಲಿ ಕ್ಯಾಲ್ಸಿಯಂ ಕಲ್ಲಾದವರು ಹಾಲು ಕುಡಿದರೆ ಏನಾಗುತ್ತದೆ ಗೊತ್ತಾ? ಇದೆಲ್ಲಾ ಧನಾಧಾರಿತ ಧರ್ಮಕರ್ಮಬಿಟ್ಟರೆ ಇನ್ನೇನೂ ಗೊತ್ತಿಲ್ಲದ ರಾಘವನಿಗೆ ತಿಳಿದಿರಲು ಸಾಧ್ಯವಾ, ಪಾಪ!!

ಇತ್ತ ಗೋಕರ್ಣದಲ್ಲಿ ರಾಮಚಂದ್ರಾಪುರಮಠದ ರಾಘವ ಕ್ಯಾನ್ಸರ್ ಭೀತಿ ಬಿತ್ತಿ ಸಗಣಿ ಬಿಸಿನೆಸ್ ವೃದ್ಧಿಗೆ ತಂತ್ರಗಾರಿಕೆ ನಡೆಸಿದ್ದರೆ, ಅತ್ತ ಶಿರಸಿಯಲ್ಲಿ ಹೈಗರ ಇನ್ನೊಂದು ವಿಂಗಿನ ಸ್ವರ್ಣವಲ್ಲಿ ಸ್ವಾಮಿ ಅರ್ಥಾತ್ ರಾಘವೇಶನ ಪ್ರತಿಸ್ಪರ್ಧಿ ಗಂಗಾಧರ ಹಿಂದೂ ದಂಪತಿಗಳಿಗೆ ಮೂರ್ಮೂರು ಮಕ್ಕಳು ತಯಾರು ಮಾಡಿ ಹಿಂದೂ ಧರ್ಮ ಬೆಳೆಸಲು 'ಫರ್ಮಾನು' ಹೊರಡಿಸಿದ್ದಾನೆ. ಸರ್ಕಾರಗಳು 'ಒಂದು ಬೇಕು; ಎರಡು ಸಾಕು' ಎನ್ನುತ್ತಿದ್ದರೆ ಗಂಗಾಧರ ಮೂರು ಬೇಕೇಬೇಕು ಎಂದು ಒದರುತ್ತಿದ್ದಾನೆ. ಶಿರಸಿಯಲ್ಲಿ ನಡೆದ ದಂಪತಿ ಶಿಬಿರದಲ್ಲಿ ಹಿಂದೂ ಜೋಡಿಗಳನ್ನು ತನ್ನೆದುರು ಕೂಡ್ರಿಸಿಕೊಂಡು ಗಂಗಾಧರ ಹಿಂದೂತ್ವದ ಭಾಷಣ ಬಿಗಿದಿದ್ದಾನೆ.



ಹಿಂದೂ ಸಮಾಜದ ಸಂಖ್ಯೆ ಇಳಿಮುಖ ಆಗುತ್ತಿದೆ; ಇದರಿಂದ ಮುಂದೆ ಗಂಭೀರ ಸಮಸ್ಯೆ ಆಗಲಿದೆ ಎಂದು ಪ್ರವಚನ ಕೊಟ್ಟ "ಗೀತಾ ಗಲಾಟೆ ಸ್ವಾಮಿ" ದಂಪತಿಗಳಲ್ಲಿ ಮಕ್ಕಳ ಭೀತಿ ಮೂಡಿಸಿ ಹಿಂದೂತ್ವದ ಹೊಲಸು ಆಟ ಆಡಿದ್ದಾನೆ. ಒಂದೇ ಮಗುವಿರುವವರು ದುರಂತವೇನಾದರೂ ಆದರೆ ಜೀವನ ಪರ್ಯಂತ ಕೊರಗಬೇಕಾದೀತೆಂದು ಭಾವನಾತ್ಮಕ ಬ್ಲ್ಯಾಕ್‌ಮೇಲ್ ಮಾಡಿದ್ದಾನೆ. ಹಾಗಾಗಿ ಮೂರ್ಮೂರು ಮಕ್ಕಳನ್ನು ಮಾಡಿರಿ ಎಂಬ "ಧರ್ಮ ದೀಕ್ಷೆ" ಯನ್ನು ಹಿಂದೂ ದಂಪತಿಗಳಿಗೆ ನೀಡಿದ್ದಾನೆ. ತನ್ಮೂಲಕ ಹಿಂದೂ ಪಂಗಡ ಬೆಳೆಸುವ ದೂ(ದು)ರಾಲೋಚನೆ ಮಾಡಿದ್ದಾನೆ.

ಬ್ರಾಹ್ಮಣತ್ವದ ಅಜೆಂಡಾವನ್ನು ಕಾವಿಯಲ್ಲಿ ಬಚ್ಚಿಟ್ಟುಕೊಂಡು ಹಿಂದೂತ್ವದ ಹಿಕಮತ್ತು ಮಾಡುತ್ತಿರುವ ಸ್ವರ್ಣವಲ್ಲಿಯದೊಂದೇ ಗುರಿ; ಹೇಗಾದರೂ ಮಾಡಿ ಪ್ರತಿಸ್ಪರ್ಧಿ ಸ್ವಾಮಿ ರಾಘವನನ್ನು ಮಣಿಸಿ ಶಿರಸಿ ಸೀಮೆಯ ಹೈಗರ ಏಕಮೇವಾದ್ವಿತೀಯ ಮಠಾಧಿಪತಿ ಆಗುವ ಹಠ. ಶಿರಸಿ ಸೀಮೆಯ ಸಿದ್ದಾಪುರ ತಾಲ್ಲೂಕಲ್ಲಿ ಗಂಗಾಧರನಿಗಿಂತ ರಾಘವನ ಅನುಯಾಯಿಗಳೇ ಜಾಸ್ತಿ. ಇಡೀ ಶಿರಸಿ ಸೀಮೆಯನ್ನು ಸ್ವರ್ಣವಲ್ಲಿ ವಸಾಹತು ಮಾಡಿಕೊಳ್ಳಲು ಗಂಗಾಧರ ತರಹರದ ತಂತ್ರ ಮಾಡುತ್ತಿದ್ದಾನೆ. ಸರ್ಕಾರಿ ಜಾಗ ನುಂಗಿ ಯಲ್ಲಾಪುರದಲ್ಲೊಂದು 'ಜನಿವಾರ ಆಸ್ಪತ್ರೆ' ಮಾಡುವ ಯೋಜನೆಯಲ್ಲಿರುವ ಗಂಗಾಧರ ತಮ್ಮ ಕಾವಿಬಲ ಪ್ರಯೋಗಿಸಿ ಅಡಿಕೆ ತೋಟಗರ ಆಸಾಮಿ ಸಾಲಮನ್ನಾಕ್ಕೆ ಹವಣಿಸುತ್ತಿದ್ದಾನೆ. ಸ್ವಜಾತಿ ಹೈಗರ ಆಸಾಮಿ ಸಾಲಮನ್ನಕ್ಕಾಗಿ ಈಚೆಗೊಂದು ಸಮಾವೇಶವನ್ನು ಶಿರಸಿಯಲ್ಲಿ ನಡೆಸಿದ್ದ ಈ ಸ್ವಾಮಿ ಅಲ್ಲಿ ಪರೋಕ್ಷವಾಗಿ ಸಾಲ ತುಂಬದಂತೆ ಪ್ರೇರಣೆ ನೀಡಿದ್ದರೆಂಬ ದೊಡ್ಡ ವಿವಾದವೂ ಆಗಿತ್ತು.

ರಾಜ್ಯದ ಯಡ್ಡಿ-ಚೆಡ್ಡಿಗಳಿಂದ ಆಸಾಮಿ ಸಾಲಮನ್ನಾ ಮಾಡಲಾಗದೆಂದು ಈಗ ಕೇಂದ್ರ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿಗೇ ಸ್ವರ್ಣವಲ್ಲಿ ಗಾಳ ಹಾಕುತ್ತಿದ್ದಾರೆ. ಈ ಪ್ರಣಬ್ ಬೀದರ್‌ನ ಸಿಖ್ ಸಂತನೊಬ್ಬನ ಖಾಸಾ ಶಿಷ್ಯ. ಹೀಗಾಗಿ ಆ ಸಿಖ್ ಸಂತನಿಂದ ಪ್ರಣಬ್‌ಗೆ ಮಂಕುಬೂದಿ ಎರಚಿಸಲು ಸ್ವರ್ಣವಲ್ಲಿ ಹಿಂಬಾಲಕರು ಟ್ರಿಕ್ಕು ಮಾಡುತ್ತಿದ್ದಾರೆ. ವಿಪರ್ಯಾಸವೆಂದರೆ ಅಡಿಕೆ ಬೆಳೆಗಾರ ಸ್ವಜಾತಿ ಹೈಗರ ಹಿತರಕ್ಷಕನಂತೆ ಪೋಸು ಕೊಡುತ್ತಿರುವ ಗಂಗಾಧರ ಅದೇ ಅಡಿಕೆ ಬೆಳೆಗಾರರ ಜೀವನಾಡಿಯಾದ ಟಿಎಸ್‌ಎಸ್ ಎಂಬ ಸಹಕಾರಿ ಸಂಸ್ಥೆಯನ್ನು ಹಾಡುಹಗಲೇ ಲೂಟಿ ಮಾಡುತ್ತಿರುವ ಧಗಾಕೋರ ಶಾಂತರಾಮ ಹೆಗಡೆಯನ್ನು ತನ್ನ ಮಠದ ಉಪಾಧ್ಯಕ್ಷನಾಗಿಸಿಕೊಂಡಿದ್ದಾನೆ. ತನಗಿಂತಲೂ ತನ್ನ ವೈರಿ ರಾಘವನಿಗೇ ಹೆಚ್ಚು ಗೌರವ-ಸರ್ಕಾರಿ 'ಅನುದಾನ' ಕೊಡುವ ಮಂತ್ರಿ ಕಾಗೇರಿಯನ್ನು ಪಳಗಿಸಲೆಂದೇ ಸ್ವರ್ಣವಲ್ಲಿ ನಮಕ್ ಹರಾಮ್ ಶಾಂತರಾಮನನ್ನು ತನ್ನ ಬಗಲಲ್ಲಿಟ್ಟುಕೊಂಡಿದ್ದಾನೆ.

ಈ ಹೈಗರ ಮಠಾಧೀಶರಿಬ್ಬರ ಮಸಲತ್ತು ಮೇಲ್ನೋಟಕ್ಕೆ ಮೋಜೆನಿಸಿದರೂ ಬ್ರಾಹ್ಮಣೇತರರಿಗೆ ಈ ನಾಟಕ ಗಂಡಾಂತರಕಾರಿ! ಒಬ್ಬ ಗೋವು, ಇನ್ನೊಬ್ಬ ಗೀತೆ ಮುಂದಿಟ್ಟುಕೊಂಡು ಶೂದ್ರರ ದಿಕ್ಕೆಡಿಸಿ ಬೇಳೆ ಬೇಯಿಸಿಕೊಳ್ಳುತ್ತಿದ್ದಾರಷ್ಟೇ!

ಬ್ರಾಹ್ಮಣಶಾಹಿ ಭ್ರಷ್ಟರ ಭಗವದ್ಗೀತೆ

ರೈತರ ಮೇಲೆ ಗೋಲಿಬಾರ್ ಮಾಡಿಸಿದ್ದಾಯಿತು. ...ಯರ ಮೇಲೆ ಹಲ್ಲೆ ದೌರ್ಜನ್ಯ ನಡೆಸಿದ್ದೂ ಆಯಿತು. ...-ಮಸೀದಿಗಳಿಗೆ ಬೆಂಕಿ ಹಚ್ಚಿದ್ದಾಯಿತು. ಮಠಗಳಿಗೆ ...ಮಾನ್ಯರ ತೆರಿಗೆ ಹಣವನ್ನು ಕೋಟಿ ಕೋಟಿ ಲೆಕ್ಕದಲ್ಲಿ ...ದ್ದೂ ಆಯಿತು.

...ಹೋಮ-ಯಜ್ಞಗಳಾದವು, ಮಾಟ ಮಂತ್ರ ...ಚಾರಗಳೂ ಆಗಿಹೋದವು.

...ಗಣಿ ಸಂಪತ್ತು ದೋಚಿದ್ದಾಯಿತು. ಸಾವಿರಾರು ಕೋಟಿ ...ಯಿ ಸರ್ಕಾರಿ ಹಣ ಲೂಟಿ ಮಾಡಿ ಆಸ್ತಿ ಮಾಡಿದ್ದೂ ...ತು.

...ನ್ನುಳಿದಿರುವುದು ಮೋಕ್ಷ ಸಾಧನೆ ಮಾತ್ರ ತಾನೇ? ...ಹಾಗಾಗಿಯೇ ಇರಬೇಕು ರಾಜ್ಯ ಬಿಜೆಪಿ ಸರ್ಕಾರ ...ದ್ಗೀತೆ ಪ್ರಚಾರ ಮಾಡಲು ಹೊರಟಿದೆ!

...ರ್ನಾಟಕದ ಜನಸಾಮಾನ್ಯರ ವಿರುದ್ಧ ...ಣಶಾಹಿಗಳ ನೇರ ಯುದ್ಧ ಘೋಷಣೆಯಂತಿರುವ ...ವದ್ಗೀತೆ ಅಭಿಯಾನ'ದಲ್ಲೂ ದುಡ್ಡು ದೋಚುವ ...ದೆ.

...ದರೆ ಹಣ ಮಾಡುವುದೊಂದೇ ಇವರ ...ಶವಾಗಿಲ್ಲ. ಜೊತೆಗೆ ಕೋಟ್ಯಂತರ ಶೂದ್ರರ ಮೇಲೆ ...ಣಾಸ್ತ್ರ ಪ್ರಯೋಗಿಸಿ ಮಂಕುಬೂದಿ ಎರಚುವ ...ರಿಯೂ ಇದರಲ್ಲಿದೆ.

...ೋಂದವಲ್ಲಿ ಸ್ವಾಮಿಯ ಸ್ಕೀಮು

...ವಿವೇಕಿ ಮುಖ್ಯಮಂತ್ರಿ ಯಡಿಯೂರಪ್ಪನ ಹತ್ತಿರ ... ಕಳ್ಳನೂ ಕಾವಿ ಭಟ್ಟೆ ಧರಿಸಿ ಹೋದರೆ ಸಾಕು. ...ಬ ಹಣ ಕೊಟ್ಟು ಕಳಿಸುವ ವಿಚಾರ ಹೊಸದೇನಲ್ಲ. ...ಟಕದ ಡಜನ್‌ಗಟ್ಟಲೇ ವೀರಶೈವ ಮಠಾಧೀಶರು ...ರು ಕೋಟಿ ರೂಪಾಯಿಗಳನ್ನು ಈಗಾಗಲೇ ...ಯಿಸಿದ್ದಾರೆ. ಕೌಬಾಯ್ ಸ್ವಾಮಿ ರಾಘವೇಶ್ವರನಂತೂ ...ಳಿ ರಕ್ಷಣೆಯ ಹೆಸರಿನಲ್ಲಿ ಬಜೆಟ್‌ನಲ್ಲೇ ನೂರಾರು ... ರೂ. ಮಂಜೂರು ಮಾಡಿಸಿಕೊಂಡು ಸೊಂಪಾಗಿ ...ಮುತ್ತಿದ್ದಾನೆ. ಸಂಪದ್ಭರಿತ ಗೋಕರ್ಣ ದೇವಸ್ಥಾನವನ್ನೂ ... ನೀರು ಕುಡಿದಿದ್ದಾನೆ. ಮತ್ತೊಂದೆಡೆ ಪೇಜಾವರ ..., ವಿರೇಂದ್ರ ಹೆಗ್ಗಡೆ ಮುಂತಾದವರು 'ಇದೊಳ್ಳೆ ...ಮ'ವೆಂದು ತಮ್ಮ ಶಕ್ತಿ ಮೀರಿ ನಾನಾ ದಾರಿಗಳ ...ಲಕ ರಾಜ್ಯ ಖಜಾನೆಗೆ ಕನ್ನ ಹಾಕುತ್ತಿದ್ದಾರೆ.

...ಗೆ ರಾಜ್ಯದ ಬಹುತೇಕ ಮಠಾಧೀಶರು ಹಣ ...ಲು ನಿಂತಿರುವುದನ್ನು ನೋಡಿದ ಸೋಂದಾ ...ಧೀಶನಿಗೂ ತಾನು ಸ್ವಲ್ಪ ಸಮಾಜ ಸೇವೆ ...ಬಾರದೇಕೆ ಅನ್ನಿಸಿದ್ದರ ಪರಿಣಾಮವೇ ಈ ಭಗವದ್ಗೀತೆ ...ಚಾಂದೋಲನ ಶುರುವಾಗಲು ಕಾರಣವಾಗಿದೆ.

...009ರ ಜುಲೈ 13 ರಂದು ಈ ಸೋಂದಾ ...ಯು ರಾಜ್ಯ ಪ್ರೌಢಶಿಕ್ಷಣ ಇಲಾಖಾ ನಿರ್ದೇಶಕ ...ಶಂಕರಯ್ಯ ಸ್ವಾಮಿಗೆ ಒಂದು ಪತ್ರ ಬರೆದು ...ಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗೆ, ಶಿಕ್ಷಕರಿಗೆ ... ಭಗವದ್ಗೀತೆ ಬೋಧಿಸಲು ಅನುಮತಿ ...ಬೇಕೆಂದು ಕೇಳುತ್ತಾನೆ.

...ಚಿವ ವಿಶ್ವೇಶ್ವರ ಹೆಗಡೆ ಕಾಗೇರಿ 2009ರ ...ಬರ್ 30ರಂದು ಆಗಲಿ ಅಂದು ...ತ್ತಾನೆ.

...ಈ ಬಗ್ಗೆ ಇಲಾಖೆಯು ಸುತ್ತೋಲೆ ... 04/ಪ್ರಾ ಶಾ ಮಾಪ 01/ 2007-08) ...ಡಿಸಿ ಎಲ್ಲಾ ಜಿಲ್ಲಾ ಶಿಕ್ಷಣಾಧಿಕಾರಿಗಳಿಗೆ ...ದ್ಗೀತೆ ಬೋಧಿಸಲು ಚೆಡ್ಡಿ ...ಟನೆಗಳಿಗೆ ಅವಕಾಶ ನೀಡಬೇಕೆಂದರು



> ಬಿಜೆಪಿ ಭಂಡರ ಜೊತೆಗೆ ಬ್ರಾಹ್ಮಣಶಾಹಿ ಭ್ರಷ್ಟರೂ ಸೇರಿಕೊಂಡು ರಾಜ್ಯ ಶಿಕ್ಷಣ ವ್ಯವಸ್ಥೆಯ ತಳಹದಿಯನ್ನೇ ಛಿದ್ರಗೊಳಿಸಲು ಹೊರಟಿದ್ದಾರೆ. ಈ ದುಷ್ಟರನ್ನು ಹೀಗೇ ಬಿಟ್ಟರೆ ಕಾಗೇರಿ ನಾಯಕತ್ವದಲ್ಲಿ ಬ್ರಾಹ್ಮಣಶಾಹಿಗಳು ಶಾಲಾಕಾಲೇಜುಗಳಲ್ಲಿ ದೇವರ ಪೂಜೆ, ನಿತ್ಯ ಪಾರಾಯಣ, ಸ್ನಾನ ಸಂಧ್ಯಾವಂದನೆಗಳನ್ನು ಶುರು ಮಾಡುವ ಸಾಧ್ಯತೆಗಳಿವೆ.

ಆದೇಶಿಸುತ್ತದೆ.

ಕಳೆದ ಒಂದೂವರೆ ವರ್ಷದಿಂದ ಅಲ್ಲಲ್ಲಿ ಸದ್ದಿರದಂತೆ ನಡೆಯುತ್ತಿದ್ದ ಈ ಬ್ರಾಹ್ಮಣಶಾಹಿ ಪ್ರಚಾರಾಂದೋಲನ ಕೋಲಾರಕ್ಕೆ ಕಾಲಿಟ್ಟಾಗ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿತು. ಎಸ್‌ಎಫ್‌ಐನ ಕಾರ್ಯಕರ್ತರು ಇದರ ವಿರುದ್ಧ ತಿರುಗಿಬಿದ್ದರು. ಗಲಾಟೆಯೂ ಆಯಿತು.

ಸಚಿವ ಕಾಗೇರಿ 'ಭಗವದ್ಗೀತೆ ಬೇಡ ಅನ್ನುವವರು ದೇಶ ಬಿಟ್ಟು ಹೋಗಲಿ' ಅಂದುಬಿಟ್ಟ.

ಈ ದೇಶವೇ ಅವರಪ್ಪನ ಆಸ್ತಿ ಎಂಬಂತೆ!

ವಾಸ್ತವವಾಗಿ ಭಗವದ್ಗೀತೆ ಅಂತಾ ಮಹಾನ್ ಧರ್ಮಗ್ರಂಥವೇನಲ್ಲ; ಹಿಂಸೆಯನ್ನು ಪ್ರಚೋದಿಸುವ, ಮೇಲುಕೀಳೆಂಬ ಮೌಲ್ಯಗಳನ್ನು ಪ್ರತಿಪಾದಿಸುವ ಗೀತೆಯು ಭಾರತ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಇಂತ ಅಪದ್ಧವನ್ನು ಶಾಲಾಮಕ್ಕಳ ತಲೆಗೆ ತುಂಬಿ ಹಿಂದೂ ಕೋಮುವಾದಿ ಅಜೆಂಡಾವನ್ನು ಬೆಳೆಸುವ ದುರುದ್ದೇಶ ಇದರ ಹಿಂದಿರುವುದು ಖಚಿತ.

ಇದು ಸರ್ಕಾರಿ ಕಾರ್ಯಕ್ರಮ

ಭಗವದ್ಗೀತೆ ಬೋಧನೆಯು ಸರ್ಕಾರದ ಅಧಿಕೃತ ಕಾರ್ಯಕ್ರಮವಲ್ಲ ಎಂದು ಸಚಿವ ಕಾಗೇರಿಯಿಂದ ಹಿಡಿದು ಬಾಯಿಬಡುಕ ಧನಂಜಯ ಕುಮಾರ್‌ತನಕ ಹೇಳುತ್ತಿದ್ದಾರೆ. ಆದರೆ ಶಿಕ್ಷಣ ಇಲಾಖೆಯ ಸುತ್ತೋಲೆಗಳು, ಪತ್ರಗಳು ಇದನ್ನೊಂದು ಸರ್ಕಾರಿ ಕಾರ್ಯಕ್ರಮವೆಂಬಂತೆ ಪರಿಗಣಿಸಿವೆ.

ಉದಾಹರಣೆಗೆ ಪ್ರೌಢಶಿಕ್ಷಣ ಇಲಾಖೆಯ ರಾಜ್ಯ ಕೇಂದ್ರ ಕಚೇರಿಯ ಸುತ್ತೋಲೆಯನ್ನೇ ಗಮನಿಸಿದರೆ 'ಈ ಅಭಿಯಾನದ ಅವಧಿಯಲ್ಲಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಪ್ರತಿದಿನ ಒಂದು ಗಂಟೆ ಭಗವದ್ಗೀತೆ ಬೋಧಿಸಲು ಅನುಮತಿ ನೀಡಲಾಗಿದೆ' ಎಂದು ಸುತ್ತೋಲೆ ಸಂಖ್ಯೆ 04/ ಸಾಶಿಮಪ01/30-9-09ರಲ್ಲಿ ಹೇಳಲಾಗಿದೆ.

"ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗದಂತೆ ಆಸಕ್ತ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಶಾಲಾವಧಿಯ ನಂತರ ಭಗವದ್ಗೀತೆ ಅಭಿಯಾನದಲ್ಲಿ ಭಾಗವಹಿಸಲಿ" ಎಂತಲೂ ಈ ಆದೇಶದಲ್ಲಿ ಹೇಳಲಾಗಿದೆ.

ಇಲ್ಲಿ ಶಾಲಾವಧಿಯ ನಂತರ ಎಂದು ಸ್ಪಷ್ಟವಾಗಿ ಹೇಳಿದ್ದರೂ ಸಹ ಅನೇಕ ಕಡೆ ಶಾಲಾವಧಿಯಲ್ಲಿಯೇ ಭಗವದ್ಗೀತೆ ಶಾಲೆಯೊಳಗೆ ನುಗ್ಗಿ ಬರುತ್ತಿದೆ.

ಉದಾಹರಣೆಗೆ ಚಾಮರಾಜನಗರದ ಡಿಡಿಪಿಐ ಹೊರಡಿಸಿರುವ ಆದೇಶದಲ್ಲಿ 'ಬೆಳಗ್ಗೆ ಹಾಗೂ ಮಧ್ಯಾಹ್ನ' ಕಾರ್ಯಕ್ರಮ ನಡೆಸಲು ಅವಕಾಶ ನೀಡಲಾಗಿದೆ. ಇದು ಶಾಲಾ ಸಮಯವಲ್ಲವೇ?

ಅದೇ ರೀತಿ ಕೋಲಾರದ ಡಿಡಿಪಿಐ ಕೆಜಿಎಫ್, ಬಂಗಾರಪೇಟೆ, ಮಾಲೂರು, ಶ್ರೀನಿವಾಸಪುರ, ಮುಳಬಾಗಿಲು ಶಾಲೆಗಳಲ್ಲಿ ಬೆಳಗ್ಗೆ 10-30ರಿಂದ ಹಾಗೂ ಅಪರಾಹ್ನ 3 ಗಂಟೆಗೆ ಭಗವದ್ಗೀತೆ ಬೋಧಿಸಲು ಅನುಮತಿ ಕೊಟ್ಟಿದ್ದಾರೆ.

ಇದೂ ಸಹ ಶಾಲಾ ಸಮಯವೇ ಆಗಿದೆ. ಇದಿಷ್ಟೆ ಅಲ್ಲದೆ ಕೋಲಾರದ ಭಗವದ್ಗೀತೆ ಭಂಡರು ಶಿಕ್ಷಣ ಇಲಾಖೆಗೆ ಒಂದು ಪತ್ರ ಬರೆದು ಅಭಿಯಾನದಲ್ಲಿ ಭಾಗವಹಿಸುವ ಶಿಕ್ಷಕರಿಗೆ OOD ರಜೆ ನೀಡುವಂತೆಯೂ ಕೇಳಿದ್ದಾರೆ. ಹೇಗಿದೆ ಇವರ ಕರಾಮತ್ತು?


ಕೋಲಾರದ ಭಗವದ್ಗೀತೆ ಸಮಿತಿಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶಿಕ್ಷಕರಿಗೆ ಮೂರುಗಂಟೆಗಳ ವರ್ಕ್‌ಶಾಪ್ ನಡೆಸಲೂ ಸಹ ಅನುಮತಿ ಕೇಳಿದ್ದಾರೆ. ಆದರೆ ಸರ್ಕಾರಿ ಸುತ್ತೋಲೆಯಲ್ಲಿ ಇದ್ಯಾವುದಕ್ಕೂ ಅವಕಾಶವಿರುವ ಬಗ್ಗೆ ಸ್ಪಷ್ಟವಾಗಿ ದಾಖಲಿಸಿಲ್ಲ.

ಹೀಗೆ ಒಂದೆಡೆ ಇದು ಸರ್ಕಾರಿ ಕಾರ್ಯಕ್ರಮವಲ್ಲ ಎನ್ನುವುದು, ಮತ್ತೊಂದೆಡೆ ಅದನ್ನು ಸರ್ಕಾರದ ಕಾರ್ಯಕ್ರಮವೆಂಬಂತೆ ನಡೆಸುವುದು...!



ಬಿಜೆಪಿ ಭಂಡರ ಜೊತೆಗೆ ಬ್ರಾಹ್ಮಣಶಾಹಿ ಭ್ರಷ್ಟರೂ ಸೇರಿಕೊಂಡು ರಾಜ್ಯ ಶಿಕ್ಷಣ ವ್ಯವಸ್ಥೆಯ ತಳಹದಿಯನ್ನೇ ಛಿದ್ರಗೊಳಿಸಲು ಹೊರಟಿದ್ದಾರೆ.

ಈ ದುಷ್ಟರನ್ನು ಹೀಗೇ ಬಿಟ್ಟರೆ ಕಾಗೇರಿ ನಾಯಕತ್ವದಲ್ಲಿ ಬ್ರಾಹ್ಮಣಶಾಹಿಗಳು ಶಾಲಾಕಾಲೇಜುಗಳಲ್ಲಿ ದೇವರ ಪೂಜೆ, ನಿತ್ಯ ಪಾರಾಯಣ, ಸ್ನಾನ ಸಂಧ್ಯಾವಂದನೆಗಳನ್ನು ಶುರು ಮಾಡುವ ಸಾಧ್ಯತೆಗಳಿವೆ.



ದಿನಾಂಕ | ಕಾರ್ಯಕ್ರಮ | ಪಾಲ್ಗೊಳ್ಳುವವರು

ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ,

ಕಾಂಗ್ರೆಸ್ ನಾಯಕರ ಕೋಮುವಾದ ತಲೆಕೆಟ್ಟ ಕೇಂದ್ರ ಸಚಿವ ಕೆ.ಎಚ್.ಮುನಿಯಪ್ಪ




ಈ ಕಾಂಗ್ರೆಗಳು ಒಂದು ಕಡೆ ಹಿಂದೂ ಕೋಮುವಾದ ಹಾಗೂ ಭಯೋತ್ಪಾದನೆಯನ್ನು ಖಂಡಿಸುತ್ತಿರುತ್ತಾರೆ. ಮತ್ತೊಂದೆಡೆ ಕೋಮುವಾದಿಗಳೊಂದಿಗೆ ಸೇರಿ ಮನೆಹಾಳು ಕೆಲಸಕ್ಕೆ ಕೈಜೋಡಿಸುತ್ತಾರೆ.

ಈ ಭಗವದ್ಗೀತೆ ಅಭಿಯಾನವನ್ನೇ ನೋಡಿ. ಕೋಲಾರದ ಭಗವದ್ಗೀತಾ ಅಭಿಯಾನ ಜಿಲ್ಲಾ ಸಮಿತಿಯ ...ಷಕ ಕೆ.ಎಚ್.ಮುನಿಯಪ್ಪ ಆಗಿದ್ದಾರೆ.

...ಒಂದು ಕಡೆ ರಾಜ್ಯ ಕೆಪಿಸಿಸಿ ಅಧ್ಯಕ್ಷ ಜಿ.ಪರಮೇಶ್ವರ್ 'ಭಗವದ್ಗೀತೆ ...ವಾದ' ಖಂಡಿಸಿದರೆ ಇನ್ನೊಂದೆಡೆ ಕಾಂಗ್ರೆ ಕೇಂದ್ರ ಸಚಿವನೇ ...ವಾದದ ಪೋಷಕರಂತೆ ಕರಪತ್ರದಲ್ಲಿ ಹೆಸರು ಹಾಕಿಸಿಕೊಳ್ಳುತ್ತಾರೆ! ...ಷ್ಟೇ ಅಲ್ಲ, ಮಾಜಿ ವಿಧಾನಸಭಾ ಅಧ್ಯಕ್ಷ, ಕಾಂಗ್ರೆಸ್‌ನ ರಮೇಶ್ ...ಾರ್ ಕೂಡ ಈ ಅಭಿಯಾನದ ಗೌರವಾಧ್ಯಕ್ಷರಾಗಿದ್ದಾರೆ.

...ನೊಬ್ಬ ಸೆಕ್ಯುಲರ್, ಪ್ರಗತಿಪರ ಎಂದು ಹೇಳಿಕೊಳ್ಳುವ ...ಕುಮಾರ್‌ರ ಇಬ್ಬಂದಿತನ ಹೀಗಿದೆ.

ಈ ಕಾಂಗ್ರೆಗಳನ್ನು ನಂಬುವುದು ಹೇಗೆ ಹೇಳಿ?



ಕ್ಷುದ್ರಂ ಹೃದಯ ದೌರ್ಬಲ್ಯಂ ...

ಶ್ರೀಭಗವದ್ಗೀತಾ ಅಭಿಯಾನ ಜಿಲ್ಲಾ ...

ಕಛೇರಿ : ಶ್ರೀ ಗಾಯತ್ರೀ ಪ್ರಾರ್ಥನಾ ಮಂದಿರ, ಪಿ. ಸಿ. ...

ಪೋಷಕರು
ಶ್ರೀ. ಕೆ. ಹೆಚ್. ಮುನಿಯಪ್ಪ
ಕೇಂದ್ರ ಸಚಿವರು, ಕೋಲಾರ.

ಶ್ರೀ. ಎಸ್. ಎನ್. ಕೃಷ್ಣಯ್ಯಶೆಟ್ಟಿ
ಅಧ್ಯಕ್ಷರು, ಕೆ.ಎಸ್.ಡಬ್ಲ್ಯು.ಬಿ, ಮಾಲೂರು.


ಗೌರವಾಧ್ಯಕ್ಷರು
ಶ್ರೀ.ಕೆ.ಆರ್.ರಮೇಶ್ ಕುಮಾರ್
ವಿಧಾನಸಭಾ ಮಾಜಿ ಅಧ್ಯಕ್ಷರು
ಶ್ರೀನಿವಾಸಪುರ 9845155080

ಅಧ್ಯಕ್ಷರು

Ref :
ಇವರಿಗೆ,

ಮಾನ್ಯರೇ,
ನಮಸ್ಕಾರಗಳು. ಶ್ರೀಸೋಂದ ...
ಶ್ರೀಶಂಕರಾಚಾರ್ಯ ಪರಮಪೂಜ್ಯ ...
ಮಹಾಸ್ವಾಮಿಗಳು ರಾಜ್ಯದ ...
ನೈತಿಕ ಶಿಕ್ಷಣ ಮತ್ತು ವ್ಯಕ್ತಿತ್ವ ವಿಕಾಸ ...

ಜೈಲಿನಲ್ಲಿರಬೇಕಾದ ಕೃಷ್ಣಯ್ಯ ಶೆಟ್ಟಿ ಭಗವದ್ಗೀತೆ ಓದಿ ಅಂದ



ಕೋಲಾರದ ಭಗವದ್ಗೀತೆ ಅಭಿಯಾನದ ಇನ್ನೊಬ್ಬ ಮುಂಚೂಣಿ ಪ್ರಜೆ ಅಂದರೆ ಮಾಲೂರಿನ ಬಿಜೆಪಿ ಶಾಸಕ ಕೃಷ್ಣಯ್ಯ ಶೆಟ್ಟಿ! ಹೇಳಿಕೇಳಿ ಇವನೊಬ್ಬ ಭೂಗಳ್ಳ. ಜೈಲಿನಲ್ಲಿರಬೇಕಾದ ಖದೀಮ. ಈಗ ಇವನಿಗೂ ಭಗವದ್ಗೀತೆ ಬಗ್ಗೆ ಕಾಳಜಿ ಬಂದುಬಿಟ್ಟಿದೆ.

ಕೋಲಾರದ ಭಗವದ್ಗೀತೆ ಸಮಿತಿಯಲ್ಲಿರುವ ಬಹುತೇಕರು ಒಂದೋ ಬ್ರಾಹ್ಮಣರು ಇಲ್ಲಾ ಶೆಟ್ಟರು ಮಾತ್ರ.

ಸಮಿತಿ ಅಧ್ಯಕ್ಷ ನಂಜುಂಡಯ್ಯ ಶೆಟ್ಟಿ, ಕಾರ್ಯಾಧ್ಯಕ್ಷ ಪ್ರಹ್ಲಾದರಾವ್, ಸಂಚಾಲಕ ನಾಗೇಶ ಶರ್ಮಾ, ರಾಮಕೃಷ್ಣ ಭಟ್ಟ, ವಿನೋದ್ ಮಾವುಕಾರ್ ಆರೆಸ್ಸೆಸ್ ಜೊತೆ ಲಿಂಕ್ ಇರುವ. ಜನ ಅದೇರೀತಿ ಕೋಲಾರದ ಶೆಟ್ಟರನೇಕರು ಈ ಸಮಿತಿಯಲ್ಲಿದ್ದಾರೆ. ಇವರಲ್ಲಿ ಬಹುತೇಕರು ಹಿಂದೂ ಕೋಮುವಾದಿಗಳಿಗೆ ಹಣ ಬೆಂಬಲ ನೀಡುವವರೇ ಆಗಿದ್ದಾರೆ.

ಸಮಾಜದಲ್ಲಿ ಹಾಗೂ ವಿದ್ಯಾರ್ಥಿಗಳ ನಡುವೆ ಉತ್ತಮ ನೈತಿಕ ಮೌಲ್ಯಗಳನ್ನು ಬೆಳೆಸಲು ಭಗವದ್ಗೀತೆ ಬೋಧಿಸುತ್ತೇವೆಂದು ಹೇಳಲಾಗುತ್ತಿದೆ.

ಆದರೆ ಕೃಷ್ಣಯ್ಯ ಶೆಟ್ಟಿಯಂತಹ ಕಳ್ಳನನ್ನು ಮುಂದಿಟ್ಟುಕೊಂಡು ಯಾತ್ರೆ ಹೊರಡುತ್ತಾರೆ. ಇದೆಂಥ ನೈತಿಕ ಮೌಲ್ಯ?

ಭಗವದ್ಗೀತೆ ಸುತ್ತ ವಾದ-ವಿವಾದ ನಡೆಯುತ್ತಿರುವ ಈ ಸಂದರ್ಭದಲ್ಲಿ ಈ ಭಗವದ್ಗೀತೆಯಲ್ಲಿ ಏನಿದೆ? ಅದು ಎತ್ತಿ ಹಿಡಿಯುವ ಮೌಲ್ಯಗಳು ಯಾವುವು? ಇದರ ಮೂಲ ಉದ್ದೇಶ ಏನು ಎಂದು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ.

ಆ ನಿಟ್ಟಿನಲ್ಲಿ ಹಿರಿಯ ಬರಹಗಾರ ಮತ್ತು ವಿಚಾರವಾದಿಗಳಾದ ಪ್ರೊ. ಬಿ.ವಿ. ವೀರಭದ್ರಪ್ಪನವರು ಬರೆದಿರುವ 'ಭಗವದ್ಗೀತೆ-ಒಂದು ವೈಚಾರಿಕ ಒಳನೋಟ' ಎಂಬ ಪುಸ್ತಕದ ಒಂದು ಅಧ್ಯಾಯವನ್ನು ನಮ್ಮ ಓದುಗರಿಗೆ ನೀಡುತ್ತಿದ್ದೇವೆ.



ಯಾರೇ ಒಬ್ಬರಿಂದಾಗಲಿ, ಒಂದು ಕಾಲದಲ್ಲಾಗಲಿ ಭಗವದ್ಗೀತೆ ರಚಿತವಾಗಲಿಲ್ಲ. ಬದಲಾಗಿ ವೈದಿಕ ಧರ್ಮ ಕುಂದುತ್ತಾ ಬೌದ್ಧಧರ್ಮ ವ್ಯಾಪಕವಾಗಿ ಜನಪ್ರಿಯವಾಗಿದ್ದ ಕಾಲದಲ್ಲಿ ವಿವಿಧ ಲೇಖಕರಿಂದ ಸೃಷ್ಟಿಯಾದ ಕೃತಿ ಭಗವದ್ಗೀತೆ.

ಭಗವದ್ಗೀತೆ ಆರಂಭವಾಗುವಾಗ 'ವಿಚಾರವಾದಿ'ಯಂತಿರುವ ಅರ್ಜುನ ಮತ್ತು ವೈದಿಕ ಧರ್ಮದ ಪ್ರತೀಕದಂತಿರುವ ಕೃಷ್ಣ ಸಮಾನರಂತೆ, ಸ್ನೇಹಿತರಂತೆ ವರ್ತಿಸುತ್ತಾರೆ. ಆದರೆ ಭಗವದ್ಗೀತೆ ಸಾಗಿದಂತೆ ಅರ್ಜುನ ಕುಗ್ಗುತ್ತಾ, ಕೃಷ್ಣ ವಿಜೃಂಭಿಸುತ್ತಾ ಹೋಗುತ್ತಾನೆ. ಕೊನೆಗೆ ಅರ್ಜುನನನ್ನು ಕೃಷ್ಣ ಸಂಪೂರ್ಣವಾಗಿ ತನ್ನ ವಶಕ್ಕೆ ಪಡೆದುಕೊಳ್ಳುತ್ತಾನೆ. ಅನಂತರ ತನಗೆ ಶರಣಾದ ಅರ್ಜುನನಿಗೆ ಕೃಷ್ಣ ವೈದಿಕ ಧರ್ಮವನ್ನು, ಅದರ ಶ್ರೇಷ್ಠತೆಯನ್ನು ಬೋಧಿಸುತ್ತಾನೆ.

ಅಂದರೆ ಭಗವದ್ಗೀತೆಯ ಉದ್ದೇಶ ವಿಚಾರವಾದವನ್ನು ಧಮನಿಸಿ ವೈದಿಕ ಧರ್ಮವನ್ನು ಸ್ಥಾಪಿಸುವುದೇ ಆಗಿದೆ. 'ಗೀತಾಚಾರ್ಯನ ಚಾತುರ್ಯ' ಎಂಬ ಈ ಅಧ್ಯಾಯದಲ್ಲಿ ಇಂತಹ ಕಪಟ ಗೆಲುವನ್ನು ಕೃಷ್ಣ ಹೇಗೆ ಸಾಧಿಸುತ್ತಾನೆ ಎಂದು ತೋರಿಸಲಾಗಿದೆ.

ಗೀತಾಚಾರ್ಯನ ಚಾತುರ್ಯ

• ಪ್ರೊ. ಬಿ.ವಿ.ವೀರಭದ್ರ

ಬೌದ್ಧ ಧರ್ಮದ ಸೋಲಿನಿಂದ ಉಲ್ಬಣಿಸಿದ ಸಾಮಾಜಿಕ ಅಸ್ವಸ್ಥತೆಯ ಪರಿಣಾಮವಾಗಿ ಅನೇಕ ಬಿಕ್ಕಟ್ಟಿನ ಸಮಸ್ಯೆಗಳು ಉದ್ಭವಿಸಿದವು. ಭಗವದ್ಗೀತೆಯ ಲೇಖಕ ಅವುಗಳಿಗೆ ಪರಿಹಾರ ಹುಡುಕಬೇಕಾಗಿತ್ತು. ಅಳಿದುಳಿದ ಕ್ರಾಂತಿಕಾರಿ ಅಂಶಗಳನ್ನು ಗುಡಿಸಿ ಹಾಕುವ ಉದ್ದೇಶದಿಂದ ಈ ಸಮಸ್ಯೆಗಳನ್ನು ಅರ್ಜುನ ಮತ್ತು ಶ್ರೀಕೃಷ್ಣರ ಸಂವಾದದಲ್ಲಿ ಒಂದಾದ ಮೇಲೆ ಒಂದರಂತೆ ಅಚ್ಚುಕಟ್ಟಾಗಿ ಚರ್ಚಿಸಲಾಯಿತು.

ಮೊಟ್ಟಮೊದಲನೆಯ ಮತ್ತು ಅತಿ ಮುಖ್ಯವಾದ ಸಮಸ್ಯೆಯೆಂದರೆ ಯುದ್ಧ ಮಾಡುವುದಿಲ್ಲ ಎಂದು ಅರ್ಜುನ ಕೈಗೊಂಡ ತೀರ್ಮಾನವನ್ನು ಕುರಿತುದಾಗಿತ್ತು. ಅವನ ತೀರ್ಮಾನವನ್ನು ಶಿಥಿಲಗೊಳಿಸಿ ಅವನು ಯುದ್ಧ ಮಾಡುವಂತೆ ಪ್ರೇರೇಪಿಸಿ ಅವನ ಮೂಲಕ ಕ್ಷತ್ರಿಯ ಕುಲವನ್ನು ನಾಶ ಮಾಡಬೇಕಾಗಿತ್ತು. ಎರಡನೆಯ ಸಮಸ್ಯೆ: ಭೌತವಾದಿಗಳು ಮತ್ತು ನಿರೀಶ್ವರವಾದಿಗಳು ಪೆಟ್ಟು ತಿಂದಿದ್ದರೂ ಪುನಃ ಚೇತರಿಸಿಕೊಂಡು ಸವಾಲು ಒಡ್ಡುವ ಸ್ಥಿತಿಯಲ್ಲಿದ್ದರು. ವೈದಿಕ ಸಿದ್ಧಾಂತ ಮತ್ತು ನಂಬಿಕೆಗಳನ್ನು ಮೇಲೆತ್ತಿ ನಿಲ್ಲಿಸಿ ಅವು ಸರ್ವಶ್ರೇಷ್ಠ ಸ್ಥಾನ ಪಡೆಯುವಂತೆ ಮಾಡಬೇಕಾಗಿತ್ತು. ಮೂರನೆ ಸಮಸ್ಯೆ: ಅತೃಪ್ತರಾದ ಶ್ರಮಜೀವಿಗಳ ಮತ್ತು ದುಡಿಮೆಯಲ್ಲಿ ತೊಡಗಿರುವ ಬುದ್ಧಿಜೀವಿಗಳ ಮನವೊಲಿಸುವುದಾಗಿತ್ತು. ಮೇಲುಜಾತಿಗಳ ದಬ್ಬಾಳಿಕೆ ಮತ್ತು ಶೋಷಣೆಗಳನ್ನು ಸಹಿಸಿಕೊಳ್ಳಲಾರದೆ ಅವರು ಬೃಹತ್ ಪ್ರಮಾಣದಲ್ಲಿ ವೈರಾಗ್ಯ ಸ್ವೀಕರಿಸುವ ಮೂಲಕ ಅಸಹಕಾರದಲ್ಲಿ ತೊಡಗಿದ್ದರು. ಮೇಲಿನ ಈ ಮೂರು ಸಮಸ್ಯೆಗಳಲ್ಲದೆ ಇನ್ನೂ ಅನೇಕ ಅಷ್ಟು ಮುಖ್ಯವಲ್ಲದ ಸಮಸ್ಯೆಗಳಿದ್ದವು. ಶಾಸ್ತ್ರಗಳನ್ನು ಮೊದಲಿನ ಸ್ಥಾನದಲ್ಲಿ ಪುನರ್‌ಸ್ಥಾಪಿಸುವುದು, ಆಚರಣೆಗಳನ್ನು ಪೂಜ್ಯಭಾವನೆಯಿಂದ ನೋಡುವಂತೆ ಮಾಡುವುದು ಮತ್ತು ಜಾತಿ ಭೇದವನ್ನು ಗೌರವಿಸುವುದು ಗಮನಾರ್ಹವಾದ ಸಮಸ್ಯೆಗಳಾಗಿದ್ದವು. ಈ ಎಲ್ಲ ಸಮಸ್ಯೆಗಳಿಗೆ ಸಂವಾದದ ಸೂಕ್ತ ಸಮಯ ಮತ್ತು ಸ್ಥಳಗಳಲ್ಲಿ ಅವು ಕೇಳುವ ಕಿವಿಗಳಿಗೆ ಬೇಸರವಾಗದಂತೆ ಗಮನ ಹರಿಸಲಾಗಿದೆ. ಆ ಕಾಲದ ಎಲ್ಲ ವೈದಿಕ ಚಿಂತಕರಂತೆ ಗೀತೆಯ ಲೇಖಕನೂ ಈ ಎಲ್ಲ ದುಸ್ಥಿತಿಗೆ ವಿಚಾರವಾದದ ಸಿದ್ಧಾಂತಗಳಲ್ಲಿ ಸಾಮಾನ್ಯರಿಗಿರುವ ನಂಬಿಕೆಯೇ ಕಾರಣವೆಂದು ಮನಗಂಡಿದ್ದಾನೆ. ಬೌದ್ಧ ಧರ್ಮದ ಅವನತಿಯ ನಂತರವೂ ಸಾಂಖ್ಯವು ಪ್ರಮುಖ ತತ್ವಮೀಮಾಂಸೆಯಾಗಿತ್ತು. ಮಹಾಭಾರತದ ಶಾಂತಿ ಪರ್ವವು "ಸಾಂಖ್ಯಕ್ಕೆ ಸಮಾನವಾದ ಜ್ಞಾನವಿಲ್ಲ ಮತ್ತು ಯೋಗಕ್ಕೆ ಸಮಾನವಾದ ಶಕ್ತಿ ಇಲ್ಲ" ಎಂದು ದಾಖಲಿಸಿದೆ.

ಎಲ್ಲಿಯವರೆಗೆ ಜನರು ಸಾಂಖ್ಯದಲ್ಲಿ ವಿಶ್ವಾಸವಿಟ್ಟಿರುತ್ತಾರೋ ಅಲ್ಲಿಯವರೆಗೆ ವೈದಿಕ ಧರ್ಮದ ಭವಿಷ್ಯ ಉಜ್ವಲವಾಗಲಾರದು. ಆದರೆ ಬಾದರಾಯಣನು ಮಾಡಿದಂತೆ ಗೀತೆಯ ಲೇಖಕ ದ್ವೈಪಾಯನ ವ್ಯಾಸನು ಸಾಂಖ್ಯವನ್ನು ಅಲ್ಲಗಳೆದು ಈಶ್ವರವಾದದ ದೋಷರಾಹಿತ್ಯವನ್ನು ಎತ್ತಿ ಹಿಡಿಯಲು ತನ್ನ ಶ್ರಮವನ್ನು ವಿನಿಯೋಗಿಸಲಿಲ್ಲ. ಅವನು ಸಾಂಖ್ಯವನ್ನು ಮುಕ್ತಕಂಠದಿಂದ ಪ್ರಶಂಸಿಸುವುದರ ಜೊತೆಗೆ ಅಲ್ಲಲ್ಲಿ ವೇದಗಳ ಶ್ರೇಷ್ಠತೆಯನ್ನು ಪುಷ್ಟಿಸುವುದರ ಮೂಲಕ ತನ್ನ ಉಪದೇಶವನ್ನು ಪ್ರಾರಂಭಿಸುತ್ತಾನೆ.

ಸಾಂಖ್ಯವನ್ನು ನೇರವಾಗಿ ಟೀಕಿಸಿದ್ದರಿಂದ ಬಾದರಾಯಣನು ಯಾವ ಯಶಸ್ಸನ್ನೂ ಸಾಧಿಸಲಿಲ್ಲ ಎಂದು ವ್ಯಾಸನಿಗೆ ಮನವರಿಕೆಯಾಗಿತ್ತು. ಏಕೆಂದರೆ ಪ್ರಕೃತಿಯನ್ನು ಕುರಿತ ಭೌತ ಸಿದ್ಧಾಂತ ಭಾರತೀಯರಲ್ಲಿ ಆಳವಾಗಿ ಬೇರುಬಿಟ್ಟಿತ್ತು. ಆದ್ದರಿಂದ ಅದನ್ನು ಇದ್ದಕ್ಕಿದ್ದ ಹಾಗೇ ತಿರಸ್ಕರಿಸುವುದು ಮೂರ್ಖತನವಾಗುತ್ತಿತ್ತು. ಗೀತೆಯ ಲೇಖಕ ಬಾದರಾಯಣನ ಬ್ರಹ್ಮಸೂತ್ರಗಳಿಗೆ ಗೌರವ ಸೂಚಿಸುತ್ತಾನಾದರೂ ವಿಚಾರವಾದ-ಭೌತವಾದಗಳನ್ನು ನಿರಾಕರಿಸಲು ಬಾದರಾಯಣನ ಮಾರ್ಗವನ್ನು ಅನುಸರಿಸುವುದಿಲ್ಲ. ಸಾಂಖ್ಯವನ್ನು ಕಡೆಗಣಿಸಲು ಗೀತೆಯಲ್ಲಿ ಹೊಸ ಮಾರ್ಗವನ್ನು ಅನುಸರಿಸಲಾಗಿದೆ. ಸಾಂಖ್ಯವನ್ನು ಗೌರವದಿಂದ ಪ್ರಶಂಸಿಸಿ, ಆದರೆ ಅದರ ತಿರುಳನ್ನು ತಿರುಚಿ ಅದನ್ನು ವೇದಾಂತಕ್ಕೆ ಹತ್ತಿರವಾಗುವಂತೆ ಅಥವಾ ಎರಡರಲ್ಲಿ ಭೇದವಿಲ್ಲದಂತೆ ಮಾಡಲಾಗಿದೆ.

ಅರ್ಜುನನು ವಿವೇಕದ ಮಾತುಗಳನ್ನಾಡುತ್ತಿದ್ದಾನೆ ಎಂದು ಕೃಷ್ಣ ಒಪ್ಪಿಕೊಳ್ಳುತ್ತಾನೆ. ಆದರೆ ಅವನು ಯುದ್ಧದಲ್ಲಿ ಭಾಗವಹಿಸದಿರಲು ಸ್ಪಷ್ಟ ಮತ್ತು ವಿವೇಕಯುತ ಕಾರಣಗಳನ್ನು ನೀಡಿದರೂ ಅವನ ವಿಷಣ್ಣತೆಯನ್ನು ಪ್ರೀತಿಯಿಂದ ಛೇಡಿಸುತ್ತಾನೆ:


ಅಶೋಚ್ಯಾನನ್ವಶೋಚಸ್ತ್ವಮ್
ಪ್ರಜ್ಞಾವಾದಾಂಶ್ಚ ಭಾಷಸೇ।
ಗತಾಸೂನಗತಾಸೂಂಶ್ಚ
ನಾನುಶೋಚಂತಿ ಪಂಡಿತಾಃ॥

"ಶೋಕಿಸಲು ಯೋಗ್ಯವಲ್ಲದುದಕ್ಕಾಗಿ ನೀನು ಶೋಕಿಸುತ್ತೀ. ಪಾಂಡಿತ್ಯ ಮಾತು ಆಡುತ್ತಿದ್ದೀ. ಆದರೆ ಪಂಡಿತರು ಸತ್ತವರ ಅಥವಾ ಬದುಕಿರುವವರ ವಿಚಾರವಾಗಿ ಶೋಕಿಸರು."

ಅರ್ಜುನನು ಎತ್ತಿದ ಮಾನವೀಯ ಪ್ರಶ್ನೆಯನ್ನು ಶ್ರೀಕೃಷ್ಣನು ಗಣನೆಗೆ ತೆಗೆದುಕೊಂಡು ಉತ್ತರ ನೀಡದೆ ನೇರವಾಗಿ ನಿಗೂಢ ತತ್ವಮೀಮಾಂಸೆ ಮತ್ತು ಈಶ್ವರವಾದಗಳ ಹೊಳೆಯಲ್ಲಿ ಧುಮುಕುತ್ತಾನೆ. ಅವನು ಸಾಂಖ್ಯವನ್ನು ಕುರಿತು ಅವನದೇ ಆದ ರೀತಿಯಲ್ಲಿ ಸಂಕ್ಷಿಪ್ತವಾಗಿ ಹೇಳಿ ವಿವರಗಳನ್ನು ಮುಂದಿನ ಉಪದೇಶಕ್ಕೆ ಮೀಸಲಿಡುತ್ತಾನೆ. ಶ್ರೀಕೃಷ್ಣನ ವಾದದ ತಿರುಳು ಇಷ್ಟು:

"ದೇಹಿ ನಿತ್ಯ ಅಚಿಂತ್ಯ ಅವಿನಾಶಿ. ಅವನ ಈ ದೇಹ ನಾಶವಂತ, ಅನಿತ್ಯ ಎಂದು ಹೇಳಿದ್ದಾರೆ. ಆದುದರಿಂದ ಭಾರತ (ಅರ್ಜುನ), ನೀನು ಯುದ್ಧ ಮಾಡು."[3]

ಈ ಕಾರಣದಿಂದ ಅರ್ಜುನನು ಮುಂಬರುವ ತನ್ನ ಬಂಧುಬಾಂಧವರ ಕೊಲೆ ರಕ್ತಪಾತಗಳಿಗಾಗಿ ದುಃಖಿಸಲು ಬಾರದು ಎಂದು ಕೃಷ್ಣ ಒತ್ತಿ ಹೇಳುತ್ತಾನೆ:



ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ।
ತಥಾ ಶರೀರಾಣಿ ವಿಹಾಯ ಜೀರ್ಣಾ
ನ್ಯನ್ಯಾನಿ ಸಂಯಾತಿ ನವಾನಿ ದೇಹೀ॥

"ಮನುಷ್ಯ ಹಳೆ ಬಟ್ಟೆ ಬಿಟ್ಟು ಹೊಸ ಬಟ್ಟೆ ಧರಿಸುವಂತೆ ದೇಹಧಾರಿ ಕೂಡ ಜೀರ್ಣ-ಶೀರ್ಣ ದೇಹವನ್ನು ಬಿಟ್ಟು ಬೇರೆ ಹೊಸ ದೇಹವನ್ನು ಧರಿಸುತ್ತಾನೆ. ಆದ್ದರಿಂದ ದುಃಖ ದುಮ್ಮಾನಗಳನ್ನು ಸಹಿಸಿಕೊಳ್ಳುವುದನ್ನು ಕಲಿ. "ಕುಂತೀಪುತ್ರ, ಇಂದ್ರಿಯಗಳ ಸಂಬಂಧದಿಂದ ಶೀತೋಷ್ಣ ಸುಖದುಃಖ ಉಂಟಾಗುತ್ತವೆ. ಅವು ಅನಿತ್ಯ ಬರುತ್ತವೆ, ಹೋಗುತ್ತವೆ. ನೀನು ಅವನ್ನು ಸಹನ ಮಾಡಿಕೊ" ಯುದ್ಧದಲ್ಲಿ ಕೊಲೆ ಅತ್ಯಂತ ವೇದನೆಯನ್ನುಂಟುಮಾಡುತ್ತದೆ. ಆದರೆ ಅದು ಶಾಶ್ವತವಲ್ಲ, ಆದ್ದರಿಂದ ಅದು ಯುದ್ಧದಿಂದ ವಿಮುಖವಾಗಲು ಸರಿಯಾದ ಕಾರಣವಲ್ಲ.

ಇದು ಒಂದು ಜೀವನ ಸಿದ್ಧಾಂತವಾದರೂ ಅದು ಕಪಿಲ ಅಥವಾ ಇತರೆ ಸಾಂಖ್ಯ ಆಚಾರ್ಯರು ಹೇಳಿದುದು ಖಂಡಿತ ಅಲ್ಲ, ಡಾ. ರಾಧಾಕೃಷ್ಣನ್ ಅಂಥವರೂ ಒಪ್ಪಿಕೊಳ್ಳುತ್ತಾರೆ:

"ಗೀತಾಚಾರ್ಯನು ಶ್ಲೋಕಗಳು 11 ರಿಂದ 38 ರಲ್ಲಿ ಸಾಂಖ್ಯ ತತ್ವಮೀಮಾಂಸೆಯ ಜ್ಞಾನವನ್ನು ಸಂಕ್ಷಿಪ್ತವಾಗಿ ಹೇಳುತ್ತಾನೆ. ಆದರೆ ಇದು ಕಪಿಲನ ಸಾಂಖ್ಯಕ್ಕೆ ಸಂಬಂಧಿಸಿದ್ದು ಅಲ್ಲ; ಉಪನಿಷತ್ತುಗಳ ಬೋಧನೆಯನ್ನು ಕುರಿತದ್ದು." ಹಾಗಾದರೆ ಶ್ರೀಕೃಷ್ಣನಾಗಲಿ ಅಥವಾ ಡಾ. ರಾಧಾಕೃಷ್ಣನ್‌ರಾಗಲಿ ಇದನ್ನು ವೇದಾಂತ ಎನ್ನದೆ ಸಾಂಖ್ಯ ಎಂದೇಕೆ ಕರೆಯುತ್ತಾರೆ ಎಂಬುದು ಅರ್ಥವಾಗುವುದಿಲ್ಲ.

ಅದೇನೇ ಆದರೂ ತಿರುಚಿ ಹೇಳಲಾದ ಸಾಂಖ್ಯವೂ ಕೂಡ ಅರ್ಜುನನಿಗೆ ಸಮ್ಮತವಾಗಲಿಲ್ಲ ಎಂದು ಶ್ರೀಕೃಷ್ಣ ಮನಗಾಣುತ್ತಾನೆ. ಆದ್ದರಿಂದ ವೈದಿಕ ಧರ್ಮದ ಶ್ರೇಷ್ಠ ಗುರು ಅಧಾರ್ಮಿಕ ಪದ್ಧತಿಗೆ ಶರಣಾಗತನಾಗುತ್ತಾನೆ. ಕ್ಷತ್ರಿಯ ಕುಮಾರನ ಜಾತಿ ಹಮ್ಮು ಮತ್ತು ಅಧಿಕಾರ ಲಾಲಸೆಗಳನ್ನು ಕೆಣಕುತ್ತಾನೆ. ಶ್ರೀಕೃಷ್ಣ ಪ್ರೀತಿಯಿಂದ ಬುದ್ಧಿ ಹೇಳುತ್ತಾನೆ:

"ಸ್ವಧರ್ಮವನ್ನರಿತ ನೀನು ಹಿಂದೆಮುಂದೆ ನೋಡುವುದು ಸರಿಯಲ್ಲ. ಏಕೆಂದರೆ ಕ್ಷತ್ರಿಯರಿಗೆ ಧರ್ಮಯುದ್ಧಕ್ಕಿಂತಲೂ ಹೆಚ್ಚು ಶ್ರೇಯಸ್ಕರವಾದುದು ಮತ್ತೊಂದಿಲ್ಲ. ಪಾರ್ಥ, ತಾನಾಗಿಯೇ ಒದಗಿದೆ ಈ ಯುದ್ಧ ಸ್ವರ್ಗದ ಬಾಗಿಲನ್ನೇ ತೆರೆವ ಯುದ್ಧ ಬರುವುದು ಭಾಗ್ಯಶಾಲಿ ಕ್ಷತ್ರಿಯರ ಪಾಲಿಗೆ ಮಾತ್ರವೇ. ಧರ್ಮ ಪ್ರಾಪ್ತವಾದ ಈ ಯುದ್ಧವನ್ನು ನೀನು ಮಾಡದಿದ್ದರೆ ಸ್ವಧರ್ಮ, ಕೀರ್ತಿಗಳನ್ನು ನಾಶಮಾಡಿಕೊಂಡು ಪಾಪಭಾಗಿಯಾಗುತ್ತೀಯೆ." ಶ್ರೀಕೃಷ್ಣನು ಮುಂದುವರೆಯುತ್ತಾನೆ: "ಜನರೆಲ್ಲರೂ ಯಾವಾಗಲೂ ನಿನ್ನನ್ನು ನಿಂದಿಸುತ್ತಾರೆ. ಸಂಭಾವಿತನಿಗೆ ಅಪಕೀರ್ತಿ ಮರಣಕ್ಕಿಂತ ಹೆಚ್ಚು ಕೆಟ್ಟದು. ಯಾವ ಮಹಾರಥಿಗಳು ನಿನ್ನನ್ನು ಈಗ ಮನ್ನಿಸುತ್ತಿದ್ದಾರೋ ಅವರೇ ನಿನ್ನನ್ನು ನೀನು ರಣದಿಂದ ಓಡಿಹೋದೆ, ತುಚ್ಛ ಎಂದಾರು. ನಿನ್ನ ಶತ್ರುಗಳು ನಿನ್ನ ಬಲವನ್ನು ನಿಂದಿಸುವಾಗ ಆಡಬಾರದ ಮಾತನ್ನೆಲ್ಲಾ ಆಡಿಯಾರು. ಇದಕ್ಕಿಂತಲೂ ಹೆಚ್ಚು ದುಃಖದಾಯಕವೇನಿದೆ? ಹತನಾದರೆ ಸ್ವರ್ಗ, ಗೆದ್ದರೆ ಪೃಥ್ವಿಯ ಉಪಭೋಗ. ಆದ್ದರಿಂದ ಕೌಂತೇಯ ಯುದ್ಧ ಮಾಡಲು ನಿಶ್ಚಯಿಸಿ ನಿಲ್ಲು."

ಯಾವುದೇ ಯುದ್ಧ ಸಮರ್ಥನೀಯವೇ ಎಂಬುದು ಹಾಗಿರಲಿ. ತನ್ನ ಹತ್ತಿರದ ಸಂಬಂಧಿಗಳ, ಮಿತ್ರರ ಮತ್ತು ಸಾವಿರಾರು ಮುಗ್ಧ ಸೈನಿಕರ ರಕ್ತವನ್ನು ಹರಿಸಿ ಇಡೀ ಜಗತ್ತಿನ ಆಧಿಪತ್ಯವನ್ನು ಪಡೆಯುವುದು ಸಹ ಅಮಾನುಷವಾಗುತ್ತದೆ ಎಂಬ ಅರ್ಜುನನ ನಿಲುವನ್ನು ಶ್ರೀಕೃಷ್ಣನು ಪರಿಗಣಿಸುವುದೇ ಇಲ್ಲ. ಸರಳ ಮಾತಿನಲ್ಲಿ ಹೇಳುವುದಾದರೆ ಮಾನವೀಯತೆಗಿಂತ ರಾಜಕೀಯ ಹಕ್ಕುಗಳು ಮುಖ್ಯವೇ

ಎಂಬುದು ಅರ್ಜುನನ ಪ್ರಶ್ನೆ. ಇದಕ್ಕೆ ಶ್ರೀಕೃಷ್ಣನ ಉತ್ತರವಿ
ಅರ್ಜುನನು ಅಚಲನಾಗಿ ನಿಲ್ಲುತ್ತಾನೆ. ಮುಂದೆ ಮಹಾಗು
ತನ್ನ ಶಿಷ್ಯನನ್ನು ಪ್ರಲೋಭನೆಗೆ ಒಡ್ಡಲು ಯೋಗವ
ಕುರಿತು ಉಪದೇಶ ಮಾಡುತ್ತಾನೆ: "ಈ (ಯೋ
ಧರ್ಮವನ್ನು ಸ್ವಲ್ಪಮಟ್ಟಿಗೆ ಆಚರಿಸಿದರೂ ಕ
ಮಹಾಭಯದಿಂದ ಕಾಪಾಡುತ್ತದೆ."

ಗೀತೆಯ ಯೋಗ ಪಾತಂಜಲಿ ಯೋಗವಲ್ಲವೆಂ
ಡಾ. ರಾಧಾಕೃಷ್ಣನ್ ಅವರೇ ತೋರಿಸಿಕೊಟ್ಟಿದ್ದಾರೆ. ಶ್ರೀಕೃಷ್ಣ
ಅದನ್ನು ಅದ್ವೈತ ತತ್ವಶಾಸ್ತ್ರಕ್ಕೆ ಬೆಂಬಲವಾಗುವ ರೀತಿಯ
ವ್ಯಾಖ್ಯಾನಿಸುತ್ತಾನೆ. ಅದು ಜ್ಞಾನಯೋಗ. ಅದರ ಸಾರವೇ
ಶ್ರೀಕೃಷ್ಣ ಹೇಳುತ್ತಾನೆ:

ಕರ್ಮಣ್ಯೇವಾಧಿಕಾರಸ್ತೆ
ಮಾ ಫಲೇಷು ಕದಾಚನ
ಮಾ ಕರ್ಮಫಲಹೇತುರ್ಭೂ-
ರ್ಮಾ ತೇ ಸಂಗೋಽಸ್ತ್ವ ಕರ್ಮಣಿ॥

"ಕರ್ಮ ಮಾಡುವುದಕ್ಕೆ ಮಾತ್ರ ನಿನಗೆ ಅಧಿಕಾ
ಅದರಿಂದ ಹುಟ್ಟುವ ಅನೇಕ ಫಲಗಳ ಅಧಿಕಾರವೆಂದಿ
ಇಲ್ಲ. ಕರ್ಮಫಲ ನಿನ್ನ ಉದ್ದೇಶವಾಗದಿರಲಿ. ಕ
ಮಾಡದಿರುವ ಆಗ್ರಹವೂ ನಿನಗೆ ಬೇಡ."

ತನ್ನ ಕಲ್ಪನೆಯ ಯೋಗ ಸ್ವೀಕೃತವಾಗುವಂತೆ ಮಾಡ
ಶ್ರೀಕೃಷ್ಣ ಅದಕ್ಕೆ ವೇದಗಳಿಗಿಂತಲೂ ಮಿಗಿಲಾದ ಸ
ನೀಡುತ್ತಾನೆ: "ಅನೇಕ ಬಗೆಯ ಸಿದ್ಧಾಂತಗಳನ್ನು
ನಿನ್ನ ಬುದ್ಧಿ ವ್ಯಾಗ್ರವಾಗಿದೆ. ಅದು ಸಮಾಧಿಯಲ್ಲಿ ಸ್ಥಿರವಾದ
ನಿನಗೆ ಸಮತೆ ಬರುತ್ತದೆ." ಈ ಚತುರ ನೀತಿ ಅರ್ಜುನ
ತಾನು ಎತ್ತಿದ ಮೂಲಭೂತ ಪ್ರಶ್ನೆಯನ್ನು ಮರೆತು ಶ್ರೀಕೃ
ಪ್ರಸ್ತಾಪಿಸಿದ ತಾತ್ವಿಕ ಸಿದ್ಧಾಂತದ ವಿವರಣೆಯನ್ನು ಕೇಳುತ
"ಕೇಶವ, ಸ್ಥಿತಪ್ರಜ್ಞ ಅಥವಾ ಸಮಾಧಿಸ್ಥನ ಲಕ್ಷಣಗಳೇನ
ಸ್ಥಿತಪ್ರಜ್ಞನ ನಡೆನುಡಿ ಹೇಗಿರುತ್ತವೆ?"

ಯುದ್ಧ ವಿರೋಧಿಸಿ ತಾನು ಮೊದಲು ಎತ್ತಿದ ಪ್ರಶ್ನೆ
ಇದಕ್ಕೂ ಯಾವ ಸಂಬಂಧವಿದೆ ಎಂದು ಕೇಳಬೇಕೆನ್ನುತ
ಅರ್ಜುನನ ಬಿಗಿ ನಿಲುವು ಕರಗುತ್ತಿರುವುದನ್ನು ಗಮನಿ
ಶ್ರೀಕೃಷ್ಣನು ಗೀತೆಯ ಮುಖ್ಯ ತಾತ್ವಿಕ ಸಿದ್ಧಾಂತವ
ದೇವರ ಅವತಾರದ-ಅಂಶವನ್ನು ಮುಂದಿಡುತ್ತಾನೆ:

"ಕುಂತೀಪುತ್ರ, ಎಷ್ಟೇ ಚತುರನಾದರೂ ಕ
ಇಂದ್ರಿಯಗಳು ಪ್ರಮಥನ ಶೀಲವಾದುದರಿಂದ ಅ
ಮನಸ್ಸನ್ನು ಬಲವಾಗಿ ಸೆಳೆದುಬಿಡುತ್ತವೆ. ಈ ಇಂದ್ರಿ
ಗಳನ್ನೆಲ್ಲಾ ಸ್ವಾಧೀನದಲ್ಲಿಟ್ಟುಕೊಂಡು ಯೋಗಿ ತ
ತನ್ಮಯನಾಗಿರಬೇಕು. ಏಕೆಂದರೆ ಯಾರ ಇಂದ್ರಿಯಗ
ಸ್ಥಿರವೋ ಅವನ ಬುದ್ಧಿಯೂ ಸ್ಥಿರ." ಶ್ರೀಕೃಷ್ಣನ ವ
ಸರಣಿ ತರ್ಕ ಸಮ್ಮತವಾಗಿಲ್ಲ. ಒಂದು ಕಡೆ ಅವ
ಅರ್ಜುನನನ್ನು ಏಳು, ಹೋರಾಡು ಮತ್ತು ರಾಜ್ಯವ
ಪಡೆ ಎಂದು ಆಗಾಗ ಹೇಳುತ್ತಿದ್ದಾನೆ. ಇನ್ನೊಂದು
"ಎಲ್ಲ ಬಗೆಯ ಆಸಕ್ತಿಗಳನ್ನೂ ಬಿಟ್ಟು, ಯಾವ ಪುರ
ಇಚ್ಛೆ ಮಮತೆ, ಅಹಂಕಾರಗಳಿಲ್ಲದೆ ನಡೆಯುತ್ತಾನೆ
ಅವನೇ ಶಾಂತಿಯನ್ನು ಪಡೆಯುತ್ತಾನೆ." ಎಂ
ಘೋಷಿಸುತ್ತಾನೆ. ಅರ್ಜುನ ಪರುಷ ವಿರೋಧಿ ಹೇಳಿಕ

ತವಾಗಿ ಪ್ರತಿಕ್ರಿಯಿಸಿ ಕೇಳುತ್ತಾನೆ: "ಜನಾರ್ದನ, ಕ್ಕಿಂತಲೂ ಬುದ್ಧಿಯೇ ಅಧಿಕ ಶ್ರೇಷ್ಠವೆಂದು ನೀನು ಪ್ರಾಯಪಡುವುದಾದರೆ ನನಗೇಕೆ ಘೋರ ಕರ್ಮವನ್ನು ಚುಸುತ್ತಿದ್ದೀಯೆ?"

ಶ್ರೀಕೃಷ್ಣನ ಅಂತಹ ಹೇಳಿಕೆಗಳು ಪುನಃ ಗೊಂದಲಕ್ಕೀಡು ಡುತ್ತವೆ. ಅವನು ಕೇಳುತ್ತಾನೆ: "ನಿನ್ನ ಮಿಶ್ರವಾಕ್ಯಗಳಿಂದ ಬುದ್ಧಿ ಸಂದೇಹಗೊಳ್ಳುತ್ತಿದೆ. ಆದುದರಿಂದ ನನಗೆ ಣದ ಒಂದೇ ಮಾತನ್ನು ನಿಶ್ಚಿತವಾಗಿ ಹೇಳು." ಮ್ಮೆ ಅರ್ಜುನನು ಎತ್ತಿದ ಯುದ್ಧ ಮತ್ತು ಶಾಂತಿಯ ಯನ್ನು ಕಡೆಗಣಿಸಿ ಶ್ರೀಕೃಷ್ಣನು ತನ್ನ ಮಾತನ್ನು ಬೇರೆ ತಿರುಗಿಸುತ್ತಾನೆ. ಸಾಂಖ್ಯ ಮತ್ತು ಯೋಗಗಳಲ್ಲಿ ಸವಿಲ್ಲವೆಂದು ತೋರಿಸಲು ಪ್ರಯತ್ನಿಸುತ್ತಾನೆ. ಬೇರೆ ತುಗಳಲ್ಲಿ ಹೇಳುವುದಾದರೆ ಜ್ಞಾನವು ಕರ್ಮಕ್ಕಿಂತ ವೆಯಾದುದಲ್ಲ, ಕ್ರಿಯೆಯ ಬಹುಮುಖ್ಯವೆಂದು ಲಾಗುತ್ತದೆ. ಯೋಗವು ಸಾಂಖ್ಯಕ್ಕಿಂತ ಮಿಗಿಲಾದುದು ಮ ತೋರಿಸಲಾಗಿದೆ. ಶ್ರೀಕೃಷ್ಣನು ಪ್ರಾಚೀನಕಾಲದಲ್ಲಿ ತರಿಸಿ ಯೋಗ ತತ್ವವನ್ನು ಬೋಧಿಸಿದುದಾಗಿ ಸುತ್ತಾನೆ. ವಿಚಾರವಾದಿ ಅರ್ಜುನ ಆಶ್ಚರ್ಯ ವ್ಯಕ್ತಪಡಿಸಿ ಶ್ರೀಕೃಷ್ಣ ಅವನಿಗೆ ದೇವರ ಅವತಾರಗಳನ್ನು ವಿವರಿಸಿ ನವನ್ನು ಪ್ರಶಂಸಿಸುತ್ತಾನೆ: "ಅರ್ಜುನ, ಉರಿಯುವ ಕಟ್ಟಿಗೆಯನ್ನು ಸುಟ್ಟು ಬೂದಿ ಮಾಡುವಂತೆ, ಜ್ಞಾನದ ಸಕಲ ಕರ್ಮಗಳನ್ನೂ ಭಸ್ಮಮಾಡಿ ಬಿಡುತ್ತದೆ."

ಶ್ರೀಕೃಷ್ಣನು ಒಮ್ಮೆ ಜ್ಞಾನ ಶ್ರೇಷ್ಠ ಎಂದು ಹೇಳಿ ಗಳಿಗೆಯೇ ಕರ್ಮ ಶ್ರೇಷ್ಠ ಎಂದು ಹೇಳುವುದನ್ನು ಅರ್ಜುನ ಪ್ರತಿಭಟಿಸುತ್ತಾನೆ: "ಕೃಷ್ಣ! ನೀನು ಒಂದು ಕರ್ಮಯೋಗವನ್ನು, ಒಂದು ಸಲ ಕರ್ಮ ಸನ್ಯಾಸ ವಾ ತ್ಯಾಗವನ್ನು ಹೊಗಳುತ್ತೀಯೆ. ಇವೆರಡರಲ್ಲಿ ವುದು ಶ್ರೇಯಸ್ಕರವೋ ಸರಿಯಾಗಿ ನಿಶ್ಚಯಿಸಿ ಹೇಳು." ಮನಸ್ಸನ್ನು ತಾನೇ ಸರಿಯಾಗಿ ತಿಳಿಯದೆ ಅಥವಾ ವುದಾದರೂ ಒಂದು ಪಕ್ಷವನ್ನು ವಹಿಸಲಾರದೆ ಶ್ರೀಕೃಷ್ಣ ಸನ್ಯಾಸಕ್ಕಿಂತ ಕರ್ಮಯೋಗವೇ ಹೆಚ್ಚಿನದು" ಎಂದು ತ್ತಾನೆ. ಸ್ವಲ್ಪ ನಂತರವೇ ಪ್ರತಿಜ್ಞೆ ಮಾಡಿ ಹೇಳುತ್ತಾನೆ:

ಸಾಂಖ್ಯಯೋಗೌ ಪೃಥಗ್ಬಾಲಾ:
ಪ್ರವದಂತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಃ ಸಮ್ಯಕ್
ಉಭಯೋರ್ವಿಂದತೇ ಫಲಮ್॥

"ಅಜ್ಞಾನಿಗಳು ಸಾಂಖ್ಯ-ಯೋಗ, ಜ್ಞಾನ-ಕರ್ಮ ರಡನ್ನೂ ಬೇರೆ ಬೇರೆ ಎಂದು ತಿಳಿಯುತ್ತಾರೆ; ತರು ಹಾಗೆ ಭಾವಿಸರು. ಸಂಪೂರ್ಣವಾಗಿ ದವನು ಎರಡರ ಫಲವನ್ನೂ ಹೊಂದುತ್ತಾನೆ."

ಶ್ರೀಕೃಷ್ಣನು ಈ ಸಂದರ್ಭವನ್ನು ನಿಷ್ಕಾಮಕರ್ಮ ನ್ನು ವಿವರಿಸಲು ಉಪಯೋಗಿಸಿಕೊಳ್ಳುತ್ತಾನೆ:

ಅನಾಶ್ರಿತಃ ಕರ್ಮಫಲಮ್
ಕಾರ್ಯಂ ಕರ್ಮ ಕರೋತಿ ಯಃ।
ಸ ಸಂನ್ಯಾಸೀ ಚ ಯೋಗೀ ಚ
ನ ನಿರಗ್ನಿರ್ನ ಚಾಕ್ರಿಯಃ॥

"ಕರ್ಮಫಲವನ್ನು ಆಶ್ರಯಿಸದೆ ವಿಹಿತ ಕರ್ಮ ವನ್ನು ಮಾಡುವ ಮನುಷ್ಯನೇ ಸನ್ಯಾಸಿ ಅವನೇ ಗಿ; ಅಗ್ನಿಯನ್ನು, ಎಲ್ಲಾ ಬಗೆಯ ಕ್ರಿಯೆಗಳನ್ನು ಮಾಡಿ ಕುಳಿತವನಲ್ಲ."

ಹೊಸ ಹೊಸ ಸಿದ್ಧಾಂತಗಳ ದೀರ್ಘ ವಿವರಣೆ ನನ ಸಂದೇಹ ಮತ್ತು ಗೊಂದಲಗಳನ್ನು ಸಿದವೋ ಇಲ್ಲವೋ ಹೇಳುವುದು ಕಷ್ಟ. ಆದರೆ ಮೇಲೆ ಭದ್ರವಾಗಿ ಕಾಲೂರಿ ನಿಂತಿದ್ದ ಅವನು ಶ್ರೀಕೃಷ್ಣನ ಚಾತುರ್ಯದಿಂದ ನಿಗೂಢತ್ವದ ಅವಾಸ್ತವಿಕ ವರಣದಲ್ಲಿ ಹಾರಾಡಲಾರಂಭಿಸಿದ. ಅವನ ಸಂದೇಹ ಮತ್ತು ಪ್ರಶ್ನೆಗಳು ಅಲ್ಲಿಂದ ಮುಂದೆ ಸಾಮಾಜಿಕ ಮತ್ತು ವೈಚಾರಿಕ ನೀತಿಗಳಿಗೆ ಸಂಬಂಧಿಸಿರದೆ ಲೋಕ ಮತ್ತು ಪರಮಾತ್ಮನನ್ನು ಕುರಿತಾಗಿರುತ್ತವೆ: ಮಧುಸೂದನ ನೀನು (ಸಮತ್ವದ) ಯೋಗವನ್ನು ನೆ. ಚಂಚಲತೆಯ ದೆಸೆಯಿಂದ ನಾನು ಅದರ ನ್ನು ಕಾಣಲಾರದಿದ್ದೇನೆ. ಏಕೆಂದರೆ ಕೃಷ್ಣ ಮನಸ್ಸು . ಅದು ಮನುಷ್ಯನನ್ನು (ಮಥಿಸಿ) ಕಡೆದು ಬಿಡುತ್ತದೆ. ಬಹು ಬಲಿಷ್ಠ. ವಾಯುವನ್ನು ಒತ್ತಿಡುವುದು ಗಿರುವಂತೆಯೇ ಮನಸ್ಸನ್ನು ವಶಪಡಿಸಿಕೊಳ್ಳುವುದೂ ದು ನಾನು ತಿಳಿದಿದ್ದೇನೆ."

ಕೃಷ್ಣ ಶ್ರದ್ಧಾವಂತನಾದರೂ ಪ್ರಯತ್ನ ಮಂದವಾದು ಯಾರು ಯೋಗ ಭ್ರಷ್ಟನಾಗುತ್ತಾನೋ ಅವನ ೀನು? ಯೋಗ ಭ್ರಷ್ಟನಾಗಿ ಬ್ರಹ್ಮ ಮಾರ್ಗದಲ್ಲಿ ತಪ್ಪಿದವನು ಚದುರಿದ ಮೋಡಗಳಂತೆ ಉಭಯ ಗಿ ನಾಶ ಹೊಂದುವುದಿಲ್ಲವಷ್ಟೆ?"

ಅಂತಹ ಪ್ರಶ್ನೆಗಳನ್ನು ಕೇಳಿ ಶ್ರೀಕೃಷ್ಣನು ಒಳಗೊಳಗೇ ಲೇಕು. ಅರ್ಜುನ ಮುಂದುವರಿದು ಕೇಳುತ್ತಾನೆ: ಷೋತ್ತಮ, ಈ ಬ್ರಹ್ಮನ ಸ್ವರೂಪವೆಂತಹುದು? ತ್ಮವೆಂದರೇನು? ಕರ್ಮವೆಂದರೇನು? ಅಧಿಭೂತ ದು? ಅಧಿದೈವವೆಂಬುದು ಯಾವುದು?"

ಪಡಿಸುವ ತನ್ನ ಚಾತುರ್ಯ ಮತ್ತು ತಂತ್ರ ಯಶಸ್ವಿಯಾಗುತ್ತಿರುವುದನ್ನು ಕಂಡು ಗೀತಾಚಾರ್ಯನಿಗೆ ಖುಷಿಯಾಗಿರಬೇಕು. ಅರ್ಜುನನು ಮುಂಬರುವ ರಕ್ತಪಾತ, ಕೊಲೆ, ತನ್ನ ಬಂಧುಬಾಂಧವರ ಸಾವು, ಸ್ವಾರ್ಥಗಳ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದ. ಸೆಟೆದು ನಿಂತ ಅವನ ಬಿಗಿ ನಿಲುವು ಕರಗಿ ನೀರಾಯಿತು. ಈಗ ಅವನು ಸಮಾಜದ ಕಲ್ಯಾಣದಲ್ಲಿ ಆಸಕ್ತಿಯನ್ನು ಕಳೆದುಕೊಂಡು ಯೋಗಾಭ್ಯಾಸ ಮತ್ತು ನಿಗೂಢ ಧಾರ್ಮಿಕ ತತ್ವಗಳಲ್ಲಿ ಕುತೂಹಲ ತಾಳಿದ.

ಈ ಹಂತದಲ್ಲಿ ಶ್ರೀಕೃಷ್ಣನು ಮನುಷ್ಯ ವೇಷವನ್ನು ಕಿತ್ತಸೆಯುತ್ತಾನೆ. ದೇವರ ಅವತಾರವಾಗಿ ಈಗ ಸರಿಯಾದ ಮನಸ್ಥಿತಿಯಲ್ಲಿರುವ ಶಿಷ್ಯನನ್ನು ಧರ್ಮಮಾರ್ಗದಲ್ಲಿ ಮುಂದುವರಿಯಲು ಪ್ರೋತ್ಸಾಹಿಸುತ್ತಾನೆ. ಗುರು ಶಿಷ್ಯನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾನೆ:

"ನೀನು ದ್ವೇಷರಹಿತ. ಆದುದರಿಂದ ಗುಹ್ಯಕ್ಕಿಂತ ಗುಹ್ಯವಾದ ಅನುಭವಪೂರ್ಣ ಜ್ಞಾನವನ್ನು ನಾನು ನಿನಗೆ ನೀಡುತ್ತೇನೆ. ಅದನ್ನರಿತು ಅಕಲ್ಯಾಣದಿಂದ ಮುಕ್ತನಾಗುತ್ತೀ. ವಿದ್ಯೆಗಳಲ್ಲೆಲ್ಲಾ, ಗೂಢಗಳಿಗೆಲ್ಲಾ ಇದು ರಾಜ, ಈ ವಿದ್ಯೆ ಪವಿತ್ರ, ಪ್ರತ್ಯಕ್ಷಾನುಭವಕ್ಕೆ ಯೋಗ್ಯ, ಧಾರ್ಮಿಕ, ಆಚರಿಸಲು ಸುಲಭ, ಅವಿನಾಶಿ" ಗೂಢಗಳಿಗೆಲ್ಲಾ ರಾಜನಾದುದು ಬೇರೇನೂ ಆಗಿರದೆ ದೇವರನ್ನು ಸ್ತುತಿಸುವುದು ಮತ್ತು ಅವನಲ್ಲಿ ಸಂಪೂರ್ಣ ನಂಬಿಕೆಯಿಟ್ಟು ಮುಕ್ತಿಯನ್ನು ಪಡೆಯುವುದು ಆಗಿದೆ:

ಮನ್ಮನಾ ಭವ ಮದ್ಭಕ್ತೋ
ಮದ್ಯಾಜೀ ಮಾಂ ನಮಸ್ಕುರು।
ಮಾಮೇವೈಷ್ಯಸಿ ಯುಕ್ತೈವಮ್
ಆತ್ಮಾನಂ ಮತ್ಪರಾಯಣಃ॥

"ನನ್ನಲ್ಲಿ ಮನಸ್ಸಿಡು, ನನ್ನ ಭಕ್ತನಾಗು, ನನ್ನ ನಿಮಿತ್ತ ಯಜ್ಞ ಮಾಡು, ನನ್ನನ್ನು ನಮಸ್ಕರಿಸು, ನನ್ನಲ್ಲಿ ಪರಾಯಣನಾಗಿ ನನ್ನೊಂದಿಗೆ ಆತ್ಮವನ್ನು ಸೇರಿಸು; ನೀನು ನನ್ನನ್ನೇ ಹೊಂದುತ್ತೀಯೇ"

ಬಿಟ್ಟ ಬಾಣ ಗುರಿ ಮುಟ್ಟಿತು. ಅರ್ಜುನನ್ನಲ್ಲಿದ್ದ ವಿಮರ್ಶಕನನ್ನು ಗೆಲ್ಲಲಾಯಿತು; ಅವನು ಸೋಲನೊಪ್ಪಿಕೊಂಡ: "ನೀನು ಪರಬ್ರಹ್ಮ, ಪರಮಧಾಮ, ಪರಮ ಪವಿತ್ರ. ಎಲ್ಲ ಋಷಿಗಳು ನಿನ್ನನ್ನು ಅವಿನಾಶಿ, ದಿವ್ಯ ಪುರುಷ, ಆದಿದೇವ, ಅಜನ್ಮ, ಈಶ್ವರ ರೂಪ ಎಂದು ತಿಳಿದಿದ್ದಾರೆ. ನೀನು ಅದನ್ನೇ ಹೇಳುತ್ತಿದ್ದಿಯೆ.".

ದೇವರನ್ನು ಯಾವ ಯಾವ ರೂಪದಲ್ಲಿ ಸ್ಮರಿಸಬಹುದು ಎಂದು ಅರ್ಜುನ ಕೇಳುತ್ತಾನೆ. ಶ್ರೀಕೃಷ್ಣನು ಅವನಿಗೆ ದೇವರ ಸ್ವರೂಪವನ್ನು ತಿಳಿಸುವ ದೀರ್ಘ ಪಟ್ಟಿಯನ್ನು ನೀಡುತ್ತಾನೆ. 'ಆತ್ಮನನ್ನು ಕುರಿತ ಉಪದೇಶ' ಮತ್ತು 'ಪರಮ ರಹಸ್ಯ'ದ ಬೋಧನೆಯಿಂದ ಅವನ ಗೊಂದಲ ನಿವಾರಣೆಯಾಗುತ್ತದೆ. ಆದರೂ ಪರಮಾತ್ಮನ ದಿವ್ಯ ಸ್ವರೂಪವನ್ನು ನೋಡಲು ಆಶಿಸುತ್ತಾನೆ.

ಅರ್ಜುನನ ಕಲ್ಪನೆ ತುತ್ತತುದಿಯನ್ನು ತಲುಪಿ ಹಗಲುಗನಸನ್ನು ಕಾಣುವ ಹಂತ ತಲುಪುತ್ತದೆ. ಶ್ರೀಕೃಷ್ಣನು ವಿಶ್ವರೂಪದ ಅದ್ಭುತ ಲೋಕವನ್ನು ವಿವರಿಸುತ್ತಾನೆ. ಆದರೆ ವೈಚಾರಿಕತೆ ಮತ್ತು ಕನಸಿನ ಲೋಕ ಜೊತೆಗೂಡಿರಲು ಸಾಧ್ಯವಿಲ್ಲ, ಅರ್ಜುನನಲ್ಲಿ ಸ್ವಲ್ಪವಾದರೂ ವೈಚಾರಿಕತೆ ಉಳಿದಿದ್ದರೆ ಅವನು ಭಾವನಾಲೋಕವನ್ನು ಪ್ರವೇಶಿಸಲಾರ. ಶ್ರೀಕೃಷ್ಣ ಹೇಳುತ್ತಾನೆ:

ನ ತು ಮಾಂ ಶಕ್ಯಸೇ ದ್ರಷ್ಟುಮ್
ಅನೇನೈವ ಸ್ವಚಕ್ಷುಷಾ।
ದಿವ್ಯಂ ದದಾಮಿ ತೇ ಚಕ್ಷುಃ
ಪಶ್ಯ ಮೇ ಯೋಗಮೈಶ್ವರಮ್॥

"ನೀನು ಈ ನಿನ್ನ (ವೈಚಾರಿಕ ಅಥವಾ ಮಾನವೀಯ) ಕಣ್ಣುಗಳಿಂದ ನನ್ನನ್ನು ನೋಡಲಾರೆ. ನಾನು ನಿನಗೆ ದಿವ್ಯ (ಭಾವುಕ) ಚಕ್ಷುಗಳನ್ನು ನೀಡುತ್ತೇನೆ. ನನ್ನ ಈಶ್ವರೀ ಯೋಗವನ್ನು ನೋಡು" ವಿವೇಚನಾ ಶಕ್ತಿಯನ್ನು ಕಳೆದುಕೊಂಡಿರುವ ಮತ್ತು ಮಾನಸಿಕ ವಿಭ್ರಾಂತಿ ಗೊಳಗಾಗಿರುವ ಅರ್ಜುನ ಭಯಾನಕ ಮತ್ತು ನಡುಕ ಹುಟ್ಟಿಸುವ ದೃಶ್ಯಗಳನ್ನು ನೋಡಿ ಅಚ್ಚರಿಗೊಳ್ಳುತ್ತಾನೆ:

ನಭಃಸ್ಪೃಶಂ ದೀಪ್ತಮನೇಕವರ್ಣಮ್
ವ್ಯಾತ್ತಾನನಂ ದೀಪ್ತವಿಶಾಲನೇತ್ರಮ್।
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾಂತರಾತ್ಮಾ
ಧೃತಿಂ ನ ವಿಂದಾಮಿ ಶಮಂ ಚ ವಿಷ್ಣೋ॥

ದಂಷ್ಟ್ರಾಕರಾಲಾನಿ ಚ ತೇ ಮುಖಾನಿ
ದೃಷ್ಟ್ವೈವ ಕಾಲಾನಲಸನ್ನಿಭಾನಿ।
ದಿಶೋ ನ ಜಾನೇ ನ ಲಭೇ ಚ ಶರ್ಮ
ಪ್ರಸೀದ ದೇವೇಶ ಜಗನ್ನಿವಾಸ॥

"ಆಕಾಶವನ್ನು ಮುಟ್ಟುತ್ತಿರುವ, ಜಗಜಗಿಸುವ ಅನೇಕ ಬಣ್ಣಗಳ, ತೆರೆದ ಬಾಯಿಯ, ದೊಡ್ಡ ದೊಡ್ಡ ತೇಜಸ್ವಿ ನೇತ್ರಗಳ ವಿಷ್ಣು ನಿನ್ನನ್ನು ನೋಡಿ ನನ್ನ ಅಂತಃಕರಣದಲ್ಲಿ ವ್ಯಾಕುಲವಾಗಿದೆ. ಧೈರ್ಯ ಶಾಂತಿ ತಳೆಯಲಾರೆ. ಪ್ರಳಯ ಕಾಲದ ಅಗ್ನಿಯಂತಿರುವ ವಿಕರಾಳ ದವಡೆಗಳ ನಿನ್ನ ಮುಖ ನೋಡಿ ನನಗೆ ದಿಕ್ಕು ತೋಚದಂತಾಗಿದೆ. ಶಾಂತಿಯೂ ಸಿಗದು. ದೇವ, ಪ್ರಸನ್ನನಾಗು."

ಈ ಭೀಕರ ದೃಶ್ಯಗಳಿಂದ ಭೀತನಾಗಿ ಮತ್ತು ಆಧ್ಯಾತ್ಮಿಕವಾಗಿ ಕೃಶನಾದವನಾಗಿ ಅರ್ಜುನನು ಶ್ರೀಕೃಷ್ಣನ ವೇಷದಲ್ಲಿರುವ ಪರಮಾತ್ಮನಿಗೆ ತನ್ನ ಪ್ರಣಾಮಗಳನ್ನು ಸಮರ್ಪಿಸುತ್ತಾನೆ: "ಮುಂದೆ, ಹಿಂದೆ ಎಲ್ಲಾ ಕಡೆಯಿಂದಲೂ ನಿನಗೆ ನಮಸ್ಕಾರ. ನಿನ್ನ ವೀರ್ಯ ಅನಂತ, ಶಕ್ತಿ ಅಪಾರ ಎಲ್ಲವನ್ನೂ ಧಾರಣೆ ಮಾಡಿ ನೀನೇ ಸರ್ವನಾಗಿದೀಯ."

ಪಿತಾಽಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮಪ್ರಭಾವ॥

"ಸ್ಥಾವರ ಜಂಗಮ ಜಗತ್ತುಗಳಿಗೆ ನೀನೇ ತಂದೆ. ನೀನು ಅವಕ್ಕೆ ಪೂಜ್ಯ ಶ್ರೇಷ್ಠ ಗುರು. ನಿನಗೆ ಸಮಾನರಾರೂ ಇಲ್ಲ, ನಿನಗಿಂತ ಹೆಚ್ಚಿನವರು ಹೇಗೆ ಸಾಧ್ಯ? ಮೂರು ಲೋಕಗಳಲ್ಲಿಯೂ ನಿನ್ನ ಸಾಮರ್ಥ್ಯಕ್ಕೆ ಸಾಟಿ ಇಲ್ಲ"

ಶ್ರೀಕೃಷ್ಣನು ಶಿಷ್ಯನ ಶರಣಾಗತಿಯನ್ನು ಕೂಡಲೇ ಅಂಗೀಕರಿಸುತ್ತಾನೆ ಮತ್ತು ವಿನೀತನಾದ ವಿಮರ್ಶಕನನ್ನು ತಕ್ಷಣ ಹಂಗಿನಲ್ಲಿಡುತ್ತಾನೆ:



"ನಿನ್ನಲ್ಲಿ ಪ್ರಸನ್ನನಾಗಿ ನನ್ನ ಶಕ್ತಿಯ ಮೂಲಕ ತೇಜೋಮಯವೂ, ವಿಶ್ವವ್ಯಾಪಿಯೂ ಅನಂತವೂ, ಪರಮವೂ ಆದಿಯೂ ಆದ ರೂಪವನ್ನು ತೋರಿದೆ. ನಿನ್ನನ್ನು ಬಿಟ್ಟು ಮತ್ತಾರೂ ಇದನ್ನು ಈ ಮೊದಲು ನೋಡಿಲ್ಲ, ವೇದಾಭ್ಯಾಸದಿಂದ, ಯಜ್ಞದಿಂದ, ಬೇರೆ ಶಾಸ್ತ್ರಗಳ ಅಭ್ಯಾಸದಿಂದ, ದಾನದಿಂದ ಕ್ರಿಯೆಗಳಿಂದ ಅಥವಾ ಉಗ್ರ ತಪಸ್ಸಿನಿಂದ-ನಿನ್ನನ್ನು ಬಿಟ್ಟು-ಯಾರೂ ಈ ನನ್ನ ರೂಪವನ್ನು ನೋಡಲು ಸಮರ್ಥರಾಗಿಲ್ಲ."

ಪಾಂಡವ ರಾಜಕುಮಾರನನ್ನು ವಶೀಕರಣಕ್ಕೊಳಪಡಿಸಿದ ಉದ್ದೇಶ ಅವನ ಯುದ್ಧ ವಿರೋಧಿ ಸಂಕಲ್ಪವನ್ನು ಛಿದ್ರಗೊಳಿಸಿ ಅವನು ಯುದ್ಧದಲ್ಲಿ ಪಾಲುಗೊಳ್ಳುವಂತೆ ಮಾಡುವುದಾಗಿತ್ತು, ಆದ್ದರಿಂದ ಶ್ರೀಕೃಷ್ಣನು ವಿಶ್ವರೂಪ ದರ್ಶನದತ್ತ ಅರ್ಜುನನ ಗಮನವನ್ನು ಉದ್ದೇಶಪೂರ್ವಕ ವಾಗಿಯೇ ಸೆಳೆಯುತ್ತಾನೆ:

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ
ಲೋಕಾನ್ ಸಮಾಹರ್ತುಮಿಹ ಪ್ರವೃತ್ತಃ।
ಋತೇಽಪಿ ತ್ವಾಂ ನ ಭವಿಷ್ಯಂತಿ ಸರ್ವೇ
ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ॥

ತಸ್ಮಾತ್ತ್ವ ಮುತ್ತಿಷ್ಠ ಯಶೋ ಲಭಸ್ವ
ಜಿತ್ವಾ ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಮ್।
ಮಯೈವೈತೇ ನಿಹತಾಃ ಪೂರ್ವಮೇವ
ನಿಮಿತ್ತಮಾತ್ರಂ ಭವ ಸವ್ಯಸಾಚಿನ್॥

ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ
ಕರ್ಣಂ ತಥಾನ್ಯಾನಪಿ ಯೋಧವೀರಾನ್।
ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾಃ
ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್॥

"ಲೋಕಗಳನ್ನು ನಾಶಮಾಡುವ ನಾನು ಬೆಳೆದಿರುವ ಕಾಲ. ಲೋಕಗಳನ್ನೆಲ್ಲಾ ನಾಶಗೊಳಿಸಲೆಂದೇ ಇಲ್ಲಿಗೆ ಬಂದಿದ್ದೇನೆ. ಈ ಸೇನೆಯಲ್ಲಿ ಯುದ್ಧಕ್ಕಾಗಿ ಬಂದಿರುವ ಈ ಯೋಧರೆಲ್ಲರೂ ನೀನು ಯುದ್ಧ ಮಾಡದೆನೆಂದರೂ ಬದುಕುವವರಲ್ಲ, ಆದುದರಿಂದ ಏಳು, ಕೀರ್ತಿ ಗಳಿಸು. ಶತ್ರುಗಳನ್ನು ಗೆದ್ದು ಧನ ಧಾನ್ಯ ಸಮೃದ್ಧವಾದ ರಾಜ್ಯವನ್ನು ಭೋಗಿಸು. ಇವರನ್ನೆಲ್ಲ ಸಂಹರಿಸಿದ್ದೇನೆ. ನೀನು ಕೇವಲ ನಿಮಿತ್ತರೂಪವಾಗು. ದ್ರೋಣ, ಭೀಷ್ಮ, ಜಯದ್ರಥ, ಕರ್ಣ-ಇತರ ಯೋಧರನ್ನು ನಾನು ಕೊಂದೇ ಇದ್ದೇನೆ. ಅವರನ್ನೇ ನೀನು ಕೊಲ್ಲು, ಹೆದರಬೇಡ, ಯುದ್ಧಮಾಡು, ಶತ್ರುಗಳನ್ನು ಗೆಲ್ಲುತ್ತೀ"

ವಿಶ್ವರೂಪ ದರ್ಶನವು ಅರ್ಜುನನನ್ನು ವಿನೀತಗೊಳಿಸಿತು. ಸಂವಾದದ ದಾಖಲೆದಾರ ಸಂಜಯ ಹೇಳುತ್ತಾನೆ: "ಕೇಶವನ ಈ ಮಾತನ್ನು ಕೇಳಿ ಮುಕುಟದಾರಿ ಅರ್ಜುನ ಗಡಗಡನೆ ನಡುಗುತ್ತಾ ಕೈಜೋಡಿಸಿ ಬಾರಿಬಾರಿಗೂ ನಮಸ್ಕರಿಸುತ್ತಾ, ಅಂಜುತ್ತಂಜುತ್ತ ಪ್ರಣಾಮ ಮಾಡಿ ಗದ್ಗದಿತ ಕಂಠನಾಗಿ ಹೀಗೆಂದ." ಇದು ಅರ್ಜುನನ ಜೀವನದಲ್ಲಿ ಒಂದು ತಿರುವುದಾಣವಾಯಿತು. ಅವನಲ್ಲಿದ್ದ ಸಂದೇಹವಾದಿ, ವಿಮರ್ಶಕ, ಪ್ರಶ್ನೆಕಾರ ಆತ್ಮ ಸತ್ತಿತು. ಅತಿ ಲೌಕಿಕತೆಗೆ ಹೀನನಾಗಿ ತಲೆಬಾಗಿ ಕೇಳುತ್ತಾನೆ: "ಸತತವೂ ನಿನ್ನ ಧ್ಯಾನ ಮಾಡುತ್ತಾ ನಿನ್ನ ಉಪಾಸನೆ ಮಾಡುವವರು, ನಿನ್ನ ಅವಿನಾಶಿ, ಅವ್ಯಕ್ತ ರೂಪದ ಧ್ಯಾನ ಮಾಡುವ ಭಕ್ತ-ಇವರಲ್ಲಿ ಯಾರು ಯೋಗಿಗಳು?"

ಶ್ರೀಕೃಷ್ಣನಿಗೆ ಇದಕ್ಕಿಂತ ಉತ್ತಮ ಅವಕಾಶ ಮತ್ತಾವಾಗ ದೊರಕೀತು. ಅದು ಅವನಿಗೆ ಈಶ್ವರವಾದ ಮತ್ತು ಮುಖ್ಯವಾಗಿ ವೇದಾಂತವನ್ನು ಉಪದೇಶ ನೀಡಲು ತಕ್ಕ ಕಾಲವಾಗಿತ್ತು, ಆದಾಗ್ಯೂ ಸಾಂಖ್ಯವು ಗುರು ಮತ್ತು ಶಿಷ್ಯ ಇಬ್ಬರನ್ನೂ ಬೆನ್ನಟ್ಟಿ ಕಾಡಿಸುತ್ತಿತ್ತು, ಅರ್ಜುನನು ಪ್ರಕೃತಿ ಮತ್ತು ಪುರುಷ ತತ್ವಗಳ ಮೇಲೆ ಬೆಳಕು ಚೆಲ್ಲಲು ಕೇಳಿದ. ಈ ಹಂತದಲ್ಲಿ ನವ ವೈದಿಕವಾದದ ಗುರುವಿಗೆ ಭೌತವಾದದ ಸಾಂಖ್ಯವನ್ನು ಭಾವನಾವಾದದ ವೇದಾಂತವನ್ನಾಗಿ ಮತ್ತು ದೈವ ವಾದವನ್ನಾಗಿ ಮುಂದಿಡುವುದು ಸುಲಭವಾಗಿತ್ತು, ಸಾಂಖ್ಯವನ್ನು ವಿವರಿಸುತ್ತಾ ಪ್ರತಿಯೊಂದು ಪದವೂ ಕಪಿಲ ತತ್ವಶಾಸ್ತ್ರವನ್ನು ಅತ್ಯಂತ ವಿರೂಪಗೊಳಿಸಿ ವೇದಾಂತವನ್ನು ಸ್ತುತಿಸಲು ಬಳಸಲಾಗಿದೆ. ಸಾಂಖ್ಯದಲ್ಲಿ ಪ್ರಕೃತಿಯು ವಿಶ್ವದ ಕಾರಣ ಮತ್ತು ಪುರುಷನು ಅನಾಸಕ್ತನಾದ ಕೇವಲ ನೋಡುಗ. ಆದರೆ ಶ್ರೀಕೃಷ್ಣನು ಪುರುಷನನ್ನು ಪ್ರಬಲನನ್ನಾಗಿ ಮಾಡಿ ಪ್ರಕೃತಿಯನ್ನು ಅದಕ್ಕೆ ಅಧೀನವನ್ನಾಗಿ ಮಾಡಿದ್ದಾನೆ: "ಸಕಲ ನಾಶವಂತ ಪ್ರಾಣಿಗಳಲ್ಲಿ ಅವಿನಾಶಿ ಪರಮೇಶ್ವರ ಸಮಭಾವದಿಂದಿದ್ದಾನೆಂದು ತಿಳಿದವನೇ ತಿಳಿದವನು." "ಸರ್ವಭೂತಗಳೂ ಬೇರೆಬೇರೆಯಾಗಿದ್ದರೂ ಒಂದರಲ್ಲಿಯೇ ಇರುವುದನ್ನು ನೋಡಿ, ಸಮಗ್ರ ವಿಸ್ತಾರವೆಲ್ಲಾ ಇದರಿಂದಲೇ ಹುಟ್ಟಿದೆ ಎಂದರಿತಾಗ ಅವನು ಬ್ರಹ್ಮವನ್ನೈದುತ್ತಾನೆ."

ಪ್ರಕೃತಿಯ ಮೂರು ಗುಣಗಳಾದ ಸತ್ವ, ರಜಸ್ ಮತ್ತು ತಮಸ್‌ಗಳನ್ನು ಸಹ ವೇದಾಂತದ ಸತ್ಯವನ್ನು ಪ್ರತಿಪಾದಿಸುವ ದೃಷ್ಟಿಯಿಂದ ಪ್ರತಿಪಾದಿಸಲಾಗಿದೆ: "ಗುಣಗಳಿಂದ ಅಲ್ಲಾಡದೆ ಉದಾಸೀನನಾದವನು, ಗುಣಗಳು ತಮ್ಮ ಕೆಲಸ ಮಾಡಿಕೊಳ್ಳುತ್ತವೆಂದು ಸ್ಥಿರವಾದವನು. ಅವನು ಈ ಮೂರು ಗುಣಗಳನ್ನು ದಾಟಿ ಬ್ರಹ್ಮರೂಪ ಪಡೆಯಲು ಯೋಗ್ಯನಾಗುತ್ತಾನೆ."

ಮಾನವ ಜನಾಂಗವನ್ನು ಎರಡು ಭಾಗವಾಗಿ ವಿಂಗಡಿಸಲು ವೇದಿಕೆ ಸಿದ್ಧವಾಯಿತು; ಒಂದು ದೈವೀ, ಇನ್ನೊಂದು ಅಸುರೀ ಸ್ವಭಾವವುಳ್ಳದ್ದು. ಪರಮಾತ್ಮನಲ್ಲಿ ನಂಬಿಕೆಯುಳ್ಳವರನ್ನೆಲ್ಲಾ ಮೊದಲ ವಿಭಾಗದಲ್ಲಿ, ಉಳಿದ ವಿಚಾರವಾದಿಗಳು, ನಿರೀಶ್ವರವಾದಿಗಳು, ಭೌತವಾದಿಗಳು ಮುಂತಾದವರನ್ನೆಲ್ಲಾ ಎರಡನೇ ವಿಭಾಗದಲ್ಲಿ ಸೇರಿಸಲಾಗಿದೆ. ಅರ್ಜುನನು ದೈವೀ ವಿಭಾಗದಲ್ಲಿ ಸೇರುತ್ತಾನೆ ಎಂಬುದರಲ್ಲಿ ಆಶ್ಚರ್ಯವೇನಿಲ್ಲ:

"ದೈವೀ ಸಂಪತ್ತು ಮೋಕ್ಷದಾಯಕ, ಅಸುರೀ ಸಂಪತ್ತು ಬಂಧನದಲ್ಲಿ ತೊಡಗಿಸುವಂತದು. ಪಾಂಡವ, ವಿಷಾದಿಸಬೇಡ, ನೀನು ದೈವೀ ಸಂಪದವನ್ನು ಪಡೆದು ಹುಟ್ಟಿದೀಯೇ"

ಶ್ರೀಕೃಷ್ಣನು ತನ್ನ ಅಂತಿಮ ಸಲಹೆಯನ್ನು ಅರ್ಜುನನಿಗೆ ನೀಡುವಾಗ ಮುಕ್ತಿ ಪಡೆಯಲು ಎಲ್ಲ-ಸಾಂಖ್ಯ, ಯೋಗ, ವೇದಾಂತ, ಜ್ಞಾನ, ಕರ್ಮ-ಪಂಥಗಳನ್ನು ಹಿಂದಕ್ಕೆ ಸರಿಸಿ ತನ್ನಲ್ಲಿ (ದೇವರ ಅವತಾರದಲ್ಲಿ) ಅಂಧಶ್ರದ್ಧೆಯನ್ನಿಡಬೇಕೆಂದು ಒತ್ತಿ ಹೇಳುತ್ತಾನೆ:

ಚೇತಸಾ ಸರ್ವಕರ್ಮಾಣಿ
ಮಯಿ ಸಂನ್ಯಸ್ಯ ಮತ್ಪರಃ।
ಬುದ್ಧಿಯೋಗಮುಪಾಶ್ರಿತ್ಯ
ಮಚ್ಚಿತ್ತಃ ಸತತಂ ಶ್ರೀ ಭವ॥

ಮಚ್ಚಿತ್ತಃ ಸರ್ವದುರ್ಗಾಣಿ
ಮತ್ಪ್ರಸಾದಾತ್ತರಿಷ್ಯಸಿ।
ಅಥ ಚೇತ್ತ್ವಮಹಂಕಾರಾತ್
ನ ಶ್ರೋಷ್ಯಸಿ ವಿನಂಕ್ಷ್ಯಸಿ॥

"ಮನಸ್ಸಿನಿಂದ ಸಕಲ ಕರ್ಮಗಳನ್ನು ನನಗೆ ಅರ್ಪಿಸಿ, ನನ್ನಲ್ಲಿ ಪರಾಯಣನಾಗಿ ವಿವೇಕ ಬುದ್ಧಿಯ ಆಶ್ರಯದಿಂದೆ ನಿರಂತರವೂ ನನ್ನಲ್ಲಿ ಚಿತ್ತವನ್ನಿಡು, ನನ್ನಲ್ಲಿ ಚಿತ್ತವಿಟ್ಟರೆ ಕಷ್ಟದ ಸಕಲ ದುರ್ಗಗಳನ್ನು ನನ್ನ ಕೃಪೆಯಿಂದ ದಾಟುತ್ತೀಯೆ. ಆದರೆ ಅಹಂಕಾರವಶನಾಗಿ ನೀನು ನನ್ನ ಮಾತನ್ನು ಕೇಳದಿದ್ದರೆ ನಾಶವಾಗುತ್ತೀಯೆ." (ಎರಡನೇ ಭಾಗ ಮುಂದಿನ ವಾರ)

ಯಾದಗಿರಿ ಜೀವಸಂಕುಲಕ್ಕೆ ಯುರೇನಿಯಂ ಉರುಳು!

ಮೊನ್ನೆತಾನೆ ಗದಗದಲ್ಲಿ ಕೈಗಾರಿಕೆಗಾಗಿ ಕೃಷಿ ಭೂಮಿ ವಶಪಡಿಸಿಕೊಳ್ಳಲು ಯತ್ನಿಸಿದ ಸರಕಾರ ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಂಡು ಹಿಂದೆ ಸರಿದಿದೆ. ಆದರೆ 'ಒತ್ತಿದರೆ ಸರಿಯಲ್ಲ ಸರಿದರೆ ಒತ್ತಲ್ಲ' ಜಾತಿಗೆ ಸೇರಿದ ಸರಕಾರವನ್ನು ಮುನ್ನಡೆಸುವ ಎಡಬಿಡಂಗಿ ರಾಜಕಾರಣಿಗಳಿಗೆ ನಾಚಿಕೆ ಎಂಬುದೇ ಇಲ್ಲ.

ಏಕೆಂದರೆ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಗೋಗಿ, ಹೊಸಪೇಟೆ, ಸೈದಾಪುರ, ದಿಗ್ಗಿ ಹಾಗೂ ಉಮರ ದೊಡ್ಡಿ ಗ್ರಾಮಗಳಲ್ಲಿ ಯುರೇನಿಯಂ ನಿಕ್ಷೇಪವನ್ನು ಬಗೆಯಲು ಸರಕಾರ ಭಾರತೀಯ ಯುರೇನಿಯಂ ನಿಗಮ(ಯುಸಿಐಎಲ್)ಕ್ಕೆ ಅನುಮತಿಯನ್ನು ನೀಡಿದೆ. ಅಣುಬಾಂಬ್ ಹಾಗೂ ಅಣು ವಿದ್ಯುತ್ ಉತ್ಪಾದನೆಗಳಿಗೆ ಬಳಕೆಯಾಗುವ ಯುರೇನಿಯಂ ದೇಶದ ಕೆಲವೇ ಭಾಗಗಳಲ್ಲಿ ದೊರೆಯುವ ಅಪರೂಪದ ಖನಿಜ ಸಂಪತ್ತು.



ಈ ಯುರೇನಿಯಂ ಖನಿಜವನ್ನು ತೆಗೆಯುವ ಕೆಲಸಕ್ಕಾಗಿ ರೈತರಿಂದ ಸದ್ಯ 40 ಎಕರೆ ಜಮೀನನ್ನು ಬಲವಂತವಾಗಿ ಕಿತ್ತುಕೊಳ್ಳಲು ಅಧಿಕಾರಿಗಳು ಹವಣಿಸುತ್ತಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಬರುವ ಈ ಗ್ರಾಮಗಳು ತೀರಾ ಇತ್ತೀಚೆಗೆ ನೀರಾವರಿ ಭೂಮಿಯಾಗಿ ಮಾರ್ಪಟ್ಟು ಗದ್ದೆಗಳಾಗಿದ್ದವು. ಭತ್ತ ಬೆಳೆದುಕೊಂಡು ರೈತರು ತಮ್ಮ ಹಿಂದಿನ ಕಷ್ಟಗಳನ್ನೆಲ್ಲ ನೀಗಿಕೊಂಡು ನಿರುಮ್ಮಳವಾಗಿದ್ದರು. ಆದರೆ ಒಮ್ಮೆಂದೊಮ್ಮೆ ಬಂದೆರಗಿದ ಈ ಯುರೇನಿಯಂ ಎಂಬ ಗುಮ್ಮ ಅವರ ನೆಮ್ಮದಿ ಕೆಡಿಸಿದೆ.


ಮತ್ತೊಂದು ಆಶ್ಚರ್ಯಕರ ಸಂಗತಿಯೆಂದರೆ ಯುಸಿಐಎಲ್ ಕಂಪನಿಗೆ ಯುರೇನಿಯಂ ಡಿಗ್ಗಿಂಗ್‌ಗೆ ಸರಕಾರ ಒಪ್ಪಿಗೆ ನೀಡಿದ್ದು 14 ಜುಲೈ 2011ರಂದು. ಆದರೆ ಗೋಗಿ ಗ್ರಾಮದಲ್ಲಿ 2007ರಿಂದಲೇ ಅನಧಿಕೃತವಾಗಿ ಕಂಪನಿ ಸಂಶೋಧನೆಯ ನೆಪದಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದೆ. ಈ ಯುಸಿಐಎಲ್ ಕಂಪನಿಯ ಸಂಪರ್ಕಾಧಿಕಾರಿ ಬಾಷೇನ್ ಎಷ್ಟು ಚಾಲಾಕಿ ಎಂದರೆ ತಮ್ಮ ಕಾರ್ಯ ಚಟುವಟಿಕೆಗೆ ಅಡ್ಡಿ ಬಾರದಿರಲೆಂದು ಸ್ಥಳೀಯ ಪುಢಾರಿಗಳೊಂದಿಗೆ ಸಖ್ಯ ಬೆಳೆಸಿಕೊಂಡಿದ್ದಾನೆ. ಇದರಿಂದಾಗಿ ಇಲ್ಲಿನ ಬಹುತೇಕ ರಾಜಕಾರಣಿಗಳು ಯುರೇನಿಯಂ ನಿಗಮದ ಅಧಿಕಾರಿಗಳ ಸುತ್ತ ಗಿರಕಿ ಹೊಡೆಯುತ್ತಿರುತ್ತಾರೆ.

ಐದುನೂರಾ ಐವತ್ತು ಕೋಟಿ ರೂಪಾಯಿ ಬಂಡವಾಳ ಹೂಡಿ, 1.50 ಲಕ್ಷ ಟನ್ ಯುರೇನಿಯಂ ಹೊರತೆಗೆಯಲಿರುವ ಯುಸಿಐಎಲ್ ಕಂಪನಿ ಸುಮಾರು 15 ವರ್ಷಗಳಿಗೂ ಹೆಚ್ಚು ಕಾಲ ಇಲ್ಲಿ ನೆಲೆ ನಿಲ್ಲಲಿದೆ ಎಂಬ ಒಂದು ಅಂದಾಜಿದೆ. ಆಘಾತಕಾರಿ ವಿಷಯವೆಂದರೆ ಸಂಶೋಧನೆಯ ನೆಪದಲ್ಲಿ ಕೇವಲ ನಾಲ್ಕಾರು ವರ್ಷಗಳ ಕಾಲ ಗೋಗಿ ಗ್ರಾಮದಲ್ಲಿ ಯುರೇನಿಯಂ ತೆಗೆದುದರಿಂದ ರೇಡಿಯೋ ಆಕ್ಟೀವ್ ರೇಡಾರ್ ಅನಿಲ(ವಿಕಿರಣಪೂರಿತ ಅನಿಲ)ದಿಂದ ಈಗಾಗಲೇ ನೂರಾರು ಜನ ರೋಗಗ್ರಸ್ತರಾಗಿದ್ದಾರೆ. ಬೋರ್‌ವೆಲ್ ಹಾಗೂ ಬಾವಿಯ ನೀರನ್ನಂತೂ ಯಾರೂ ಕುಡಿಯಲು ಯೋಗ್ಯವಲ್ಲ ಎನ್ನುವಂತೆ ಇವೆ. ಮನುಷ್ಯರೇಕೆ, ದನಗಳೂ ಕೂಡ ಇಲ್ಲಿನ ನೀರನ್ನು ಕುಡಿಯುವುದಿರಲಿ ಮೂಸಿಯೂ ಕೂಡ ನೋಡಲಾರವು. ಬೋರವೆಲ್‌ನಿಂದ ಒಂದು ಕೊಡ ನೀರು ಹೊರಬಂದರೆ ಅದರ ತುಂಬೆಲ್ಲ ಹಲವಾರು ಖನಿಜಯುಕ್ತ ಲವಣಾಂಶಗಳೇ ತುಂಬಿರುತ್ತವೆ.

ಇಂಥ ಕಲುಷಿತ ನೀರನ್ನು ಕುಡಿದ ಇಲ್ಲಿನ ಜನ ಈಗಾಗಲೇ ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದಿದ್ದಾರೆ. ಶ್ವಾಸಕೋಶ ಕ್ಯಾನ್ಸರ್ ಎಂಬ ಮಾರಕ ರೋಗಕ್ಕೆ ತುತ್ತಾಗಿದ್ದಾರೆ. ಇಲ್ಲಿ ಉಂಟಾಗುವ ಸ್ಫೋಟಕ ಶಕ್ತಿಯ ಪರಿಣಾಮವೋ ಅಥವಾ ಅದು ಹೊರಸೂಸುವ ವಿಷಪೂರಿತ ಅನಿಲದಿಂದಲೋ ಇಲ್ಲಿನ ಬಹುತೇಕ ಜನ ನರದೌರ್ಬಲ್ಯಗಳಿಗೆ ತುತ್ತಾಗಿದ್ದಾರೆ.

ದೇಶದ ಯಾವುದೇ ರಾಜ್ಯದಲ್ಲಿ ಯುರೇನಿಯಂ ಖನಿಜ ಹೊರತೆಗೆಯಬೇಕಾದರೆ ಕನಿಷ್ಠ ಪಕ್ಷ ಅದು ರೇಡಿಯಾಲಾಜಿಸ್ಟ್, ಸಮಾಜ ಶಾಸ್ತ್ರಜ್ಞ, ಕೆಮಿಸ್ಟ್ರಿ ತಜ್ಞರು, ವೈದ್ಯಕೀಯ ವಿಜ್ಞಾನಿಗಳು ಹಾಗೂ ಪರಿಸರವಾದಿಗಳಿಂದ ಕ್ಲೀನ್‌ಚಿಟ್ ಪಡೆಯಬೇಕು ಎಂದಿದೆ. ಆದರೆ ಇದ್ಯಾವುದನ್ನೂ ಕಿವಿಯ ಮೇಲೆ ಹಾಕಿಕೊಳ್ಳದ ಕಂಪನಿ ಹಾಗೂ ಸರಕಾರಗಳು ಜಾಣಕಿವುಡರಂತೆ ವರ್ತಿಸುತ್ತಿರುವುದು ದುರಂತವೇ ಸರಿ. ಮತ್ತೊಂದು ಗಮನೀಯ ಸಂಗತಿಯೆಂದರೆ ಕರ್ನಾಟಕ ಸರಕಾರವೇ ನೇಮಿಸಿದ್ದ ಸಮಿತಿಯೊಂದು (ಅಣು ಸಂಶೋಧನಾ ವಿಜ್ಞಾನಿ ಡಾ. ಮುದಬಾವಿ ಮತ್ತು ಖ್ಯಾತ ಕ್ಯಾನ್ಸರ್ ತಜ್ಞ ಡಾ. ಶೇಖರ ಪಾಟೀಲ) ದಿ. 16-11-2010 ರಂದು ಗೋಗಿ ಗ್ರಾಮಕ್ಕೆ ಭೇಟಿ ನೀಡಿದ್ದರು. ಅವರು ಕರ್ನಾಟಕ ಸರಕಾರಕ್ಕೆ ವರದಿ ಸಲ್ಲಿಸುವುದಕ್ಕಿಂತ ಮೊದಲೇ ಯುರೇನಿಯಂ ಗಣಿಗಾರಿಕೆಗೆ ಅನುಮತಿ ನೀಡಿದ್ದು ಎಲ್ಲರನ್ನು ಹುಬ್ಬೇರಿಸುವಂತೆ ಮಾಡಿದೆ.

ನಮ್ಮ ದೇಶದ ಜಾರ್ಖಂಡ್ ರಾಜ್ಯದ ಜಾಧವಗಡ ಎಂಬ ಪ್ರದೇಶದಲ್ಲಿ ಈಗಾಗಲೇ ಯುರೇನಿಯಂ ಡಿಗ್ಗಿಂಗ್ ನಡೆದಿದೆ. ಅಲ್ಲಿ ಯುರೇನಿಯಂ ಖನಿಜ ಲವಣಕ್ಕಾಗಿ ನಡೆಸುವ ಚಟುವಟಿಕೆಗಳಿಂದ ಹೊರಹೊಮ್ಮುವ ವಿಷಪೂರಿತ ಅನಿಲಕ್ಕೆ ತುತ್ತಾಗಿ ಬಹಳಷ್ಟು ಜನ ಪ್ರಾಣಾಂತಿಕ ರೋಗದಿಂದ ನರಳುತ್ತಿದ್ದಾರೆ. ಈ ಬಗ್ಗೆ ತಲಸ್ಪರ್ಶಿ ಅಧ್ಯಯನ ನಡೆಸಿದ ವಿಜ್ಞಾನಿ ಡಾ. ನೀತೀಶ್ ಪ್ಯಾರಡೈಸ್ ಪ್ರಿಯದರ್ಶಿ 'ಮುಂಬರುವ ವರ್ಷಗಳಲ್ಲಿ ಈ ಭಾಗದಲ್ಲಿ ಯಾವುದೇ ಬೆಳೆ ಬೆಳೆಯಲು ಸಾಧ್ಯವಿಲ್ಲ' ಎಂಬ ಸತ್ಯವನ್ನು ಜಾಹೀರುಪಡಿಸಿದ್ದಾರೆ. 'ವಿಕಿರಣ ತ್ಯಾಜ್ಯ ವಸ್ತುಗಳು ಮಣ್ಣಿನಲ್ಲಿ, ನೀರಿನಲ್ಲಿ ಸೇರಿ ಮಾನವ ಜೀವಿಗಳು ಹಾಗೂ ಪ್ರಾಣಿಗಳು ಆರೋಗ್ಯ ಸಂಬಂಧಿತ ಸಮಸ್ಯೆಗಳಿಂದ ನರಳುತ್ತಿವೆ' ಎಂದು ಖಚಿತಪಡಿಸಿದ್ದಾರೆ. ಭಾರತೀಯ ವೈದ್ಯರು 'ಐ.ಡಿ.ಪಿ.ಡಿ' ಸುಮಾರು 1,956 ಮನೆಗಳನ್ನು ಸಮೀಕ್ಷೆಗೆ ಗುರಿಪಡಿಸಿದರು.



ಅವರು ತಮ್ಮ ವರದಿಯಲ್ಲಿ 'ಶೇಕಡಾ 9.5 ಜನ ... ವಿಕಿರಣ ಬಾಧೆಗಳಿಗೆ ತುತ್ತಾಗಿ ನರಳುತ್ತಿದ್ದಾರೆ' ಎಂ... ಸಾಕ್ಷೀಕರಿಸಿದ್ದಾರೆ.

ಮತ್ತೊಂದು ಎದೆನಡುಗಿಸುವ ಅಂಶವೆಂದರೆ, ... ಮಹಿಳೆಯರು ಮದುವೆಯಾಗಿ ಮೂರ... ವರ್ಷಗಳವರೆಗೂ ಗರ್ಭ ಧರಿಸದೆ ಇರುವ... ಸಾಮಾನ್ಯವಂತೆ. ಹುಟ್ಟುವ ಮಕ್ಕಳು ... ಮಾಂದ್ಯರೂ, ಅಂಗವಿಕಲರೂ ಆಗಿದ್ದಾರೆ... ಟೆಲಿಗ್ರಾಫ್ ಪತ್ರಿಕೆ ವರದಿ ಮಾಡಿದೆ. ಜ... ಇವತ್ತಿಗೂ ಇಲ್ಲಿನ ಜನಗಳಿಗೆ ಪುನವ... ಕಲ್ಪಿಸಿಲ್ಲ, ಯುರೇನಿಯಂ ಗಣಿಗಾರಿಕೆ... ಕೆಲಸ ಮಾಡುವ ಜನರ ಆರೋಗ್ಯವ... ತೀರಾ ಶೋಚನೀಯ ಅನ್ನುವಂತೆ ಇ...

ಯುರೇನಿಯಂ ಘಟಕದಿಂದ ಇನ್ನೊ... ರಾಜ್ಯದ ಪರಿಸ್ಥಿತಿ ಇಷ್ಟೊಂದು ಭೀಕರ... ದ್ದರೂ ಇಲ್ಲಿನ ಶಾಸಕ ಶರಣಬಸ... ದರ್ಶನಾಪುರ ಮಾತ್ರ ನಿರುಮ್ಮಳ... ಕುಳಿತುಕೊಂಡಿದ್ದಾನೆ. "ನೀರು ಸರಿ ಇಲ್ಲದಿ... ಬಾಟಲಿ ನೀರನ್ನು ಕುಡಿಯಿರಿ. ಇದು ಬ... ಗಳ ಸರಕಾರ. ಇದನ್ನು ಮಾಡಿದ... ಬಿಜೆಪಿಯವರು. ನಾವೇನು ಮಾಡಲಿಕ್ಕಾಗ... ಅವರನ್ನೇ ಕೇಳಿ" ಎಂದು ಬೇಕಾಬಿಟ್ಟಿ ಸ... ನೀಡುತ್ತಿದ್ದಾನೆ. ನೆಲವನ್ನು ಕೊರೆದು ಒ... ಟನ್ ಅದಿರು ಹೊರತೆಗೆದರೆ ಕೇವಲ ಎ... ಅಥವಾ ಮೂರು ಕೆ.ಜಿ. ಮಾತ್ರ ಯುರೇನಿ... ದೊರಕುತ್ತದಂತೆ. ತ್ಯಾಜ್ಯ ವಸ್ತುವಿನ ನಿ... ಹಣೆಯ ಬಗೆಗೆ ಸದರಿ ಶಾಸಕರು, ಜನಪ್ರತಿ...ಗಳೇ ತಲೆ ಕೆಡಿಸಿಕೊಂಡಿಲ್ಲವೆಂದರೆ ಯುಸಿಎಲ್‌ನ ಅಧಿ...ಗಳು ಕೆಡಿಸಿಕೊಳ್ಳಲು ಸಾಧ್ಯವೆ?

ಯುಸಿಎಲ್ ಕಂಪನಿ ಈಗಾಗಲೇ ಜಾರ್ಖಂಡ್ ರಾ... ಜಾಧವಗಡದಲ್ಲಿ ಎರ್ರಾಬಿರ್ರಿಯಾಗಿ ನಡೆಕೊಂಡಿ... ಸ್ಪಷ್ಟವಾಗಿದೆ. (ಈ ಬಗ್ಗೆ ಪತ್ರಿಕೆ ಸಂಗ್ರಹಿಸಿರುವ ಚಿತ್ರಗ... ಗಮನಿಸಿರಿ) ಒಂದು ವೇಳೆ ಇಂಥ ತ್ಯಾಜ್ಯ ನೀರು ಇ... ಸಮೀಪವಿರುವ ಭೀಮಾ ಹಾಗೂ ಕೃಷ್ಣಾ ನದಿಯ... ಸೇರಿಬಿಟ್ಟರೆ ಪ್ರಾಣಿ-ಪಶು-ಕ್ರಿಮಿ-ಕೀಟ ಮನ... ಮೊದಲ್ಗೊಂಡು ಎಲ್ಲವೂ ಸರ್ವನಾಶದ ಹ... ಹಿಡಿಯುತ್ತವೆ. ಇಂಥ ಯುರೇನಿ... ಗಣಿಗಾರಿಕೆಗೆ ಅನುಮತಿ ನೀಡಿದ ಸರಕಾ... ಜನಪ್ರತಿನಿಧಿಗಳಿಗೆ ನಿಜಕ್ಕೂ ಯ... ಕಾಳಜಿಯಿದೆಯೆಂಬುದನ್ನು ತೋರಿಸುತ್ತ...

ದೇಶದ ಯಾವುದೇ ಯೋಜನೆ ಇದ್ದ... ಅದು ಮನುಕುಲಕ್ಕೆ ಸಹಕಾರಿಯಾಗುವ, ಅ... ಅಭಿವೃದ್ಧಿಗೆ ಪೂರಕವಾಗುವ ಅಂಶಗಳ... ಕೂಡಿದ್ದಾಗಿರಬೇಕು. ಈ ಬಗ್ಗೆ ರಾಜ್ಯ ಹಾ... ಕೇಂದ್ರ ಸರಕಾರಗಳು ಅತ್ಯಂತ ಜವಾಬ... ಯಿಂದ ವರ್ತಿಸಬೇಕು. ಇದ್ಯಾವುದರ ಪರಿ... ಇಲ್ಲದ ಸರ್ಕಾರಗಳು ಜನರ ಜೀವ ಹಿಂಡ... ಹಾತೊರೆಯುತ್ತಿವೆ. ಇದರ ವಿರುದ್ಧ ಸರಿಯಾದೊ... ಹೋರಾಟ ನಡೆಸದಿದ್ದರೆ ಯಾದಗಿರಿಯಲ್ಲೊಂ... ಜಾರ್ಖಂಡ್ ಅವತರಿಸುವುದು ಖಂಡಿತ.



ಜಾರ್ಖಂಡನಲ್ಲಿ ಯುರೇನಿಯಂ ತ್ಯಾಜ್ಯ ವಸ್ತು ಹೊರ ಹೋಗುವ ವಿಷಾನಿಲ ಪೈಪುಗಳಿಂದ ಲೀಕ್



ಜಾಧವಗಡದಲ್ಲಿ ಯುರೇನಿಯಂ ಅದಿರು ಕೊಳವೆ ಬಾವಿಯ ಮೂಲಕ ಹೊಳೆಗೆ




ಗುಡಿಸಲಿಗೂ ಹರಿದು ಬರುವ ವಿಷಯುಕ್ತ ತ್ಯಾಜ್ಯವಸ್ತು.

• ವಿಶ್ವಾರಾಧ್ಯ ಸತ್ಯಂಪೇ...

ಹಿರೇಶಿಗರ ತೈಲ ಕಳವು ಸಿಓಡಿ ತೆಕ್ಕೆಗೆ ಕಳ್ಳ ಪೊಲೀಸರಿಗೆ ಜೈಲು ಗ್ಯಾರೆಂಟಿ!

ಇತ್ತೀಚಿನ ದಿನಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು ಬೆಚ್ಚಿಬೀಳಿಸಿದ ದಂಧೆಯೆಂದರೆ ತೈಲ ಮಾಫಿಯಾ. ಆದಾಗಿ ಇವತ್ತಿಗೆ ಐದು ತಿಂಗಳು ಕಳೆದಿದೆ. ಚಿಕ್ಕಮಗಳೂರು ಸಿಪಿಐ ಸಿದ್ದಯ್ಯ, ಮೂಡಿಗೆರೆ ಸಿಪಿಐ ಜೆ.ಟಿ.ಸ್ವಾಮಿ, ಗೋಣಿಬೀಡು ಪಿಎಸ್‌ಐ ಸುನೀಲ್ ಕುಮಾರ್, ಹಾಸನ ಜಿಲ್ಲೆ ಬೇಲೂರು ಠಾಣೆಯ ಪಿಎಸ್‌ಐ ಸತ್ಯನಾರಾಯಣ, ದಫೇದಾರ್ ಪ್ರಭಾಕರ್ ಮುಂತಾದ ಖದೀಮರನೇಕರು ಖಾಕಿ ಕಳಚಬೇಕಾಗಿದ್ದಾರೆ. ಪ್ರಮುಖ ಆರೋಪಿ ಬೇಲೂರು ಮೂಲದ ಕರಿಗೊಡಲು ಯೋಗೀಶ್ ಅಲಿಯಾಸ್ ರಾಜುಶೆಟ್ಟಿ ಸರಿಯಾಗಿ ತಗುಲಿಕೊಂಡಿದ್ದಾನೆ. ಆದರೆ ಹತ್ತು ಆರೋಪಿಗಳ ದಿಕ್ಕುದೆಸೆ ಪೊಲೀಸರಿಗೆ ಈ ಕ್ಷಣಕ್ಕೂ ಸಿಕ್ಕಿಲ್ಲ.



... ಕುಮಾರ್,

ಮಂಗಳೂರು ಬಳಿಯ ತೋಕೂರು ಎಂಬಲ್ಲಿಂದ ಬೆಂಗಳೂರಿನ ನೆಲಮಂಗಲಕ್ಕಿರುವ ಅನಿಲ ಮತ್ತು ತೈಲ ಸಾಗಾಟದ ಕೊಳವೆಮಾರ್ಗಕ್ಕೆ ಕನ್ನ ಕೊರೆದ ಅತ್ಯಂತ ಅಪಾಯಕಾರಿ ಪ್ರಕರಣವದು. ಮಂಗಳೂರು ಬಂದರು ಬಳಿ ಕಚೇರಿ ಹೊಂದಿರುವ ಎಂಆರ್‌ಪಿಎಲ್ ಕಂಪನಿ ಅಧಿಕಾರಿಗಳಿಗೆ ತೈಲ ಮಾರ್ಗದಲ್ಲಿ ನಡೆಯುತ್ತಿದ್ದ ದಂಧೆಗಳ ಅರಿವಾಗಿತ್ತು, ಆದರೆ ಅನಾಮತ್ತು ಮುನ್ನೂರೈವತ್ತು ಕಿಲೋಮೀಟರ್ ದೂರವಿರುವ ಮಾರ್ಗದ ಯಾವ ಕಡೆ ಸೋರಿಕೆಯಾಗುತ್ತಿದೆ ಎಂಬುದು ಮಾತ್ರ ತಿಳಿದಿರಲಿಲ್ಲ, ಮಾರ್ಗದುದ್ದಕ್ಕೂ ಹುಡುಕುತ್ತಾ ಬಂದಿದ್ದ ಇಂಜಿನಿಯರ್‌ನೊಬ್ಬನಿಗೆ ಮೂಡಿಗೆರೆ ತಾಲ್ಲೂಕಿನ ಹಿರೇಶಿಗರದಲ್ಲಿ ನಡೆಯುತ್ತಿದ್ದ ಕಳ್ಳತನ ಅರಿವಿಗೆ ಬಂದಿತ್ತು.

ಭಯಾನಕ ಸಂಗತಿಗಳು

ಆ ಇಂಜಿನಿಯರ್ ಹತ್ತಿರದ ಗೋಣಿಬೀಡು ಪೊಲೀಸರಿಗೆ ಕಂಪ್ಲೆಂಟ್ ಬರೆದು ಕೊಟ್ಟಿದ್ದ. ಅಲ್ಲಿದ್ದ ಕಡುಭ್ರಷ್ಟ ಪಿಎಸ್‌ಐ ಸುನೀಲ್ ಕುಮಾರ್ ಕಂಪ್ಲೆಂಟನ್ನು ಕಸದಬುಟ್ಟಿಗೆಸೆದು ತೆಪ್ಪಗಾಗಿದ್ದ. ಅಲ್ಲಿಂದ ಹೊರಬಂದವನು ಎಸ್‌ಪಿ ವಿಕಾಸ್ ಕುಮಾರ್ ಮತ್ತು ಪಶ್ಚಿಮ ವಲಯ ಐಜಿಪಿ ಅಲೋಕ್ ಮೋಹನ್‌ಗೆ ದೂರು ನೀಡಿದ್ದ. ಹೀಗಾಗಿ ಪ್ರಕರಣದ ಕಡತ ಡಿವೈಎಸ್‌ಪಿ ವೇದಮೂರ್ತಿಯ ಟೇಬಲ್ ಮೇಲೆ ಬಿದ್ದಿತ್ತು, ವೇದಮೂರ್ತಿ ತನಿಖೆ ಆರಂಭಿಸುತ್ತಿದ್ದಂತೆ ಭಯಾನಕ ಸಂಗತಿಗಳು ಬಯಲಾಗತೊಡಗಿದ್ದವು.

ಹಿರೇಶಿಗರದ ವಿಜಯಕುಮಾರ್ ಎಂಬಾತನ ಜಮೀನಿನ ಮಧ್ಯೆ ವಾಲ್‌ಫಿಕ್ಸ್ ಮಾಡಿದ್ದನ್ನು ಗಮನಿಸಿದ ವೇದಮೂರ್ತಿ ಆತನನ್ನು ಹಿಡಿದು ಹೆಡೆಮುರಿ ಕಟ್ಟಿದ್ದರು. ಅಂದು ಬಾಸುಂಡೆ ಏಳತೊಡಗಿದಂತೆ ಎಲ್ಲವನ್ನು ಬಾಯ್ಬಿಟ್ಟಿದ್ದ ವಿಜಯ ಕುಮಾರ್. ಆದಾದಬಳಿಕ ಕುಖ್ಯಾತ ತೈಲಕಳ್ಳ ರಾಜುಶೆಟ್ಟಿಯ ಮಾಸ್ಟರ್ ಮೈಂಡ್ ಇದಾಗಿರುವುದು ಅರಿವಾಗಿತ್ತು, ವೇದಮೂರ್ತಿ ಬೆನ್ನು ಬಿದ್ದು ರಾಜುಶೆಟ್ಟಿಯ ಮೊಬೈಲ್ ರೆಕಾರ್ಡರ್ ತೆಗೆದುನೋಡಿ... ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಪೊಲೀಸರ ಕರೆಗಳು ಹನುಮಂತನ ಬಾಲದಂತೆ ಪೋಣಿಸಿಕೊಂಡಿತ್ತು, ಅಲ್ಲಿಗೆ ಪ್ರಕರಣ ಹೊಸ ತಿರುವು ಪಡೆದುಕೊಂಡಿತ್ತು, ಆ ವೇಳೆಗೆ ವೇದಮೂರ್ತಿಯ ಕೆಂಗಣ್ಣು ತಿರುಗಿದ್ದು ಪೊಲೀಸರ ಕಡೆಗೆ. ಎಳೆಎಳೆಯಾಗಿ ಎಲ್ಲವನ್ನೂ ಬಿಡಿಸಿಟ್ಟು ಎಸ್ಪಿ ವಿಕಾಸ್ ಕುಮಾರ್ ಟೇಬಲ್‌ಗೆ ವರದಿ ಕಳಿಸಿದ್ದರು.



... ಸಿಪಿಐ ಜೆ.ಟಿ.ಸ್ವಾಮಿ

ಜೆ.ಟಿ.ಸ್ವಾಮಿ 26ನೇ ಆರೋಪಿ

ಒಂದೆಡೆ ಇದೆಲ್ಲಾ ದಾಖಲೆಗಳಲ್ಲಿ ನಡೆಯುತ್ತಿದ್ದರೆ ರಾಜುಶೆಟ್ಟಿ ಮೂಡಿಗೆರೆ ಸಿಪಿಐ ಜೆ.ಟಿ.ಸ್ವಾಮಿಯನ್ನು ಸಂಪರ್ಕಿಸಿದ್ದ. ಹೇಗಾದರೂ ಸರಿ, ಪ್ರಕರಣದಿಂದ ತನ್ನ... ಹೊರಗಿಡುವಂತೆ ನೋಡಿಕೊ ಅಂದಿದ್ದ. ಅದಕ್ಕಾಗಿ ಒಂದು ಲಕ್ಷ ಹಣವ... ಸ್ವಾಮಿಗೆ ತಲುಪಿಸಿದ್ದ ಕೊಟ್ಟವ ಕೋಡುಂಗಿ ಇಸ್ಪುಂಡುವ ಈರಭದ್ರ ಎಂಬಂತಾ... ನೋಡಿ. ಪ್ರಕರಣದಲ್ಲಿ ಆರೋಪಿಯಾಗಿ ಬಂಧನ ಭೀತಿಯಲ್ಲಿದ್ದ ಸಿ... ಜೆ.ಟಿ.ಸ್ವಾಮಿ ಒಂದು ಲಕ್ಷ ಹಣವನ್ನು ಮುಲಾಜಿಲ್ಲದೆ ಪಡೆದು ಭರ... ಕೊಟ್ಟಿದ್ದ. ಆ ಹೊತ್ತಿಗೆ ಗೋಣಿಬೀಡು ಪಿಎಸ್‌ಐ ಸುನೀಲ್ ಕುಮಾರನ... ಎಸ್ಪಿ ವಿಕಾಸ್ ಕುಮಾರ್ ಸಸ್ಪೆಂಡ್ ಮಾಡಿದ್ದರು.


ಆರಂಭದಲ್ಲಿ ಹದಿನಾಲ್ಕು ಮಂದಿ ಆರೋಪಿಗಳ ವಿರುದ್ಧ ಪ್ರಕ... ದಾಖಲಿಸಲಾಗಿತ್ತು, ಒಬ್ಬೊಬ್ಬರೇ ಸಿಕ್ಕಿದಂತೆ ಆರೋಪಿಗಳ ಪಟ್ಟಿ ಉದ... ಬೆಳೆಯತೊಡಗಿತ್ತು, ಹಾಗೆ ಒಟ್ಟು ಇಪ್ಪತ್ತೊಂಬತ್ತು ಮಂದಿಯ ವಿರುದ್ಧ ಪ್ರ...

ಈ ಕಾರ್ಯಕಾರಿಣಿ ಸಭೆಯಲ್ಲಿ ಯಡಿಯೂರಪ್ಪನನ್ನು ಅಕ್ಷರಶಃ ಕಂಗಾಲಾಗಿಸಿದ್ದು ಅನಂತ್‌ಕುಮಾರ್ ಮತ್ತು ಆತನ ಪಟಾಲಂನ ಮುನಿಸು.

ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಯಡ್ಡಿ ವಿರೋಧಿ ಬಣದ ಮುಖ್ಯಸ್ಥ ಅನಂತ್ ಸೇರಿದಂತೆ ಒಟ್ಟು 73 ಮಂದಿ ಈ ಕಾರ್ಯಕಾರಿಣಿ ಸಭೆಯಿಂದ ದೂರಉಳಿದಿದ್ದರು. ಹುಬ್ಬಳ್ಳಿ ಹೇಳಿ ಕೇಳಿ ಅನಂತನ ತವರು ನೆಲ. ಇಂಥಲ್ಲಿ ನಡೆದ ಕಾರ್ಯಕಾರಿಣಿಗೆ ಗೈರುಹಾಜರಾದ ಆತ ಯಡ್ಡಿ ಬುಡಕ್ಕೆ ಬಲವಾಗಿ ಬಿಸಿ ಮುಟ್ಟಿಸಿದ್ದಾನೆ.

ಆದರೆ ಗೈರುಹಾಜರಾದವರ ಬಗ್ಗೆಯಾಗಲಿ, ಅನಂತಕುಮಾರನ ಬಗ್ಗೆಯಾಗಲಿ ಯಡ್ಡಿ ಒಂದು ಮಾತನ್ನೂ ಪ್ರಸ್ತಾಪಿಸದೆ ಅಲಕ್ಷ್ಯ ತೋರಿದಂತೆ ನಟಿಸಿದರು. ಇದು ಚುನಾವಣಾ ಸಂದರ್ಭದಲ್ಲಿ ಬಲವಾಗಿ ಪರಿಣಾಮ ಬೀರುತ್ತದೆಂಬ ವಿಚಾರ ಯಡ್ಡಿಗೆ ಸ್ಪಷ್ಟವಾಗಿ ಗೊತ್ತಿದೆ. ಅನಂತನ ಮುನಿಸು ತನ್ನ ಬುಡ ಅಲ್ಲಾಡಿಸುವ ವಿಚಾರವೂ ತಿಳಿದಿದೆ.

ಇಂಥಾ ಒಳಕಚ್ಚಾಟಗಳ ನಡುವೆ ಬಿಜೆಪಿ ಹೆಚ್ಚು ಸೀಟು ಗೆಲುವುದಿರಲಿ, ಈಗಿರುವುದನ್ನು ಉಳಿಸಿಕೊಳ್ಳುವುದೂ ಕಷ್ಟವಿದೆ.



ಕಳಿಸಿದ್ದಾರೆ!

ಯಡ್ಡಿಯೂರಪ್ಪ ವಿರೋಧ ಪಕ್ಷಗಳನ್ನಿರಲಿ, ತನ್ನದೇ ಪಕ್ಷದವರನ್ನು ಸಂಭಾಳಿಸಲೂ ಹೆಣಗಾಡಹತ್ತಿದ್ದಾರೆ. ಕೇಶವಕೃಪಾದ ಕರುಣೆಯೂ ಬಂದ್ ಆಗಿದೆ. ಲಾಗಾಯ್ತಿನಿಂದ ವಿಪರೀತ ಉಪಯೋಗಿಸುತ್ತಿದ್ದ ಲಿಂಗಾಯತ ಜಾತಿ ಟ್ರಂಪ್‌ಕಾರ್ಡ್ ಕೂಡಾ ಸವಕಲಾಗಿದೆ. ಆದರೆ ಯಡ್ಡಿಗೆ ಅದನ್ನು ಉಪಯೋಗಿಸುವ ಉತ್ಸಾಹ ಮಾತ್ರ ಇಂಗಿದಂತಿಲ್ಲ. ಅದಕ್ಕಾಗಿ ಲಿಂಗಾಯತ ಸಮುದಾಯವನ್ನು ಓಲೈಸಿಕೊಳ್ಳಲು ಥರಥರದ ಗಿಮಿಕ್ಕುಗಳಿಗೆ ಮೊರೆ ಹೋಗುತ್ತಿದ್ದಾರೆ.

ಸದರಿ ಕಾರ್ಯಕಾರಿಣಿ ಸಭೆಯ ಭೂಮಿಕೆಯಲ್ಲೇ ಯಡ್ಡಿಯ ಒಡೆದಾಳುವ ನೀತಿಯೊಂದು ಬಹಿರಂಗವಾಗಿದೆ. ಯಡ್ಡಿ ಆರಂಭದಿಂದಲೂ ಈ ಭಾಗದಲ್ಲಿ ಲಿಂಗಾಯತ ಸಮುದಾಯದ ನಾಯಕನೆಂದು ಗುರುತಿಸಿಕೊಂಡಿರುವ ಜಗದೀಶ್ ಶೆಟ್ಟರನ ನಿರ್ನಾಮಕ್ಕೆ ಪ್ರಯತ್ನಿಸುತ್ತಿದ್ದಾರೆ. ಅದಕ್ಕೀಗ ಜಗದೀಶನ ತಮ್ಮ ಪ್ರದೀಪ ಶೆಟ್ಟರನನ್ನೇ ಉಪಯೋಗಿಸಿಕೊಂಡಿರುವುದು ಲೇಟೆಸ್ಟ್ ವಿಚಾರ. ಯಡ್ಡಿ ತನ್ನ ನಾಲಾಯಕ್ ಪುತ್ರ ಕಂ ಸಂಸದ ರಾಘವೇಂದ್ರನ ಮೂಲಕ ಪ್ರದೀಪ ಶೆಟ್ಟರ್‌ನನ್ನು ಓಲೈಸಿಕೊಳ್ಳುವಲ್ಲಿ ಯಶಸ್ಸು ಕಂಡಿದ್ದಾರೆ. ಆತನಿಗೆ ಅಣ್ಣ ಜಗದೀಶ್ ಶೆಟ್ಟರ್‌ನ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರಕ್ಕೆ ಪಕ್ಷದಿಂದ ಟಿಕೆಟ್ ಕೊಡಿಸುವ ಆಮಿಷ ಒಡ್ಡಲಾಗಿದೆ. ಈ ಆಸೆಗೆ ಬಿದ್ದ ಪ್ರದೀಪ ಶೆಟ್ಟರ್ ಇಡೀ ಕಾರ್ಯಕಾರಿಣಿ ಸಭೆಯ ಜವಾಬ್ದಾರಿ ಹೊತ್ತು ನಿರ್ವಹಿಸಿದ್ದಾನೆ. ಈ ತಂತ್ರ ಅರಿತು



ಹುಬ್ಬಳ್ಳಿ ಬಿಜೆಪಿ ಕಾರ್ಯಕಾರಿಣಿಯಲ್ಲಿ ಭಯದ ಕಥಕ್ಕಳಿ

ಹುಬ್ಬಳ್ಳಿಯಲ್ಲಿ ಎರಡು ದಿನಗಳ ಕಾಲ ಬಿಜೆಪಿ ...ಕ್ಷದ ಕಾರ್ಯಕಾರಿಣಿ ಸಭೆ ಜರುಗಿದೆ. ಸಾಮಾನ್ಯವಾಗಿ ...ವುದೇ ಪಕ್ಷದ ಕಾರ್ಯಕಾರಿಣಿ ಸಭೆ ಶಾಸಕರು, ಸಚಿವರು ...ಗೂ ಮುಖಂಡರಲ್ಲಿ ಗೆಲುವಿನ ಹುರುಪು ...ಬುವಂತಿರುತ್ತವೆ. ಆದರೆ ಬಿಜೆಪಿ ಸಭೆಯಲ್ಲಿ ಸೋಲಿನ ...ಯು ಸಾರ್ವತ್ರಿಕವಾಗಿ ಹಬೆಯಾಡಿದೆ. ಖುದ್ದು ಕಳ್ಳನ ...ನದಲ್ಲಿ ನಿಂತಿರುವ ಯಡಿಯೂರಪ್ಪ ಮುಂದಿನ ...ನಾವಣೆಯಲ್ಲಿ ನೂರೈವತ್ತು ಎಮ್ಮೆಲ್ಲೆ ಸೀಟು ಗೆಲ್ಲುವಂತೆ ...ಕ್ಕೆ ಕರೆ ಕೊಟ್ಟಿದ್ದಾರೆ. ಇದರ ಹಿಂದೆಯೂ ಸೋಲಿನ ...ತಿಯೇ ಎದ್ದು ಕಾಣಿಸಿದೆ.

ಮಾಗುತ್ತದೆ. ಈ ಎಲ್ಲ ಒಳಬೇಗುದಿಗಳೂ ಹುಬ್ಬಳ್ಳಿಯಲ್ಲಿ ನಡೆದ ಕಾರ್ಯಕಾರಿಣಿಯಲ್ಲಿ ಅನಾಯಾಸವಾಗಿ ಹೊರಬಿದ್ದಿವೆ.

ಭೀಕರ ಭೂದಾಹದಿಂದಾಗಿ ಕರ್ನಾಟಕದ ಹಲವೆಡೆಗಳಲ್ಲಿ ನೆಲೆ ಕಳೆದುಕೊಂಡಿರುವ ಯಡ್ಡಿ ಹಿಡಿತದ ಬಿಜೆಪಿ ಉತ್ತರ ಕರ್ನಾಟಕವನ್ನೇ ನೆಚ್ಚಿಕೊಂಡಿರುವುದು ಬಹಿರಂಗ ಸತ್ಯ. ಇದು ಲಿಂಗಾಯತ ಸಮುದಾಯವನ್ನೇ ಗುರಿಯಾಗಿಸಿಕೊಂಡ ಅಸಹ್ಯದ ರಾಜಕೀಯ.

ಇಷ್ಟೆಲ್ಲ ಬೇಗುದಿಗಳ ನಡುವೆಯೂ ಯಡ್ಡಿ ಕುರ್ಚಿ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಅಕಸ್ಮಾತ್

ಕೊಳ್ಳುವುದು ಹಾಗೂ ಅದರಲ್ಲಿ ಸ್ಥಾಪನೆಯಾದ ಉದ್ದಿಮೆಗಳಿಂದ ತಿರುಪೆ ಎತ್ತುವುದು ಮೇಲ್ಕಂಡ ತಂಡದ ಹುನ್ನಾರ. ಇದರ ಮೇಲೊಂದು ಕಣ್ಣಿಡುವ ಜವಾಬ್ದಾರಿಯನ್ನು ರಾಘವೇಂದ್ರನಿಗೆ ವಹಿಸಲಾಗಿದೆ. ಬಹಿರಂಗವಾಗಿ ಇನ್ನು ಮುಂದೆ ರೈತರ ಜಮೀನು ಕಿತ್ತುಕೊಳ್ಳುವುದಿಲ್ಲ ಅನ್ನುವ ಯಡ್ಡಿ ಎಂಥಾ ನಯವಂಚಕನೆಂಬುದಕ್ಕೆ ಇದು ಸ್ಪಷ್ಟ ಉದಾಹರಣೆ.

ಭೂ ಕಬಳಿಕೆಯ ವಿಚಾರದಲ್ಲಿ ಆಸುಪಾಸಿನವರನ್ನೇ ಯಾಮಾರಿಸುತ್ತಿರುವ ಯಡ್ಡಿ 'ವಿರೋಧ ಪಕ್ಷಗಳು ಆಡಳಿತ ನಡೆಸಲು ಬಿಡುತ್ತಿಲ್ಲ, ಅಭಿವೃದ್ಧಿ ಕೆಲಸಗಳನ್ನು ಹೇಗೆ



...ಮಾನಮರ್ಯಾದೆ ಹೋದರೂ ಕುರ್ಚಿ ಬಿಡ...ದರೆಂದು ಪಣತೊಟ್ಟಿರುವ ಯಡ್ಡಿ ತಲೆಯಲ್ಲಿ ವಿಧಾನಸಭೆ ...ರ್ಜಿಸುವ ಯೋಜನೆ ಅದ್ಯಾವಾಗಿನಿಂದಲೋ ಗಿರಕಿ ...ಡೆಯುತ್ತಿದೆ. ಆದರೆ ಭೂಹಗರಣ, ಸ್ವಜನಪಕ್ಷಪಾತಗಳೆಲ್ಲಾ ...ಯೋಪಾದಿಯಲ್ಲಿ ಹೊರಬಿದ್ದು ಯಡ್ಡಿಯ ವರ್ಚಸ್ಸು ...ದಿನೇ ಪಾತಾಳ ಸೇರುತ್ತಿದೆ. ಸದ್ಯ ಯಡ್ಡಿ ತನ್ನದೇ ...ನೆಟ್ಟಿನಲ್ಲಿ ಒಗ್ಗಟ್ಟು ಕಾಯ್ದುಕೊಳ್ಳಲಾಗದೆ ಕಂಗಾಲಾಗಿ... ಈಗಿರುವ ಪರಿಸ್ಥಿತಿಯಲ್ಲಿ ವಿಧಾನಸಭೆ ವಿಸರ್ಜಿಸಿ ...ನಾವಣೆ ಘೋಷಿಸಿದರೆ ಗಟಾರವೆಂಬುದು ಕಾಯ

ವಿಧಾನಸಭೆ ವಿಸರ್ಜನೆಯಾದರೂ ಬಹುಮತ ಜಯಿಸಿಕೊಳ್ಳಲೋಸ್ಕರ ಫಂಡ್ ಕಲೆಹಾಕುವ ಕೆಲಸಕ್ಕೂ ಚಾಲನೆ ನೀಡಿದ್ದಾರೆ. ಈ ಕಾರ್ಯಕಾರಿಣಿ ಸಭೆಯಲ್ಲೇ ಅದಕ್ಕೊಂದು ಅಂತಿಮ ಸ್ಪರ್ಶ ನೀಡಲಾಗಿದೆ. ಬಸವರಾಜ ಬೊಮ್ಮಾಯಿ, ಮುರುಗೇಶ ನಿರಾಣಿ, ಸಿ.ಎಂ. ಉದಾಸಿ, ವಿ. ಸೋಮಣ್ಣ, ಸಿ.ಸಿ. ಪಾಟೀಲರಿಗೆ ಆ ಜವಾಬ್ದಾರಿ ವಹಿಸಲಾಗಿದೆ. ಕೈಗಾರಿಕೆ, ಎಸ್‌ಇಝೆಡ್ ಹಾಗೂ ನಿವೇಶನಗಳ ಹೆಸರಲ್ಲಿ ಫಲವತ್ತಾದ ಭೂಮಿ ವಶಪಡಿಸಿ

ಮಾಡಲಿ' ಅಂತೆಲ್ಲ ದೈನೇಸಿಯಂತೆ ಅಲವತ್ತುಕೊಂಡಿದ್ದಾರೆ. ಹೆಚ್ಚಿನ ಎಂಎಲ್‌ಎ ಸೀಟು ಗೆಲ್ಲುವುದಕ್ಕೆ ತಂತಮ್ಮ ಕ್ಷೇತ್ರಕ್ಕೆ ಏನೇನು ಬೇಕೋ ಅದನ್ನೆಲ್ಲ ಕೊಡಲು ಸಿದ್ಧ ಅಂತೆಲ್ಲ ವೀರಾವೇಶ ಪ್ರಕಟಿಸಿದ್ದಾರೆ. ಆದರೆ ಬಹುತೇಕ ಸದಸ್ಯರು ಇತ್ತೀಚೆಗೆ ಮುಖ್ಯಮಂತ್ರಿ ಹಾಗೂ ಕೆಲ ಸಚಿವರ ಮೇಲೆ ಬಂದಿರುವ ವಿವಿಧ ಆರೋಪಗಳ ಬಗ್ಗೆ ಮುಕ್ತ ಚರ್ಚೆ ನಡೆಸುವ ಉದ್ದೇಶದಿಂದ ಬಂದಿದ್ದರು. ಅವರನ್ನೆಲ್ಲ ಯಾಮಾರಿಸಿದ ಯಡ್ಡಿ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡು ಗಡದ್ದು ಊಟ ಹಾಕಿಸಿ ತಲೆ ಸವರಿ

ಎಚ್ಚೆತ್ತುಕೊಂಡರಷ್ಟೇ ಜಗದೀಶ್ ಶೆಟ್ಟರ್ ಬಚಾವಾಗಬಹುದಷ್ಟೆ.

ಇಷ್ಟೆಲ್ಲಾ ತಂತ್ರಗಾರಿಕೆ ನಡೆಸುತ್ತಿದ್ದರೂ ಯಡ್ಡಿ ಮುಖದಲ್ಲಿ ಭಯದ ಛಾಯೆ ಮಾತ್ರ ಕರಗುತ್ತಿಲ್ಲ. ಇತರೆ ಮುಖಂಡರಲ್ಲೂ ಗೆದ್ದೇ ತೀರುವ ಉಮೇದು ಉಳಿದಿಲ್ಲ. ಇದೆಲ್ಲ ಯಡ್ಡಿ ದಿನೇದಿನೇ ಸೋಲಿಗೆ ಹತ್ತಿರಾಗುತ್ತಿರುವ ಸೂಚನೆಯಲ್ಲದೆ ಬೇರೇನೂ ಅಲ್ಲ.

• ಹುಬ್ಬಳ್ಳಿಯಾಂವ

...ಹಿತಿ ವರದಿ ಸಿದ್ಧವಾಯಿತು. ಅದರಲ್ಲಿ ಮೂಡಿಗೆರೆ ಸಿಪಿಐ ...ಸ್ವಾಮಿ 26ನೇ ಆರೋಪಿ ಸ್ಥಾನದಲ್ಲಿ ಕಾಯಂ ಸ್ಥಾನ ...ಪಡೆದದ್ದು ವಿಶೇಷ. ಇದಕ್ಕೂ ಮುನ್ನಾ ಚಿಕ್ಕಮಗಳೂರು ಸಿಪಿಐ ...ಯ್ಯ ಮತ್ತು ಜಿ.ಟಿ.ಸ್ವಾಮಿ ಅಮಾನತ್ತುಗೊಂಡಿದ್ದರು. ಇದು ...ಲೀಸ್ ಇಲಾಖೆಯ ದೌರ್ಬಲ್ಯದ ಸಂಕೇತವಾಗಿದೆ. ಬೇಲಿಯೇ ...ದ್ದು ಹೊಲ ಮೇಯ್ದಂತೆ ಖಾಕಿ ಖದೀಮರು ಮಾಫಿಯಾ ...ದ ಕೊಂಡಿಯಾಗಿದ್ದುಕೊಂಡು ಹೈರಾಣಾಗಿದ್ದಾರೆ.

ರಾಜುಶೆಟ್ಟಿ ವೃತ್ತಿ ನಿರತ ತೈಲ ಮಾಫಿಯಾ ದಂಧೆಕೋರ...ನಾಗಿದ್ದಾನೆ. ಅದು ಪೊಲೀಸ್ ಇಲಾಖೆಗೆ ಮಾತ್ರವಲ್ಲ, ಇಡೀ ...ಗೆ ಗೊತ್ತಿರುವ ನಗ್ನಸತ್ಯ. ಹಾಸನ ಜಿಲ್ಲೆಯಲ್ಲಿ ಬಿಎಸ್‌ಪಿ, ...ಗ್ರೆಸ್, ಜೆಡಿಎಸ್, ಜಿಲ್ಲಾ ಶೆಟ್ಟಿ ಸಂಘ ಎಂದೆಲ್ಲ ಓಡಾಡಿ ... ಬದಲಿಸಿದವನು ರಾಜುಶೆಟ್ಟಿ. ಮಾಜಿ ಸಚಿವ ಎಚ್.ಡಿ. ...ಣ್ಣನೊಂದಿಗೆ ಹತ್ತಿರದ ಸಖ್ಯ ಹೊಂದಿದ್ದಾನೆ. ಆದರೆ ...ಶೆಟ್ಟಿ ಚಿಕ್ಕಮಗಳೂರು ಜೈಲಿನ ಸರಳುಗಳ ಹಿಂದೆ ಇರುವ ...ಯು ಆಸ್ಪತ್ರೆಯಲ್ಲಿ ಮಂಚದ ಮೇಲೆ ಮಲಗಿದ್ದಾನೆ. ಆತನಿಗೆ ...ಸ ಕದ ಬಡಿದಕೂಡಲೇ ಎದೆನೋವು ಪ್ರಾರಂಭವಾಗಿದೆ!

ಪೊಲೀಸ್ ಘಟಿಂಗರು

...ಪ್ರಮುಖ ಆರೋಪಿ ರಾಜುಶೆಟ್ಟಿಯನ್ನು ವಿಚಾರಣೆಗೊಳ...ಪಡಿಸದೇ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಈ ಪರಮ ...ಖದೀಮರು ಅಂದಿಗೆ ಇಕ್ಕಿದ್ದರೆ ಬಹುಶಃ ಇನ್ನುಳಿದ ಹಿರಿ, ...ರಿ ಖಾಕಿಗಳು ಸೇರಿದಂತೆ ರಾಜಕಾರಣಿಗಳ ಜನ್ಮ ಜಾತಕಗಳು ...ಯಾಗುತ್ತಿತ್ತು. ಅದೇರೀತಿ ಪಾಂಡು ಎಂಬಾತನನ್ನು ...ಮಗಳೂರಿನ ಪ್ರವಾಸಿ ಮಂದಿರದಲ್ಲಿ ಚೀಫ್ ಗೆಸ್ಟ್‌ನಂತೆ



ಸಿದ್ದಯ್ಯ



ಡಿವೈಎಸ್‌ಪಿ ವೇದಮೂರ್ತಿ


ರಾಜಮರ್ಯಾದೆ ನೀಡಿ ವಿಚಾರಣೆಗೊಳಪಡಿಸದೇ ಜೈಲಿಗಟ್ಟಿದಂತೆ ನಾಟಕ ಮಾಡಲಾಗಿದೆ.

ಎಂಆರ್‌ಪಿಎಲ್ ಮಾರ್ಗದಲ್ಲಿ ಕಳೆದ ಎಂಟು ವರ್ಷಗಳಿಂದ ಅನಾಮತ್ತು ಹದಿನೆಂಟು ಕಡೆ ತೂತು ಕೊರೆಯಲಾಗಿದೆ. ಚಾರ್ಮಾಡಿ ಘಟ್ಟ ಪ್ರದೇಶದ ನೆರಿಯಾ, ಹುಂಜಾಲಕಟ್ಟೆ, ಮೂಡಿಗೆರೆಯ ಗೌಡಹಳ್ಳಿ, ಸಕಲೇಶಪುರದ ಹುರುಡಿ, ಬೇಲೂರು ಬಳಿಯ ಮಲಸಾವರ, ಹಿರೇಶಿಗರ- ಹೀಗೆ ಅಲ್ಲಲ್ಲಿ ಕನ್ನಕೊರೆದು ತೈಲ ಕಳವು ಮಾಡಲಾಗಿದೆ. ಆದರೆ ಎಂಆರ್‌ಪಿಎಲ್ ಅಧಿಕಾರಿಗಳು ಮಾತ್ರ ಈ ಕುರಿತು ತೀವ್ರ ಅಸಡ್ಡೆ ತೋರಿದ್ದಾರೆ.

ಅಷ್ಟಕ್ಕೂ ಕಂಪೆನಿ ಅತ್ಯಾಧುನಿಕ ಸಲಕರಣೆಗಳನ್ನು ಹೊಂದಿವೆ. ಕೊಂಚ ಯಾಮಾರಿದರೆ ಎಡವಟ್ಟು ಸಂಭವಿಸಿ ಅನಾಹುತವಾಗುವ ಭೀತಿ ಇರುವುದರಿಂದ ಅತ್ಯಂತ ಎಚ್ಚರಿಕೆ ವಹಿಸಬೇಕಾಗಿದೆ. ಅಲ್ಲಲ್ಲಿ ಕಾವಲುಗಾರರನ್ನು ನೇಮಿಸಿದೆ. ಕಾವಲು ಕೇಂದ್ರಗಳನ್ನು, ಕೆಲವು ಮೀಟರುಗಳಿಗೆ ಲಾಕ್ ವ್ಯವಸ್ಥೆ, ಸೋರಿಕೆಯಾದರೆ ತಕ್ಷಣ ತಿಳಿಯುವ ಸಾಧನ ಗಳನ್ನು ಹೊಂದಿದೆ. ಆದರೂ ಒಂದರಹಿಂದೊಂದರಂತೆ ಕಳ್ಳತನ ಗಳು ನಡೆಯುತ್ತಿವೆ ಎಂದರೆ ಹೇಗೆ ಸಾಧ್ಯ ಹೇಳಿ. ಅದಕ್ಕಾಗಿ ಎಂಆರ್‌ಪಿಎಲ್ ಕಂಪೆನಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲೆ ಅನುಮಾನದ ಹುತ್ತ ಭುಗಿಲೇಳತೊಡಗಿದೆ. ಹಿರೇಶಿಗರ ಪ್ರಕರಣದಲ್ಲಿ ಎಂಆರ್‌ಪಿಎಲ್ ಇಂಜಿನಿಯರ್ ಪ್ರಕಾಶ್ ಎಂಬಾತ ಐದನೇ ಆರೋಪಿ. ಹೀಗೆ ಇನ್ನೆಷ್ಟು ಅಧಿಕಾರಿಗಳು ಇದ್ದಾರೆಂಬುದನ್ನು ಪತ್ತೆ ಹಚ್ಚಬೇಕಾಗಿದೆ.

ಕೊನೆಗೂ ತನಿಖೆ ಸಿಓಡಿ ಕೈಗೆ

ಹಿರೇಶಿಗರದ ವಿಜಯಕುಮಾರ್‌ನ ತೋಟದಲ್ಲಿ ಈ ಪ್ರಕರಣ ಪತ್ತೆಯಾದ ಬಳಿಕ ಮತ್ತೊಂದು ಕಡೆ ತೈಲ ಕಳವು ನಡೆಸಿದ್ದ ಪ್ರಕರಣ ಪತ್ತೆಯಾಗಿ ಅನೇಕ ತೆರನಾದ ಊಹಾಪೋಹಗಳಿಗೆ ಕಾರಣವಾಗಿದೆ. ಆದರೆ ಅದು ಇದಕ್ಕೂ ಮುನ್ನ ನಡೆದಿರುವ ಸಾಧ್ಯತೆಯಿದೆ. ಏಕೆಂದರೆ ವಿಜಯಕುಮಾರ್ ಸೇರಿದಂತೆ ಬಹುತೇಕ ಆರೋಪಿಗಳು ಈ ಸಮಯದಲ್ಲಿ ಜೈಲಿನಲ್ಲಿದ್ದರು. ಅಲ್ಲದೇ ಪತ್ತೆಯಾದ ಸ್ಥಳದಲ್ಲಿ ತೈಲ ಸೋರಿಕೆಯಾಗುತ್ತಿದ್ದು ತೆಗೆದಿರುವ ಗುಂಡಿಗಳ ಜೊತೆಗೆ ಸಿಮೆಂಟ್ ಕಾಂಕ್ರೀಟ್ ಬಳಸಿ ಮುಚ್ಚಲಾಗಿದೆ. ಅಂದರೆ ಎರಡನೆ ಸ್ಥಳ ಗೊತ್ತುಪಡಿಸುವುದಕ್ಕೂ ಮುನ್ನ ಈ ಸ್ಥಳದಲ್ಲಿ ತೈಲ ಕಳವು ನಡೆಸಿರುವುದು ಖಚಿತವಾಗುತ್ತದೆ. ಅಂದ ಮೇಲೆ ರಾಜುಶೆಟ್ಟಿಯ ಹೆಗಲ ಮೇಲೆ ಮತ್ತೊಂದು ಪ್ರಕರಣ ಬೀಳುವುದು ನಿಸ್ಸಂಶಯ.



ಆರೋಪಿ ರಾಜುಶೆಟ್ಟಿ

ಹೀಗೆ ದಿನದಿಂದ ದಿನಕ್ಕೆ ತಿರುವು ಪಡೆದುಕೊಳ್ಳುತ್ತಿರುವ ಈ ಪ್ರಕರಣವನ್ನು ಸಿಓಡಿಗೆ ವಹಿಸಲಾಗಿದೆ. ಅದರ ಅಧಿಕಾರಿಗಳು ಈಗಾಗಲೇ ಹಿರೇಶಿಗರ ಸೇರಿದಂತೆ ಇಡೀ ಜಿಲ್ಲೆಯನ್ನು ಒಂದು ಸುತ್ತು ಗಿರಕಿ ಹೊಡೆದು ಬಂದಿದ್ದಾರೆ. ಪ್ರಕರಣದಲ್ಲಿನ ನೈಜ ಸಂಗತಿಗಳನ್ನು ಪತ್ತೆ ಹಚ್ಚಿದರೆ ಖಾಕಿ ಖದೀಮರನೇಕರು ಜೈಲು ಸೇರುವುದು ಗ್ಯಾರೆಂಟಿ. ಆದರೆ ಆರಂಭದಿಂದಲೂ ಈ ವಂಥ ರಾಜಕೀಯ ಭೂಮಿಕೆಯಲ್ಲಿ ನಡೆಯುತ್ತಿದೆ. ಸಿಓಡಿ ಅಧಿಕಾರಿಗಳು ಅದನ್ನು ಮೀರಿ ತನಿಖೆ ನಡೆಸಿಯಾರೇ?

• ಅಜೀಜ್ ಕಿರುಗುಂದ

ಈಗ್‌ಪಾಕಿದ ಆ ನಾಯಿ, ನಾಯಿಯಲ್ವೇ, ಊಳಿಡುತ್ತ ಬೊಗಳುತ್ತೆ
ಅದು ಅದ್ರ ಹಕ್ಕು; ಅವರಿಬ್ರ ಎಂಜಲನ್ನೇ ತಿನ್ನುತ್ತೆ;
ಅನ್ಯಾಯ ರೂಢಿಯಾಗಿಬಿಟ್ಟಿದೆ; ಅದರ ಮನಸ್ಸು ಕೊರಡಾಗಿಬಿಟ್ಟಿದೆ;
ಸರಹದ್ ಕಿತ್ತು ತಪ್ಪಿಸ್ಕೊಳ್ಳೋಕೇನಾದ್ರೂ ನೋಡ್ದ್ರೋ, ಕೊಂದ್ ಹಾಕಿ ಬಿಡ್ತಾರೆ ಅದ್ನ.

ಬೀದಿಬೀದೀಲೂ ಡಂಗುರ ಸಾರಿ ಕೂಗ್ತಿದಾರೆ, 'ಸಂಪೂರ್ಣ ಸ್ವಾತಂತ್ರ್ಯ'.
ಅದ್ಕೆ ತಮ್ಮಾ, ಮುಂಚೆ ಆಗ್ಲ ಆ ಹುಡುಗನ್ನ ಕೇಳ್ದೀನ್ ನಾನು,
'ಪ್ರಜಾಪ್ರಭುತ್ವ ಅಂದ್ರೇನು?
ಅದ್ನ ತಿಂದ್ ಹೊಟ್ಟೆ ತುಂಬ್ತಾ?' ಅಂತ.

ಚಿಂದಿ ಸೀರೆ ಉಟ್ಟ ಮುದುಕಿನ ಕೇಳ್ದೆ
ಮೊಲೆ ಹಾಲ್ನಾಗ್ ಏನ್ ಸತ್ವ ಇದೆ ಗೊತ್ತಾ ಅಂತ.
ಕತ್ತೆ ಥರ ದುಡಿಯೋ ಆ ಮನುಷ್ಯನ್ನ ಕೇಳ್ದೆ
'ಪೂರ್ಣಾನಂದ ಅಂದ್ರೇನು? ಅಹಂನಾಶ ಎಂದರೆ ಹೆಂಗನಿಸುತ್ತೆ?' ಅಂತ.

ಬರೀ ಒಗಟು ಮಾತು ಹೇಳ್ತಾರೆ,
'ಹುಸ್ತು, ಅದ್ನ ಕೋಲಿನ ಕೆಂಪು ಪಲ್ಲಕ್ಕಿ,
ತಲೆ ಬೋಳಿಸಿದ ಮುಂಡೇನ ಹೊತ್ಕಂಡು ಹೋಗ್ತಾರೆ,
ಏನಿರಬಹುದು?'

ಕೇಳಿದ್ರೆ ಸಾಕು ಮೈ ಉರಿದೋಗುತ್ತೆ ನಂಗೆ;
ಕಲ್ತಿದೆಯೋರು, ಎಮ್ಮೆ ಚರ್ಮದೋರು,
ಒಳಗೆ ಹುಲ್ಲು ತುಂಬ್ಕೊಂಡು ಬೆರ್ಚಪ್ಪನಂಗೆ ನಿಂತೋರು ಇದಾರಲ್ಲ
ಅಂಥವ್ರ ಮನಸು ಮಾತ್ರ ವಿಶಾ..ಲವಾಗಿ, ಪ್ರಶಾಂ..ತವಾಗಿ ಉಳೀಬೌದು.

ಎಂಥಾ ಭಯಂಕರ ದರೋಡೆ ಕಾಲ ಇದು?!
ಹವಾಮಾನ, ಮಳೆಬೆಳೆ ಹ್ಯಂಗಿದೆ ಅಂತ್ಲೂ ಮಾತಾಡಕ್ಕಾಗ್ತಾ ಇಲ್ಲ;
ಹಸಿವಿನ ಕತ್ಲಲ್ಲಿ, ಖಾಲಿ ಹೊಟ್ಟೇಲಿ
ಕರುಳ್ನಾಗೆಲ್ಲ ಹೆಬ್ಬಾವು ಸರಿದಂಗಾಗ್ತಾಯಿದೆ.

ಘೋರಂತ ಅತ್ತುಬಿಡಾಣ ಅಂದ್ರೆ ಅದ್ಕೂ ಕಷ್ಟ.
ಸ್ವಾತಂತ್ರ್ಯ ಸಮಾನತೆ ಸೋದರತ್ವ ಅಂತೆ. ಏನ್ಲಾ ಹಂಗಂದ್ರೆ?
ಯಾವಂದೂ ಮರದಕಟ್ಟೆ; ಎಲ್ಲರ್ಗೂ ಅಲ್ಲೇ ನ್ಯಾಯ.
ತಿನ್ರಿ, ಕುಡಿರಿ, ಖುಷಿಯಾಗಿರ್ರಿ; ಈ ನರಕದಲ್ಲಿ ಒದ್ದಾಡ್ರಿ..

ಆಹ! ಏನದಭುತ ಈ ಕತ್ಲ ಯುಗ.
ಚಾದಂಗಡೀಲಿ ಸಿಗ್ತೀವಿ, ಕಪ್ಪಿಗೆ ಕಪ್ಪು ಬಿಸಿಗೆ ಬಿಸಿ ತಾಗುಸ್ತೀವಿ
ರೈಲಿನ್ ಟೈಂ ನೋಡ್ಕಂಡ್ ಕೆಲ್ಸಕ್ಕೆ ಹೊಂಟುಬಿಡ್ತೀವಿ.
ಈ ಲೋಕದ ಬಣ್ಣಬಣ್ಣದ ಜಾತ್ರೆ ನೆರೆಯುತ್ತೆ;
ದುಡದು ಸೋತುಸುಣ್ಣ ಆಗಿ ಸಂಜೆ ಒಟ್ಟಾಗ್ತೀವಿ,
ಕ್ಷಯ ಹಿಡ್ದ ಕೊಳಲಲ್ಲಿ ನಮ್ಮುಸಿರು ತುಂಬಿ ಬಾರಿಸ್ತೀವಿ.

ಬಡತನಕ್ಕೋ ಇಬ್ರು ಮಕ್ಳು? ಒಂದ್ ಬೆಳಿಯ, ಒಂದ್ ಕರಿಯ.
ಅವು ಜೇಕಿ ಮೂಕಿ ಆಟನ ನಮ್ ಕೈತೋಟ್ದಾಗೇ ಆಡ್ತಾ ಇದಾವೆ.
ನಂ ಮನಸ್ನ ತುಂಬ ಬಂಡೆ ಕಲ್ಲಲ್ಲಿ ಕೆತ್ತಿದ ಗೋರಿಗಳೇ ತುಂಬಿರುವಾಗ
ಪ್ರಜಾಪ್ರಭುತ್ವದ ಹಾಡ್ನ ಗಂಟ್ಲಲ್ಲಿ ತುರುಕ್ತಿದಾರೆ.

ಹೈಬ್ರಿಡ್ ಬೀಜ, ಹೈಬ್ರಿಡ್ ಬೀಜ ಅಂತಾರಲ್ಲ, ಅವನ್ಯಾವ ತಲೆಹಿಡುಕ ಲೇ
ಅವ್ನ ಹೈಬ್ರಿಡ್ ಬೀಜ ತಂದಾಂವ?
ಅವು ನಂ ಮೈಯಾಗೆ ಮಾಂಸ ಆಗಲ್ಲ, ರಕ್ತದಾಗೆ ಬೆರೆಯಲ್ಲ, ಹೂ
ಬಿಡಲ್ಲ, ಹಣ್ಣು ಜಗ್ಗಲ್ಲ.
ಉಸ್ಸಪ್ಪ ಅಂತ ಕೂತ್ರೆ ಅದರ ಗಿಡ ನೆರಳು ಕೊಡಲ್ಲ.
ಹೊಲಿದಿಟ್ಟ ಅಂಗಿ ಹಂಗೆ ಹಾಕ್ಕಣಕ್ಕೂ ಬರಲ್ಲ; ಕಡಿದ ಗಾಯಕೆ ಒರ್ಸುದ್ರೆ ಮಾಯ್ಸದೂ ಇಲ್ಲ.

ನಾವು ಮನೆ ಮಠ ಕಳ್ಕತಿದಿವಿ; ಅನಾಥರಾಗ್ತಿದೀವಿ;
ಊರುಮನೆ ಬಿಟ್ಟು ಗೋರಿ ತಾವ್ಕೆ ಹೋಗ್ತಿದೀವಿ;
ಗೋರಿ ಬಗದು ಹಿಂದಿನ ನಲವತ್ತೆರ್ಡು ತಲೆಗಳ್ ಎಲುಬು ಹೊರಕ್ಕೆಳೀತಿದಿವಿ;
ನಾಕಾಣೆಗ್ ಒಂದ್ ಕೇಜಿ ಹಂಗೆ ಎಲುಬು ಮಾರಿ ನಮ್ಮೆಲುಬು
ತುಂಬುಸ್ಕತಿದಿವಿ.

ಬಂಗಾರದ್ ನಾಣ್ಯ ಮಾರೋ ಈ ದೇಶದ ಬಜಾರ್ನಾಗೆ ಮೂಳೆನೂ ಮಾರಾಟ ಆಗ್ತಾವೆ;
ಯಾವ್ದೋ ಭ್ರಮೆ ಹಿಡ್ದು ಊರೂರು ತಿರುಗ್ತಿದೀವಿ.

ಚಿನ್ನದ್ದು ಒಂದ್ ಹೆಣ್ಣು ಗುಬ್ಬಿ, ಒಂದ್ ಗಂಡ್ ಗುಬ್ಬಿ
ನಮ್ಗೇ ಮಾರ್ಕಂಡಾದ್ರೂ ಸರಿ, ಅವಕ್ಕೆ ಚಿನ್ನನೇ ತಿನುಸ್ಬೇಕು; ಚಿನ್ನದ್ ಪಂಜರ್ದಾಗೇ ಇಡ್ಬೇಕು.
ಪ್ರವಾಸಕ್ಕೆ ಬಂದೋರ್ ಅವ್ರು ಎಷ್ಟ್ ಬೆಳ್ಳಗಿದಾರೆ!

ಬೇಟೆ ಆಡಕ್ಬಂದೋರೂ ಇಷ್ಟ್ ಚಂದಾಗಿದಾರೆ!
ಬೇಟೆ ಆಡಿದ್ ಬಿಳೀ ಮೊಲಾನ ಕೈಲಿ ಹಿಡ್ಕಂಡು
ಮೇಜಿನ್ ಮೇಲೆ ಬಿಳೀ ಬಟ್ಟೆ ಹಾಸಿ ಸಾಲುಸಾಲು ಮಲಗ್ಸಿದಾರೆ.
ಅವ್ರ ಸೊಂಟದ ಕಠಾರಿ ತೆಗೆದು
ಮೊಲಗಳ್ ಕುಂಡೆಗೆ ಹೆಟ್ಟಿದ್ರೆ;
ರಕ್ತ ಜಲ್ಲಂತ ಚಿಮ್ಮಿ
ರಕ್ತ ಸುರಿಸೋ ಪಾರಿವಾಳದಂಗೇ ನಂ ಮನ್ಸೂ ವಿಲವಿಲ ಅಂತ ಇದೆ.

ಶಾಂತಿದೇವತೆಗಳೆಲ್ಲ ಬೇಗಬೇಗ ಸ್ವರ್ಗಕ್ಕೆ ಓಡ್ತಾ ಇದಾರೆ!
ಇಂಥಾ ಹುಯ್ಲೋ ಹುಯ್ಲಲ್ಲಿ ಗಣರಾಜ್ಯದ ಹಾಡನ್ನೂ ಹುರುಕ್ತಾರೆ.
ಹಾಡ್ತಾ ಬೇಡಬೇಕಂತೆ,
'ಕವಳಾ ಕೊಡಿ ತಾಯಿ, ನಿಮ್ಮ ಗ್ರಾಚಾರ ಕಳದೋಗ್ಲಿ,
ಭಿಕ್ಷಾ ನೀಡಿ ತಾಯೇ, ಹಿಡಿದ ಶನಿ ಬಿಟ್ಹೋಗಲಿ!'



ಮರಾಠಿ ಮೂಲ: ನಾಮದೇವ್ ಧಸಾಳ್
ಕನ್ನಡಕ್ಕೆ: ಡಾ, ಎಚ್.ಎಸ್.ಅನುಪಮಾ

ಭಗವದ್ಗೀತೆಯೋ? ಸಂವಿಧಾನವೋ?

....2

ಸೋಂದಾ ಮಠವು ಈ ಅಭಿಯಾನಕ್ಕಾಗಿ ತಂದಿರುವ ಕರಪತ್ರದಲ್ಲಿ ಮನುಷ್ಯ ಭೌತಿಕ ಬದುಕಿನಲ್ಲಿ ಅದ್ಭುತವಾದ ಪ್ರಗತಿ ಸಾಧಿಸಿದ್ದರೂ ಮನುಷ್ಯನಲ್ಲಿರುವ ಅಸುರೀ ಮನೋಭಾವದಿಂದಲೇ ಬದುಕು ರಣರಂಗವಾಗುತ್ತಿದೆಯೆಂದು ವಿವರಿಸಿ ಆ ಪಟ್ಟಿಯಲ್ಲಿ ಮೋಸ, ವಂಚನೆ, ಸುಲಿಗೆ ಇವುಗಳ ಜೊತೆಗೆ ಮತಾಂತರವನ್ನೂ ಅಸುರೀ ಕೃತ್ಯಗಳ ಸಾಲಿನಲ್ಲಿ ಸೇರಿಸಲಾಗಿದೆ. ಅಷ್ಟು ಮಾತ್ರವಲ್ಲದೆ ಭಗವದ್ಗೀತೆಯಲ್ಲಿ "ವಿಶ್ವದ ಎಲ್ಲಾ ಧರ್ಮ, ಮತಗಳ ಸಾರ ಇಲ್ಲಿದೆ. ಸ್ವಾತಂತ್ರ ಸಂಗ್ರಾಮಕ್ಕೂ ಹೊಸಕಳೆಯನ್ನೂ ಕಟ್ಟಿದ್ದು ಗೀತೆ" ಎಂದೆಲ್ಲಾ ಬಣ್ಣಿಸಲಾಗಿದೆ. ಇದು ಭಗವದ್ಗೀತೆ ಮತ್ತು ಸ್ವಾತಂತ್ರ ಹೋರಾಟಗಳ ಬಗೆಗೆ ಬಿಜೆಪಿ ಬ್ರಾಂಡಿನ ಸಿದ್ಧಾಂತದ ಒಂದು ನಿರ್ದಿಷ್ಟ ಬಗೆಯ ತಿಳಿವಳಿಕೆ ಮಾತ್ರ. ಆದರೆ ಅದನ್ನೇ ಮೌಲ್ಯ ಶಿಕ್ಷಣದ ಹೆಸರಲ್ಲಿ ಇಡೀ ರಾಜ್ಯಾದ್ಯಂತ ಅಧಿಕೃತವಾಗಿ ಪ್ರಚಾರ ಮಾಡಲು ಹೊರಟಿರುವುದು ಅತ್ಯಂತ ಸಂವಿಧಾನ ವಿರೋಧೀ ಕೃತ್ಯ.



ಬಿಜೆಪಿಯ ಶಿಕ್ಷಣದ ಕೇಸರೀಕರಣದ ಇತರ ಸ್ಯಾಂಪಲ್‌ಗಳು

ಬಿಜೆಪಿ ಸರ್ಕಾರ ಮೌಲ್ಯ ಶಿಕ್ಷಣದ ಅಜೆಂಡಾ ಸಾರಾಂಶದಲ್ಲಿ ಅದರ ಇತರ ಶಿಕ್ಷಣದ ಕೇಸರೀಕರಣದ ಭಾಗವಾಗಿದೆ. ಅದು ಸಮ್ಮಿಶ್ರ ಸರ್ಕಾರದ ಕಾಲದಲ್ಲಿ ಅಧಿಕಾರದ ರುಚಿ ಅನುಭವಿಸಿದ್ದಾಗಿನಿಂದಲೇ ಪ್ರಾರಂಭವಾಯಿತು. 2006ರ ಅಕ್ಟೋಬರ್‌ನಲ್ಲಿ ಸಮ್ಮಿಶ್ರ ಸರ್ಕಾರದ ಭಾಗವಾಗಿದ್ದ ಬಿಜೆಪಿ ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮದಲ್ಲಿ ಮೊಟ್ಟೆಯನ್ನು ಕೊಡಬಾರದೆಂದು ವಿರೋಧ ವ್ಯಕ್ತಪಡಿಸಿತ್ತು, ತನ್ನ ಚೇಲಾ ಮಠಗಳಿಂದ ಹೋರಾಟ ನಡೆಸಿ 2008ರ ಜನವರಿಯಿಂದಲೇ ಮೊಟ್ಟೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಆ ಮೂಲಕ ಮೊಟ್ಟೆ ತಿನ್ನುವ ಆಹಾರ ಪದ್ಧತಿಯನ್ನು ಪರೋಕ್ಷವಾಗಿ ಅನಧಿಕೃತವೆಂದೇ ಘೋಷಿಸಿಬಿಟ್ಟಿತು. ನಂತರ 2008ರಲ್ಲಿ ಮೌಲಿಕ ಶಿಕ್ಷಣದ ಕಾಂಟ್ರಾಕ್ಟ್ ಅನ್ನು ಜಿಲ್ಲಾ ಮಠಗಳಿಗೇ ವಹಿಸಲಾಗುವುದೆಂದು ಸರ್ಕಾರ ಘೋಷಿಸಿತ್ತು. 2008ರಲ್ಲಿಯೇ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ಇತಿಹಾಸ ಪಾಠವನ್ನು ಪುನರ್ ರಚಿಸಲು ತೀರ್ಮಾನಿಸಿ ಅದಕ್ಕೊಂದು ಸಮಿತಿಯನ್ನೂ ರಚಿಸಿತು. ಅದರ ವರದಿ ಇನ್ನೂ ಬರಬೇಕಿದೆ. 2009ರಲ್ಲಿ ಶಿಕ್ಷಣ ಇಲಾಖೆ ಪ್ರತಿಯೊಂದು ಶಾಲೆಯೂ ಕಡ್ಡಾಯವಾಗಿ 'ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್'ನ 300 ಪುಸ್ತಕಗಳನ್ನು ಕೊಳ್ಳಲೇಬೇಕೆಂದು ಆದೇಶ ಹೊರಡಿಸಿತು. ಆ 300 ಪುಸ್ತಕಗಳಲ್ಲಿ ಆರೆಸ್ಸೆಸ್ ಮುಖಂಡರ ಮತ್ತು ಆರೆಸ್ಸೆಸ್ ಚಿಂತನಾಧಾರೆಗೆ



ಪೂರಕವಾಗಿರುವ ಸಾಹಿತ್ಯವೇ ಹೆಚ್ಚಿದೆ. ಉಳಿದಂತೆ ಅಂಬೇಡ್ಕರ್, ಕನಕದಾಸ, ಲೋಹಿಯಾ ಮತ್ತಿತರರ ಬಗೆಗೆ ಪುಸ್ತಕಗಳಿದ್ದರೂ ಅವರನ್ನೆಲಾ ಆರೆಸ್ಸೆಸ್ ಚಿಂತನೆಧಾರೆಯ ಎರಕದಲ್ಲೇ ಚಿತ್ರಿಸಿ ಇತಿಹಾಸಕ್ಕೇ ಅಪಚಾರ ಬಗೆಯಲಾಗಿದೆ. ಟಿಪ್ಪು ಸುಲ್ತಾನ್ ಬಗ್ಗೆ ಪುಸ್ತಕವೇ ಇಲ್ಲ. 2009ರ ಡಿಸೆಂಬರ್‌ನಲ್ಲಿ ಭಯೋತ್ಪಾದನಾ ವಿರೋಧೀ ಅಭಿಯಾನದ ಹೆಸರಲ್ಲಿ ಎಲ್ಲಾ ಕಾಲೇಜುಗಳನ್ನು ಮುಸ್ಲಿಂ ಮತ್ತು ಪಾಕಿಸ್ತಾನ ವಿರೋಧಿ ಪ್ರಚಾರಕ್ಕೆ ಬಳಸಿಕೊಂಡಿತು. ಮುಗ್ಧ ಮಕ್ಕಳ ಮನಸ್ಸಿನಲ್ಲಿ ಕೋಮುವಾದಿ ವಿಷಬೀಜವನ್ನು ಬಿತ್ತಲು ಭಯೋತ್ಪಾದನಾ ವಿರೋಧಿ ಅಭಿಯಾನವನ್ನು ಯಶಸ್ವಿಯಾಗಿ ಬಳಸಿಕೊಂಡಿತು. 2010ರಲ್ಲಿ ಧನಾತ್ಮಕ ಚಿಂತನೆಯ ಹೆಸರಿನಲ್ಲಿ ಕಾಲೇಜು ಅಧ್ಯಾಪಕರುಗಳನ್ನು ಯೋಗ ಅಧ್ಯಯನ ಮಾಡುವ ಹೆಸರಲ್ಲಿ ಆರೆಸ್ಸೆಸ್ ವಿಚಾರ ಪ್ರಚಾರ ಮಾಡುವ ಸಂಸ್ಥೆಗಳಿಗೆ "ಸರ್ಕಾರಿ ಕೆಲಸದ ನಿಮಿತ್ತ" ಕಳಿಸಿತು. ಅದರಲ್ಲಂತೂ ಎಲ್ಲಾ ಬಗೆಯ ಅವೈಜ್ಞಾನಿಕ ಮತ್ತು ಬ್ರಾಹ್ಮಣೀಯ ಆಚಾರಗಳನ್ನು ವಿಜ್ಞಾನವೆಂದು ಅಧಿಕೃತವಾಗಿ ಬೋಧಿಸಲು ಬಳಸಿಕೊಂಡಿತು. ಅದೇ ವರ್ಷ ಪ್ರೌಢಶಾಲೆಯ ಇತಿಹಾಸ ಬೋಧಕರನ್ನು ಕೇಶವಕೃಪಾಕ್ಕೆ "ಸರ್ಕಾರಿ ಕೆಲಸದ ನಿಮಿತ್ತ" ಕಳಿಸಿ ಬ್ರೈನ್‌ವಾಶ್ ಮಾಡುವ ಪ್ರಯತ್ನವನ್ನು ಮಾಡಿತು. ಎರಡು ವರ್ಷಗಳಿಂದ "ಮಾನವತಾ" ಎಂಬ ಅಧಿಕೃತ ಕಾರ್ಯಕ್ರಮವೂ ಸಹ ಕಾಲೇಜು ಮಟ್ಟದಲ್ಲಿ ಚಾಲ್ತಿಯಲ್ಲಿದೆ. ನೈತಿಕ ಶಿಕ್ಷಣದ ಈ ಭಾಗದ ಕಾಂಟ್ರಾಕ್ಟೂ ಮಹಾನ್ ಹಿಂದೂವಾದಿ ರವಿಶಂಕರ್ ಸ್ವಾಮೀಜಿಗೆ ವಹಿಸಲಾಗಿದೆ. ಅಲ್ಲದೆ ಎರಡು ವರ್ಷಗಳಿಂದ ಈ ಭಗವದ್ಗೀತಾ ಅಭಿಯಾನವನ್ನೂ ಬಿಜೆಪಿ ನಡೆಸುತ್ತಾ ಬಂದಿದೆ. ಹೀಗೆ ಒಂದೆಡೆ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಮಾಡುತ್ತಿರುವ ಬಿಜೆಪಿ ಸರ್ಕಾರ ಮತ್ತೊಂದೆಡೆ ತಣ್ಣಗೆ ತನ್ನ ಕೋಮುವಾದಿ ಅಜೆಂಡಾವನ್ನು ಒಂದೊಂದಾಗಿ ಜಾರಿಗೆ ತರುತ್ತಲೇ ಇದೆ.

ಗೋಳ್ವಾಲ್ಕರ್ ಮತ್ತು ಕಾಗೇರಿ

ವಾಸ್ತವವಾಗಿ ಬಿಜೆಪಿ ಸರ್ಕಾರದ ಈ ಕ್ರಮಗ
ಪಕ್ಕಾ ಆರೆಸ್ಸೆಸ್ ಪ್ರಾಯೋಜಿತ ಹಿಂದೂತ್ವವಾದಿ ಕಾರ್ಯಕ್ರ
ಗಳಾಗಿವೆ. ಭಗವದ್ಗೀತೆ ಪಠಣ ಮತ್ತು ರಾಷ್ಟ್ರೋತ್
ಸಾಹಿತ್ಯ ಮಾಲಿಕೆಗಳ ಪುಸ್ತಕದ ಖರೀದಿ, ಬಿಸಿಯೂಟದ
ಮೊಟ್ಟೆ ಇಲ್ಲದಂತಾಗಿದ್ದು, ಸಾವಯವ ಕೃಷಿಯ ಹೆಸರ
ಗೋಮಾಂಸ ಭಕ್ಷಣೆಯ ವಿರುದ್ಧ ನಡೆಸುತ್ತಿರುವ ಪ್ರಚಾ
ರಾಷ್ಟ್ರಭಕ್ತಿಯ ಹೆಸರಲ್ಲಿ ವಂದೇ ಮಾತರಂ ಗೀತೆಗೆ ಪ್ರೋತ್
ಕೊಡುವ ಮೂಲಕ ಪರಧರ್ಮಗಳ ಅವಹೇಳನ, ಭಯೋ
ತ್ಪಾದನೆ ವಿರೋಧಿ ಅಭಿಯಾನದ ಹೆಸರಲ್ಲಿ ಇಡೀ ಮು
ಸಮುದಾಯವನ್ನೇ ಭಯೋತ್ಪಾದಕರೆಂದು ಚಿತ್ರಿಸಲು ನಡೆ
ಪ್ರಯತ್ನ... ಇವುಗಳೆಲ್ಲಾ ಸಮಾಜದಲ್ಲಿ ಸಂಘಪರಿವಾರ
ಬ್ರಾಂಡಿನ ಪರಮತ ದ್ವೇಷ ಮತ್ತು ಬ್ರಾಹ್ಮಣ್ಯದ ಪುರಸ
ದಂತ ಮೌಲ್ಯಗಳನ್ನು ಉತ್ತೇಜಿಸುವ ಪ್ರಯತ್ನಗಳೇ ಆಗಿ
ಒಂದು ಸೆಕ್ಯೂಲಾರ್, ಪ್ರಜಾತಾಂತ್ರಿಕ ರಾಷ್ಟ್ರವನ್ನಾಗಿ
ದೇಶವನ್ನು ಕಟ್ಟಬೇಕೆಂಬ ನಿರ್ದೇಶನ ನೀಡಿರು
ಸಂವಿಧಾನದ ಆಶಯಗಳಿಗೆ ಈ ಎ
ಕ್ರಮಗಳು ವಿರುದ್ಧವಾಗಿವೆ.

1938ರಲ್ಲಿ ಗೋಲ್ವಾಲ್
ಪ್ರತಿಪಾದಿಸಿದ್ದೂ ಇದನ್ನೇ. ಅವ
"We or Our Nationho
Defined" ಪುಸ್ತಕದಲ್ಲಿ ಅವ
ಪ್ರತಿಪಾದಿಸಿರುವ ಫ್ಯಾಸಿಸ್ಟ್ ನೀತಿಯ
ಇದೇ ಆಗಿದೆ. ಅದರಲ್ಲಿ ಅವರು:
"From the standpoi
sanctioned by the experience
shrewd nations, the non-Hin
people in Hindustan must eith
adopt the Hindu culture a
language, must learn to respect and reve
Hindu religion, must entertain no idea b
the glorification of Hindu nation i.e. th
must not only give up their attitude
intolerance and ingratitude towards th
land and its age long traditions, but mu
also cultivate the positive attitude of lo
and devotion instead; in one word, th
must cease to be foreigners or may stay
the country wholly subordinated to t
Hindu nation, claiming nothin
deserving no privileges, far less a
preferential treatment, not even t
citizen's rights."

ಭಾರತದಲ್ಲಿ ಇತರ ಧರ್ಮೀಯರು ಬದುಕಿರಬೇಕೆಂ
ಇಲ್ಲಿ ಹಿಂದೂ ಜೀವನ ಪದ್ಧತಿಯನ್ನು ಗೌರವಿಸು
ಹಿಂದೂಗಳ ದೇವರನ್ನೇ ತಮ್ಮ ದೇವರು ಎಂದು ಭಾವಿಸ
ಬೇರೆ ಏನನ್ನೂ ಕೋರದೆ ಎಲ್ಲ
ತನಕ ಎಂದರೆ ನಾಗರಿಕ ಹ
ಗಳನ್ನೂ ಕೋರದೆ ಎರಡನೇ ದ
ನಾಗರಿಕರಾಗಿ ಮಾತ್ರ ಬದ
ಬೇಕೆಂದು ಗೋಲ್ವಾಲ್ಕರ್ ಪ್ರತಿಪಾದಿಸಿದ್ದರು. ಭಗವದ
ಯನ್ನು ಒಪ್ಪದವರು ದೇಶ ಬಿಟ್ಟು ತೊಲಗಿ ಎನ
ಮೂಲಕ ಕಾಗೇರಿ ಮತ್ತು ಬಿಜೆಪಿ ಸರ್ಕಾರ ಅ
ಹೇಳುತ್ತಿದೆ.

ಗೋಲ್ವಾಲ್ಕರ್ ಹೀಗೆ ಹೇಳಿದ್ದು 1938ರಲ್ಲಿ, ನಂ
ಅದೇ ರಾಜಕೀಯದ ಭಾಗವಾಗಿ ಅವರ ಆರೆಸ್ಸೆಸ್ ಗಾ
ಯನ್ನು ಕೊಂದುಹಾಕಿತು. ನಂತರ ದೇಶದ ರಾಜಕಾರ
ಅಂಚಿಗೆ ಸರಿದು ಹೋದ ಆರೆಸ್ಸೆಸ್ ಮತ್ತು ಅದು ಪ್ರತಿ
ಸುತ್ತಿದ್ದ ಉಗ್ರ ಹಿಂದೂತ್ವವಾದಿ ರಾಜಕಾರಣ ಮುನ್ನೆ
ಬಂದಿದ್ದು 1977ರಲ್ಲಿ. ಕಾಂಗ್ರೆಸ್‌ನ ನಿರಂಕುಶ ರಾಜಕಾ
ಎಡಬಿಡಂಗಿ ಉದಾರವಾದಿಗಳ ಸಂಕುಚಿತ ರಾಜಕೀ
ಎಡಪಂಥೀಯರ ವೈಫಲ್ಯವೇ ಬಿಜೆಪಿಯನ್ನು ಮುನ್ನೆ
ತಂದಿತು. 1985ರಿಂದ ಕಾಂಗ್ರೆಸ್‌ನ ಅವಕಾಶವಾದಿ ಮ
ಹಿಂದೂ ರಾಜಕಾರಣ ತೆರೆದಿಟ್ಟ ಅವಕಾಶಗಳ
ಬಳಸಿಕೊಂಡು ರಾಜಕೀಯದ ಮುನ್ನೆಲೆಗೆ ಬಂದ ಬಿ
ಈಗ ಎಡಪಂಥೀಯ ಚಿಂತನೆ ಮತ್ತು ಚಳ
ಡಿಫೆನ್ಸ್‌ನಲ್ಲಿರುವ ಮತ್ತು ಎಡಬಿಡಂಗಿ ಉದಾರವಾದಿ
ಅವಕಾಶವಾದ ಎಲ್ಲವನ್ನೂ ಬಳಸಿಕೊಂಡು ಎದುರಾಳಿ
ಇಲ್ಲದ ರೀತಿ ದೇಶವನ್ನು ಹಿಂದೂ ಫ್ಯಾಸಿಸ್ಟ್ ರಾಜಕಾ
ದೆಡೆಗೆ ತೆಗೆದುಕೊಂಡು ಹೋಗುತ್ತಿದೆ. ಭಗವದ
ಅಭಿಯಾನ, ಅದನ್ನು ಒಪ್ಪದವರು ದೇಶ ಬಿಟ್ಟು ಹೋ
ಎಂಬ ಸಾಂವಿಧಾನಿಕ ಸ್ಥಾನದಲ್ಲಿ ಕುಂತಿರುವವರ ಹೇ
ಎಲ್ಲವೂ ಅದರ ಭಾಗವೇ.

ಈಗಲಾದರೂ ಎಲ್ಲಾ ಪ್ರಜಾತಾಂತ್ರಿಕವಾದಿಗ
ಪ್ರಗತಿಪರರು, ಈ ದೇಶದಲ್ಲಿ ಭಾವೀ ಜನಾಂಗ
ಮನಸ್ಸುಳ್ಳವರಾಗಬೇಕು ಎಂದು ಬಯಸುವ ಪ್ರತಿಯೊ
ಭಗವದ್ಗೀತಾ ಅಭಿಯಾನ ಮತ್ತು ಅದರ ಹಿಂ
ಹಿಂದೂತ್ವವಾದಿ ರಾಜಕಾರಣದ ವಿರುದ್ಧ ರಾಜಿಯಿ
ಹೋರಾಟ ನಡೆಸಲೇಬೇಕಿದೆ.

ದೇಶ ಬುಟ್ಟೊಗಿ ಅನ್ನಕ್ಕೆ ಇವುರಪ್ಪುಂದ್ಲ ದೇಶ

ಉಗ್ರಿ ಕುಚೋದ್ಯದ ಸುದ್ದಿ ತಂದವನಂತೆ ತಮಾಷೆ ಗಿ ನಗುತ್ತ

"ವಿಸಿಯ ಗೊತ್ತಾಯ್ತ ಮಾವ?" ಎಂದ.

"ಯಾವ ಸುದ್ದಿನ್ಲ?"

"ಎಡೂರಪ್ಪ ಕುಟುಂಬದ ಸಮೇತ ನ್ನಿಗೋದನಂತೆ."

"ಅಲ್ಲೇನು ಮಾಡಕ್ಕೋದುನ್ಲ?"

ಯ ಉ ಸೀ ಮ ಕಟ್ಟೆಪುರಾಣ

▶ ಬಿ. ಚಂದ್ರೇಗೌಡ

"ಅಲ್ಲವ್ರುನು ಮಾಡೊ ಅಂತದ್ದೇನೂ ಇಲ್ಲ, ಕರ್ನಾಟಕದ ಸ್ಯೆ ಯಾವತ್ತೂ ಇರವಯೆ, ಒಸಿದಿನ ಹಾಯಾಗಿದ್ದು ಂ ಅಂತ ಇಡೀ ಅವುನ ಪರಿವಾರ ಕಟಿಗಂಡು ಇದನಂತೆ."

"ಅಂಗರೆ ಸೋಬನ್ನ ಬುಟುಬುಟ್ಟೊದ ಅನ್ನು" ಎಂದು ಮ್ಮಿ ನಕ್ಕಳು.

"ಊ. ಇಡೀ ಕುಟುಂಬನೆ ಹೋಗಿರುವಾಗ ಳಿನ್ನಾಕೆ ಅಂತ."

"ಅಲ್ಲಾ ಕರ್ನಾಟಕದಲ್ಲಿ ಈಗ ಬಿತ್ನೆ ಕಾಲ. ಜ್ವತಿಗೆ ಪಳೆ ಬಂದು ಜನಗಳೆಲ್ಲ ತಾರಾಡ್ತಯಿರುವಾಗ ನು ಫಾರಿನ್ನಿಗೋದ ಅಂತಿಯಲ್ಲ ಅವುನು ಒಂಥರಾ ನೆಯ ಬುಡು" ಎಂದ ಕಾಳಮಾವ.

"ನಿಜ ಕಣಮಾವ. ಊರು ಮ್ಯಾಲೆ ಊರು ಬಿದ್ರೆ ಭೋಗನಿಗೇನು ಅಂತರಲ್ಲಾ ಅಂಗೆ ಮಾರೀಸಸ್‌ಗೆ ದ ಅತ್ತಗೆ."

"ಮಾರಿಸಸ್ಸು ಅಂದ್ರೇನ್ಲ?" ಎಂದಳು ಜುಮ್ಮಿ.

"ಅದೊಂತರ ಪ್ರವಾಸಿಜಾಗವಂತೆ ಕಣೆ. ಮಜ ತೋರಿಗೆ ಹೇಳಿ ಮಾಡಿಸಿದ ಜಾಗವಂತೆ. ಅಲ್ಲಿ ಒಂದು ಕರ್ನಾಟಕ ಮರತು ನೆಮ್ಮದಿಯಾಗಿ ಇದ್ದು ಬರನ ಹೋದನಂತೆ. ಸಾಮಾನ್ಯವಾಗಿ ಟೂರೊಂಟೋರು ಸಿಯಾಗಿರತರೆ. ಆದರೆ ಎಡೂರಪ್ಪ ಮಾತ್ರ ಗಿದ್ದನಂತೆ."

"ಅದ್ಯಾಕ್ ದೊಳ್ಳಾಗಿದ್ದ?"

"ಇನ್ನೊಂದೆರಡು ಮೂರು ದಿನ ಬುಟ್ಟು ಲೋಕಾ ಕ್ತ ಸಂತೋಷ ಹೆಗಡೆ ಯಾರ್ಯಾರು ಕಳ್ಳತನದಲ್ಲಿ ಗಣಿ ಮ ಮಾರಿಕಂಡವುರೆ ಅಂತ ಹೇಳತರಂತೆ. ಅದರ್ವಳಗೆ ರ್ಯಾರು ಸಿಕ್ಕಿಬಿದ್ದವುರೊ ಏನೊ ಅಂತ ಯೋಚನೆ ಚಿಸಿಗಂಡುವ್ರುನಂತೆ ಎಡೂರಪ್ಪ ಆಕಸ್ಮಾತ್ ಗಣಿ ಕಳ್ಳರ್‍ಯಲ್ಲಿ ಅವುನಿಗೆ ಬೇಕಾದೋರೆ ಆಗಿದ್ರೆ ಪೇಪರ್‌ನೋರು ಎಡೂರಪ್ಪನ್ನೆ ಕೇಳ್ತರೆ. ಅದಕ್ಯಲ್ಲ ಉತ್ತರ ಕೊಡಬೇಕಾಯ್ತದೆ ಅಂತ ಮುಂದಾಲೋಚನೆ ಮಾಡಿ ಮಾರಿಸಸ್‌ಗೋಗಿ ಮುಖ ಮರಿಸಿಗಂಡವುನೆ ಅಂತರೆ. ಅಂಗೇ ನೋಡಿದ್ರೆ ಅದೇ ನಿಜ ಅನ್ನಂಗೆ ಕಾಣ್ತದಪ್ಪ.'

"ಪಾಪ ಅವುನು ಅಧಿಕಾರಕ್ಕೆ ಬಂದು ಇಷ್ಟು ದಿನಾದ್ರು ಒಂದೇ ಒಂದು ದಿನ ನೆಮ್ಮದಿಯಾಗಿ ರಾಜ್ಯಬಾರ ಮಾಡಲಿಲ್ಲ."

"ಮಾಡಲಿಲ್ಲ ಅಂದ್ರೆ ಅದವ್ರುನೆ ಮಾಡಿ ಕಂಡಿದ್ದಲ್ಲವೆ ಮಾವ. ಕಳ್ರು, ಸುಳ್ಳರು, ಲಫಂಗರು, ನೀಚರು, ವ್ಯಭಿಚಾರಿಗಳನ್ನೆಲ್ಲಾ ಮಂತ್ರಿ ಮಾಡಿಕಂಡ್ರೆ ಇನ್ನೇನಾದತೂ?"

"ಆ ಪಾರ್ಟಿಲಿ ಇದ್ದೊರೆ ಅಂಥೊರಲವೇನ್ಲ?" ಎಂದ ಸೀರ.

"ಅದು ನಿಜಕಣ ಮಾವ. ಒಬ್ಬನೇ ಒಬ್ಬ ಮರಿಯಾದಸ್ತ ಮಂತ್ರಿ ಎಡೂರಪ್ಪನತ್ರ ಇಲ್ಲ. ಕಟ್ಟಾ ಸುಬ್ಬ ಕೃಷ್ಣಯ್ಯ ಶೆಟ್ಟಿ, ರೇಣುಕಾಚಾರಿ, ಕಾಗೇರಿ... ಆ ಕಾಗೇರಿಯಂತೂ ಯಂತ ಮಾತಂದವ್ರುನೆ ಗೊತ್ತೆ ಮಾವ?"

"ಏನಂದವ್ರುನೆ?"

"ಭಗವದ್ಗೀತೆ ಬ್ಯಾಡ ಅನ್ನೋರು ದೇಶ ಬುಟ್ಟೊಗಿ ಅಂದವ್ರುನೆ."

"ದೇಸ ಬುಟ್ಟೆಲ್ಲಿಗೋಗಬೇಕಂತೆ? ದೇಸ ಏನು ಇವರಪ್ಪುಂದೆ?"

"ಅವುನೇಳಿರದು ಸಾಬರಿಗಂತೆ ಕಂಡ್ಯಾ" ಎಂದ ಸೀರ.

"ಸಾಬರು ಭಗವದ್ಗೀತೆಯ ಹೇಳಂಗೆ ಇವುನೇಳಿಬುಡ್ಲಿ ನೋಡನ. ಆಗ ಯಾರ್ನ ದೇಶಬುಟ್ಟು ಕಳುಸ ಬೇಕು ಅಂತ ಇತ್ಯರ್ಥ ಆಯ್ತದೆ."

"ಅಂತ ಪೋಲಿ ಬಡ್ಡೆತ್ತವುನ್ಯಲ್ಲ ಈ ಎಡೂರಪ್ಪ ಮಂತ್ರಿ ಮಾಡಿಕಂಡ್ರೆ ನೆಮ್ಮದಿಯಾಗಿ ಇರಕ್ಕಾದತೆ?"

"ಸಾಧ್ಯವೇಯಿಲ್ಲ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಅವುನ್ಯಾರ್ಲ ಕಾಗೇರಿ ಅಂದ್ರೆ?" ಎಂದಳು ಜುಮ್ಮಿ.

"ಅವುನು ಎಜುಕೇಷನ್ ಮಿನಿಷ್ಟ್ರು ಕಣಕ್ಕ. ಆದ್ರು ಮುತಾಲಿಕ, ತೊಗಾಡಿಯಾ ತರ ಮಾತಾಡ್ತನೆ. ಇಂಡಿಯಾ ದೇಶದಲ್ಲಿ ಶೇಕಡ ತೊಂಬತ್ತು ಭಾಗ ಜನಗಳಿಗೆ ಭಗವದ್ಗೀತೇಲಿ ಏನದೆ ಅಂತ ಗೊತ್ತಿಲ್ಲ. ಸ್ವತಃ ಅವುನಿಗೆ ಗೊತ್ತದೊ ಇಲ್ಲವೊ ಕಾಣೆ. ಅಂತದ್ರಲ್ಲಿ ಭಗವದ್ಗೀತೆ ಬ್ಯಾಡ ಅನ್ನೊರು ದೇಶ ಬುಟ್ಟೊಗಿ ಅಂತಾನಲ್ಲಾ, ಕರ್ನಾಟಕ ಇವುರಪ್ಪುಂದ? ಏನು ಬ್ಯಾಡ ಸಾಬರ್‍ಯಲ್ಲ ಒಂದೇ ಒಂದು ದಿನ ರಜ ಹಾಕ್ಲಿ ಆಗ ಗೊತ್ತಾಯ್ತದೆ. ಈ ಬ್ಯಾಂಡಿಕೂಟ್ ನನ ಮಕ್ಕಳು ಯಂಗವ್ರುರೆ ಅಂದ್ರೇ ಒಂದು ವೆಯಿಕಲ್ ಚಕ್ರ ಬಿಚ್ಚಿ ಪಂಚರ್‌ಆಕಿ ತಿರಗಚಕ್ರ ಫಿಕ್ಸ್ ಮಾಡಕ್ಕೆ ಬರದಿಲ್ಲ."

"ಅದಷ್ಟೇ ಅಲ್ಲ ಕಣೊ, ಕಟಿಗಂಡಿರೊ ಹೆಂಡತಿ ಇನ್ನೊಂದು ಸತಿ ಮಾಡು ಅಂದ್ರೆ, ಈಗಾಗದಿಲ್ಲ ಇನ್ನೊಂದೆರಡು ದಿನ ಬುಟಗಂಡು ಕೇಳು ಅನ್ನಂಗವ್ರುರೆ."

"ಆ ಸೆಕ್ಸ್ ಮ್ಯಾಟ್ರ್ಯಲ್ಲ ಬ್ಯಾಡ ಕಣೊ ಉಗ್ರಿ. ಪ್ರಾಬ್ಲಂ ಏನದೆ ಅದ ಮಾತಾಡನ."

"ನಾನೇಳಿದ್ದು ಅವುರು ಎಷ್ಟು ಮಟ್ಟಿಗೆ ಪೌರುಷವಂತರು ಅಂತ ಹೇಳಕ್ಕೆ ಆ ಕ್ಲಾಸುಕ್ಯಂದೆ ಕಣೊ. ಅವುನು ಅಂತ ಮಾತನ್ನದಾದ್ರೆ ನಾವೂ ಏನಾರ ಹೇಳಬೇಕಲ್ಲವೆ."

"ಹೇಳನ. ನಾನೇಳಿದಂಗೆ ಕೇಳಬೇಕೆ ವರತೂ, ಅವುನೇಳಿ ದಂಗೆ ನಾವು ಕೇಳಕ್ಕಾಗದಿಲ್ಲ. ಇಡೀ ಕರ್ನಾಟಕದ ಸರ್ಕಾರಿ ಸ್ಕೂಲು ಜನತಾ ಮನೆ ಇದ್ದಂಗವೆ. ಕೆಲವು ಕಡೆಯಂತೂ ಯಾವಾಗ ಇಸುಗೂಲ್ ಕಟ್ಟಡ ಮಕ್ಕಳ ಮ್ಯಾಲೆ ಬೀಳ್ತವೊ ಹೇಳಕ್ಕೆ ಬರದಿಲ್ಲ. ಈ ಕಾಗೆ ಮುಂಡೆದ್ಕೆ ಅವ್ಯಲ್ಲ ಕಾಣ ಬೇಕಾಗಿತ್ತು, ಅದು ಬುಟ್ಟು ಭಗ್ವದ್‌ಗೀತೆ ಬ್ಯಾಡ ಅನ್ನೋರು ದೇಶಬುಟ್ಟೊಗಿ ಅನ್ನದಾದ್ರೆ ನಮ್ಮ ದೇಸದ ಸಂವಿಧಾನವ ಸರಿಯಾಗಿ ಓದಿಕೊ ಮುಂಡೆದೆ ಅನ್ನಬೇಕಾಯ್ತದೆ."



"ಸಂವಿಧಾನ ಅಂಬೇಡ್ಕರ್ ಮಾಡಿರದರಿಂದ ಅದರ ಮ್ಯಾಲೂ ಇವುರಿಗೆ ಗೌರವಯಿಲ್ಲ ಕಣೊ ವಾಟಿಸ್ಸೆ."

"ಅದು ಹಳೆ ಮ್ಯಾಟ್ರು ಕಣೊ ಉಗ್ರಿ. ನಮ್ಮ ದೇಶದ ಸಮಸ್ಯೆ ಏನಪ್ಪಾ ಅಂದ್ರೆ ಹಳೆ ಮ್ಯಾಟ್ರು ತಗಂಡು ಗುಂಜಾಡದು. ಇವತ್ತೇನು ಮಾಡಬೇಕು ನಾಳೆ ಏನು ಮಾಡಬೇಕು ಅನ್ನದು ಇಂಪಾರಟೆಂಟಲ್ಲ, ಅದ್ಕೆ ಇಂತವ್ಯಲ್ಲ ನ್ಯಡಿತವೆ. ಕಾಗೇರಿ ಅಂದಿರೊ ಮಾತು ಅವುನೊಬ್ಬಂದೆ ಅಲ್ಲ ಕಣೊ. ಅದು ಎಡೂರಪ್ಪನ ಮಾತೂ ಆಗಿರತದೆ. ಅಲ್ಲಿಂದ ಮ್ಯಾಕ್ಕೋದ್ರೆ ಅದ್ವಾನಿ, ವಾಜಪೇಯಿನೂ ಕಾಗೇರಿಯಂಗೆ ಮಾತಾಡಬೌದು."

"ಆ ವಾಜಪೇಯಿ ಏನಾದುನ್ಲ?" ಎಂದ ಕಾಳಮಾವ.

"ವಾಜಪೇಯಿ ಮಗ್ಗುಲು ಕೊಟ್ಟು ಬಾಳ ದಿನಾಯ್ತು ದ್ವಡಪ್ಪ, ಈಗಾಗ್ಲೆ ವಾಜಪೇಯಿ ಜಾಗದಲ್ಲಿ ಅದ್ವಾನಿ ಕಾಣಿಸಿಗುತ್ತಾ ಅವುನೆ. ಆದ್ರು ವಾಜಪೇಯಿನೆ ಬ್ಯಾರೆ, ಅದ್ವಾನಿನೇ ಬ್ಯಾರೆ."

"ಹಿರಿ ತಲಿಗಳ್ಯಲ್ಲ ಹೋಗಿಬುಟ್ಟೊ ಅಂಗರೆ."

"ಕರ್ನಾಟಕದಲ್ಲಿ ಒಂದು ತಲೆ ಇನ್ನು ಚನ್ನಾಗಿ ವರುಕು ಮಾಡ್ತ ಅದೆ ದ್ವಡಪ್ಪ, ಯಾವುದು ಅಂತ ಬುಡಿಸಿ ಹೇಳಂಗಿಲ್ಲ."

"ಅದ್ಯಾರ ತಲೆನ್ಲ?"

"ಅದೇ ಕಣಕ್ಕ ಕುಮಾರಣ್ಣನ್ನ ಆಮರಣಾಂತ ಕೂರಿಸಿ ಮರುದಿನನೆ ಶರಬತ್ತು ಕುಡುಸ್ತಲ್ಲಾ ಆ ತಲೆ."

"ಆಗ ಒಂದು ತಮಾಸಿ ನೋಡಿದೆ ಕಣೊ ವಾಟಿಸ್ಸೆ."

"ಅದ್ಯಾವುದಪ್ಪ ಅಂತ ತಮಾಸಿ?"

"ಕುಮಾರಣ್ಣ ಯಾವುದೊ ಕಾದಂಬರಿ ಓದಕ್ಕೆ ಟ್ರೈ ಮಾಡ್ತಯಿದ್ದ, ಆಗ ಭಜನೆ ಪದನೂ ಕೇಳ್ತಾಯಿತ್ತು, ನೋಡ್ತಿನೀ ಬಂಗಾರಪ್ಪ ತಾಳ ಹಾಕ್ತ ಕುಂತವುನೇ. ಇವುನಿಗ್ಯಾಕ್ ಬಂತಪ್ಪ ಇಂತ ಸ್ಥಿತಿ ಅಂತ ಭಾಳ ಬೇಜಾರಾಯ್ತು, ಆಮ್ಯಾಲೆ ತಮಾಸಿ ಅನ್ನುಸ್ತು."

"ನೋಡೋ ಉಗ್ರಿ, ನಮ್ಮ ಮಾಜಿ ಲೀಡ್ರು ನೋಡಿ ನೀನು ಕನಿಕರ ತೋರಸದೇನು ಬ್ಯಾಡ. ಒಂದು ಸೀಕ್ರೆಟ್ ನ್ಯೂಸ್ ಪ್ರಕಾರ ಬಂಗಾರಪ್ಪ ಫಾರಿನ್ನಲ್ಲಿ ಇಟ್ಟಿದ್ದ ದುಡ್ಡು ಹೋಯ್ತಂತೆ. ಇಲ್ಲಿ ಮಾಡಿದ್ದ ಆಸ್ತಿನೂ ಅವುರವುರದೆ ಆಯ್ತಂತೆ. ಇದನ್ಯಲ್ಲ ತಡಕಳಕ್ಕಾಗದೆ 'ಬಂ' ಜೆಡಿಎಸ್ ಪಾರ್ಟಿಲಿ ತಾಳ ಹಾಕ್ತ ಇರಬವುದು. ಆದ್ರೆ ಈ ಎಡೂರಪ್ಪನಿಗೆ ಬಂಗಾರಪ್ಪನ ದಾರಿ ದೂರ ಏನಿಲ್ಲ."

"ಎಡೂರಪ್ಪನಾಸ್ತಿ ಈ ಜನ್ಮಕ್ಕೇ ಕರಗದಿಲ್ಲ ಕಣೊ."

"ಅವುನು ಮಾರಿಸಸ್‌ಗೆ ಯಾಕೋಗ್ಯವುನೆ ಗೊತ್ತೇನೊ? ಅಕ್ರಮವಾಗಿ ಮಾಡಿಕಂಡಿರೊ ಹಣವ ಮಾರಿಸಸ್ನಲ್ಲಿ ಮಡಗಕ್ಕೋಗಿದ್ದನಂತೆ. ಅದ್ಕೆ ಅಲವೆ ಪಾರ್ಟಿ ಜನ ಬುಟ್ಟು ಬರೇ ಮನೆ ಜನ ಕರಕಂಡೋಗಿರದು. ಎಡೂರಪ್ಪನ ಕ್ಯಟ್ಟದಿನ ಬಾಳ ದೂರ ಏನಿಲ್ಲ. ದ್ವಾಸೆ ಮಗಿಚಾಕಿದಂಗೆ ಬಂದೇ ಬುಡ್ತದೆ" ಎಂದ ವಾಟಿಸ್ಸೆ ಎಲ್ಲರ ಮುಖ ನೋಡಿದ.

❖

ಇದಕ್ಕೆ ಏನು ಕಾರಣ?

ಇದಕ್ಕೆಲ್ಲ ಏನು ಕಾರಣ ಎಂಬುದನ್ನು ನೀವೇ ಯೋಚಿಸಿ. ವಿಷಯ ಮಾತ್ರ ಹೇಳುತ್ತೇನೆ. ನನ್ನ ಪರಿಚಿತರೊಬ್ಬರು ಮ್ಮ ಒಂದು ಚಿಕ್ಕಮನೆಯಲ್ಲಿದ್ದು ಆ ಮನೆಗೆ ಹೊಂದಿಕೊಂಡಿದ್ದ ಸ್ವಲ್ಪ ದೊಡ್ಡ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರು. ಪರಿಚಿತರು ಅಂಥ ದೊಡ್ಡ ಕೆಲಸದಲ್ಲಿರಲಿಲ್ಲ; ಶ್ರೀಮಂತರೂ ಅಲ್ಲ. ಮುಂಚೆ ಬರುತ್ತಿದ್ದ ಬಾಡಿಗೆ ನೂರು ರೂಪಾಯಿ. ಬರುಬರುತ್ತಾ ಆ ಬಾಡಿಗೆ ಯಾವುದಕ್ಕೂ ಸಾಕಾಗದೆ ಗೊಣಗುತ್ತಿದ್ದರು. ತುಂಬ ದಾಕ್ಷಿಣ್ಯದ ವ್ಯಕ್ತಿಯಾಗಿದ್ದರಿಂದ ಡಿಗೆಗೆ ಇದ್ದವರೊಂದಿಗೆ ಜಗಳವಾಡಲೂ ಆಗಲಿಲ್ಲ. ಬಾಡಿಗೆಗಿದ್ದವರು ಒಬ್ಬ ಇಂಜಿನಿಯರ್; ಅವರು ರಾಗಿ ಅವರ ಮಗ ಕಾಂಟ್ರಾಕ್ಟ್ ಮಾಡಿಸುತ್ತಿದ್ದರೂ ಮನೆಯ ಬಾಡಿಗೆ ಮಾತ್ರ ನೂರು ರೂಪಾಯಿ. ದರೂ ಹೆಚ್ಚಿಗೆ ಮಾಡಲಿಲ್ಲ, ಜಗಳವಾಡಿದರೆ ಮುಖ ಕೆಟ್ಟುಹೋದದ್ದೇ ಹೊರತು ಸಮಸ್ಯೆ ಬಗೆಹರಿಯಲಿಲ್ಲ. ಕ್ಯ ಕೋರ್ಟಿಗೆ ಹೋಯಿತು. ಅಲ್ಲಿಯ ಭ್ರಷ್ಟತೆ, ನಿಧಾನದ್ರೋಹದಿಂದಾಗಿ ಕೇಸು ಯಾವ ರ್ಥಕ್ಕೂ ಬರಲಿಲ್ಲ, ಆ ಮನೆಯು ತಮಗೇ ಬೇಕು ಎಂಬ ವಾದವನ್ನು ಕೋರ್ಟು ಲಿಲ್ಲ; ಆದರಿಂದ ಬರುವ ನೂರು ರೂಪಾಯಿ ಯಾವುದಕ್ಕೂ ಸಾಕಾಗುವುದಿಲ್ಲ ದು ನಂಬುವಂತೆ ಹೇಳಲಾಗಲಿಲ್ಲ, ಕೊನೆಗೆ ಮನೆ ಬಿಡಿಸಿಕೊಳ್ಳಲಾಗದೆ, ರುವ ಬಾಡಿಗೆ ಸಾಕಾಗದೆ, ಸಮಸ್ಯೆ ಹೇಗೆ ಬಗೆಹರಿಯಬಲ್ಲದು ಎಂದು ಯದೆ ಈ ನನ್ನ ಪರಿಚಿತರಿಗೆ ಹುಚ್ಚು ಹಿಡಿಯಿತು. ಮೊನ್ನೆ ತೀರಿಕೊಂಡರು.

ಇನ್ನೊಂದು ಮನೆಯಲ್ಲಿ ಬಾಡಿಗೆಗಿದ್ದವರು ಇದ್ದಕ್ಕಿದ್ದಂತೆ ಆಘಾತಕ್ಕೊಳಗಾದರು. ಸೆಬಿಟ್ಟು ಹೊರಡುವಾಗ ಏನಾಯಿತೆಂದು ಗೊತ್ತಾಗುವ ಮುನ್ನ ರೌಡಿಯೊಬ್ಬ ರ ಹೆಣ್ಣುಮಗಳ ಕೊರಳಿಗೆ ಕೈಹಾಕಿ ಸರ ಕಿತ್ತುಕೊಂಡ. ಆತ ಯಾರು ಎಂಬುದು ರಿಗೂ ಗೊತ್ತಾಗಲಿಲ್ಲ, ಸರ ಕಳವಿನ ಬಗ್ಗೆ ಪೊಲೀಸರಿಗೆ ದೂರು ಕೊಡಲು ಆ ಣ್ಣುಮಗಳು ತನ್ನ ತಂದೆಯೊಂದಿಗೆ ಹೋದಳು. ಪೊಲೀಸರು ವ್ಯಂಗ್ಯವಾಗಿ ನಕ್ಕು, "ಇನ್ನೊಂದು ಹಾಕಿಕೊಂಡಿದ್ದೀಯಲ್ಲ? ಇಷ್ಟು ಸರಗಳು ನಿನಗೆ ಹೇಗೆ ಬಂದವು?" ಎಂದು ಮುಂತಾಗಿ ಕೇಳತೊಡಗಿದರು. ದೆ ಜೋರು ಮಾಡಲು ಯತ್ನಿಸಿದ. 'ಯಾರಯ್ಯ ನೀನು, ಹೆಚ್ಚು ಮಾತಾಡಿದರೆ ಒಳಗೆ ಹಾಕಿಬಿಡ್ತೀನಿ' ದು ಸಬ್ ಇನ್ಸ್‌ಪೆಕ್ಟರ್ ಅರಚಿದ. ಇದರಿಂದೆಲ್ಲ ಬೆಚ್ಚಿದ ತಂದೆ, ಮಗಳು ಮನೆಗೆ ಬಂದರು. ಅವತ್ತೇ ನ್ನೊಂದು ಚೈನೂ ಕಳ್ಳನ ಪಾಲಾಯಿತು. ಮನೆ ಬಿಟ್ಟು ಬೇರೆ ಮನೆಗೆ ಹೋಗಲು ತೀರ್ಮಾನಿಸಿದರು.


ಮೊದಲನೆಯದು ಮುಗ್ಧನೊಬ್ಬನ ಕತೆ, ಎರಡನೆಯದು ಪೊಲೀಸರ ಗೆಳೆಯನಾದ ಮನೆಯೊಡೆಯನ ಕಥೆ. ಡಿಗಳು ಎಲ್ಲೆಲ್ಲಿದ್ದಾರೆ, ಯಾರ್ಯಾರಿಗೆ ಗೆಳೆಯರಾಗಿದ್ದಾರೆ–ತಿಳಿಯಿತೆ?




ಕಾನೂನು ಮಾಡುವುದು ಅಗತ್ಯ. ಆದರೆ ಜಾರಿಗೊಳಿಸಲಾಗದ ಕಾನೂನು, ಭ್ರಷ್ಟತೆಯನ್ನು ಹೆಚ್ಚಿಸುವ ಕಾನೂನು, ಪೊಲೀಸರಿಗೆ ಬಲ ತಂದುಕೊಡುವ ಕಾನೂನು ಜನರನ್ನು ದಮನಗೊಳಿಸುತ್ತವೆ. ಅದು ಭ್ರಷ್ಟತೆಯ ಹಲವು ಬಗೆಯ ಅಭಿವ್ಯಕ್ತಿ. ಕಳ್ಳರು ಹೆಚ್ಚಾದರು ಎಂದು ಪೊಲೀಸರು, ಮನೆ ಬಿಡಿಸಲಾಗುವುದಿಲ್ಲ ಎಂದು ರೌಡಿಗಳು, ಕೊಟ್ಟ ಸಾಲ ಹಿಂದಿರುಗಿಸುವುದಿಲ್ಲ ಎಂದು ವಕೀಲರು– ಸಮಾಜದ್ರೋಹಿಗಳ ತಂಡವೇ ಬೆಳೆಯುತ್ತಿದೆ. ವೈದ್ಯರೂ ಹಾಗೇ. ಈಚೆಗೆ ವೈದ್ಯರ ಗ್ಯಾಂಗುಗಳೇ ಬೆಳೆದಿವೆ. ಕ್ಯಾಪಿಟೇಶನ್ ತೆತ್ತು ವೈದ್ಯರಾಗಿರುವವರು, ಲಂಚ ಕೊಟ್ಟು ನಂಬರ್ ಹಾಕಿಸಿಕೊಂಡು ಪಾಸಾದವರು, ಹಿಂಸೆಯನ್ನೇ ವೃತ್ತಿ ಮಾಡಿಕೊಂಡವರು–ಹೀಗೆ ನಾನಾ ತರಹದ ಜನ ವೈದ್ಯರಾಗಿದ್ದಾರೆ. ಇವರ ನಡುವೆ ಪ್ರಾಮಾಣಿಕರಾದ, ಸಜ್ಜನರಾದ, ದಯಾಮಯರಾದ ವೈದ್ಯರು ದಿಕ್ಕೆಟ್ಟು ಕೂರುವಂತಾಗಿದೆ.

ಕಿಡ್ನಿ ಸಮಸ್ಯೆಯನ್ನು ನೋಡಿ ಇದನ್ನೆಲ್ಲ ಹೇಳುತ್ತಿದ್ದೇನೆ. ಪುರುಷೋತ್ತಮ್ ಎಂಬ ಪ್ರಾಯದ ವ್ಯಕ್ತಿಗೆ ಕಿಡ್ನಿ ಬೇಕಾಗಿದೆ. ಇದು ಬೇಕಾಗಿದೆ ಎಂದರೆ "ಯಾವಾಗಲಾದರೂ ಸಿಕ್ಕರೆ ಆಯಿತು" ಎಂಬುದು ಅರ್ಥವಲ್ಲ, ಕಿಡ್ನಿ ಕೂಡಲೆ ಬೇಕು, ಸರಿಯಾದ ಸ್ಥಿತಿಯಲ್ಲಿರುವ ಕಿಡ್ನಿ ಬೇಕು–ಇಲ್ಲದಿದ್ದರೆ ಪುರುಷೋತ್ತಮ್ ಸಾಯುತ್ತಾರೆ. ಆದರೆ ಸರ್ಕಾರಿ ಕಾನೂನುಗಳಿಂದಾಗಿ ಕಿಡ್ನಿ ಸಿಕ್ಕುವುದು ಅಷ್ಟು ಸುಲಭವಲ್ಲ, ಸಂಬಂಧಿಕರು ಕೊಡುವುದಕ್ಕೂ ಸರ್ಕಾರದ, ತಜ್ಞರ ಅಪ್ಪಣೆ ಬೇಕು. ಅಧಿಕಾರಶಾಹಿ ಮತ್ತು ಸಂಕೀರ್ಣ ವ್ಯವಸ್ಥೆಯಲ್ಲಿ ಪ್ರಾಮಾಣಿಕನಾದ ಒಬ್ಬ ಮನುಷ್ಯ ಗಲ್ಲಿಗೇರುವುದನ್ನು ನಾವು ಕಾಫ್ಕಾನ 'ಟ್ರಯಲ್' ಕಾದಂಬರಿಯಲ್ಲಿ ಓದಿದ್ದೇವೆ. ಇದು ಅದಕ್ಕಿಂತ ಘೋರ! ಆ ಕಾದಂಬರಿಯಲ್ಲಿರುವುದು ಕೇವಲ ಅಧಿಕಾರಶಾಹಿ ಅಥವಾ ಕೋಟೆಗಟ್ಟಲೆ ಫೈಲುಗಳ ನರಕ–ಇಲ್ಲಿಯ ಎಲ್ಲ ಸಮಸ್ಯೆಯ ಮೂಲ ಭ್ರಷ್ಟತೆ; ಅದನ್ನು ತಡೆಗಟ್ಟಲು ಭ್ರಷ್ಟ ರಾಜಕಾರಣಿಗಳನ್ನು ಮಾಡಿಟ್ಟಿರುವ ಕಾನೂನುಗಳು! ಇದನ್ನು ಬರೆಯುವಾಗ ಪುರುಷೋತ್ತಮನನ್ನು ನೆನೆಯುತ್ತಿದ್ದೇನೆ. ಹಾಗೆಯೇ ನಮ್ಮ ಪಾತಕಿಗಳಾದ ವೈದ್ಯರು ಮತ್ತು ರಾಜಕಾರಣಿಗಳು ಇದಕ್ಕೆ ಏನು ಮಾಡುವುದು?

–ಆಗಸ್ಟ್ 9, 1995



ಪಂಚ ಮಹಾಪತಿವ್ರತೆಯರ ಸಾಲಿಗೆ ಸೇರಲಿರುವವರು



ಎಚ್.ಎಲ್. ಕೇಶವಮೂರ್ತಿ

ಅಣಕ

ಯಾರೂ ಸರ್ವಜ್ಞರಲ್ಲ. ಎಲ್ಲ ವಿಷಯಗಳಲ್ಲೂ ಪರಿಣತಿ ಹೊಂದಿರಲು ಸಾಧ್ಯ ಇಲ್ಲ. ಉನ್ನತ ಹುದ್ದೆಯಲ್ಲಿರುವವರು ಹಲವಾರು ರೀತಿಯ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸಬೇಕಾಗುತ್ತದೆ. ಅವರಿಗೆ ಸಲಹೆಗಾರರ ಅವಶ್ಯಕತೆ ಇದ್ದೇ ಇರುತ್ತದೆ. ಇವರು ಅಧಿಕೃತವಾಗಿರಬಹುದು ಅಥವಾ ಅನಧಿಕೃತವಾಗಿರಬಹುದು. ಮಾಧ್ಯಮ ಸಲಹೆಗಾರ, ಆರ್ಥಿಕ ಸಲಹೆಗಾರ ಇಂತಹ ಹುದ್ದೆಗಳು ಅಧಿಕೃತವಾದರೆ ಕೆಲವು ಅನಧಿಕೃತವಾದರೂ ಇವರಷ್ಟೇ ಅಥವಾ ಇವಕ್ಕಿಂತಲೂ ಹೆಚ್ಚು ಪ್ರಭಾವಶಾಲಿಯಾಗಿರುತ್ತವೆ. ಇವನ್ನ **kitchen cabinet** (ಕೋಣೆ ಸಂಪುಟ) ಎಂದು ಕರೆಯಲಾಗುತ್ತದೆ. ಅಣ್ಣಾ ಹಜಾರೆಯವರು ಹೇಳುವ ಹಾಗೆ ಕೆಲವು ಸಲ **remote control** ಗಳೂ ಇಂತಹದ್ದೇ ಕಾರ್ಯ ನಿರ್ವಹಿಸುತ್ತವೆ. ಈ ಸಲಹೆಗಾರರು, ಕೋಣೆ ಸಂಪುಟಗಳು, **remote control**ಗಳಿಗೆ, ಅವರು ಸಲಹೆ ಯಾರಿಗೆ ನೀಡಬೇಕಾಗಿದೆಯೋ ಅವರಿಗಿಂತ ಹೆಚ್ಚಿನ ಅನುಕೂಲಗಳಿವೆ. ಪ್ರಧಾನಮಂತ್ರಿಯೋ, ಮುಖ್ಯಮಂತ್ರಿಯೋ ಅಥವಾ ಮಂತ್ರಿಯೋ ಯಶಸ್ವಿ ಯೋಜನೆ ಜಾರಿಗೆ ತಂದರು ಎನ್ನಿ. 'ಈ ಮೊದ್ದುಮಣಿಗೆ ಇಂತಹ ಅದ್ಭುತ ಯೋಜನೆ ಹೊಳೆಯಲೂ ಸಾಧ್ಯವಿಲ್ಲ. ಇದರ ಹಿಂದೆ ಅವನು/ಳು ಇದ್ದಾನೆ/ಳೆ. ಇದು ರೂಪುಗೊಂಡಿರುವುದೇ ಅವರಿಂದ' ಎಂದು ಹೇಳಲಾಗುತ್ತದೆ. ಹಿನ್ನೆಲೆ ಯೋಜಕರೂ 'ಇದನ್ನು ರೂಪಿಸಿದ್ದು ನಾನು. ನನ್ನಿಂದಲೇ ಇದು ಸಾಧ್ಯ ಆಯಿತು' ಎಂದು ಬಡಾಯಿ ಕೊಚ್ಚಿಕೊಳ್ಳುವುದೇ ಹೆಚ್ಚು. ಒಂದು ವೇಳೆ ವಿಶೇಷ ಯೋಚನೆ ವಿಫಲವಾಗಿ ದೇಶಕ್ಕೆ ಮಾರಕ ಆಯಿತು ಎನ್ನಿ. 'ಇಂತಹವರ ಕೈಗೆ ಆಡಳಿತ ಚುಕ್ಕಾಣಿ ನೀಡಿದರೆ ಬೇರೇನು ಆಗಲು ಸಾಧ್ಯ' ಎಂದು ದೂಷಿಸುತ್ತಾರೆ. 'ನಾನು ಬೇಡ ಎಂದು ಸಾವಿರ ಸಲ ಬಡಕೊಂಡೆ. ನನ್ನ ಮಾತನ್ನು ಕೇಳಲಿಲ್ಲ. ಈಗ ನೋಡಿ ಹೀಗಾಯಿತು. ಅನುಭವಿಸಲಿ ಬಿಡಿ' ಎಂದು ಯೋಜನೆ ರೂಪಿಸಲು ಸಲಹೆ ನೀಡಿದ ಹಿನ್ನೆಲೆ ಯೋಜಕರೇ ಅವರಿವರ ಮುಂದೆ ಪರಿತಪಿಸುತ್ತಾರೆ. ಇವರ ಮಾತನ್ನು ಕೇಳಿದ ಯಾರಿಗಾದರೂ 'ಛೇ ಇವರ ಮಾತನ್ನು ಕೇಳಬೇಕಿತ್ತು' ಎಂದೇ ಅನ್ನಿಸುವುದು! ಸಫಲತೆಗಳಿಗೆಲ್ಲ ಇದು ಯಾರದ್ದೋ ಬಸಿರು ಎನ್ನುವ ಜನ ವಿಫಲತೆಗಳನ್ನೆಲ್ಲ ಇವರ ಕೊರಳಿಗೆ ಕಟ್ಟುತ್ತಾರೆ. ಇದರಿಂದ ಬೇಸರಿಸಿ ಏನಾದರೂ 'ಹೀಗೆ ಮಾಡಿ ಎಂದು ಸಲಹೆ ನೀಡಿದವರೇ ಅವರು' ಎಂದರೂ 'ಅವರು ಸಾವಿರ ಹೇಳುತ್ತಾರೆ. ನಿಮಗೆ ಬುದ್ಧಿ ಇರಲಿಲ್ಲವೆ' ಎಂಬ ತಿರುಗುಬಾಣವಾಗುತ್ತದೆ ಅದು. ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಸಲಹೆಗಾರರು, ಕೋಣೆ ಸಂಪುಟ ದವರು, ರಿಮೋಟ್ ಕಂಟ್ರೋಲ್ ಆದವರು ಯಾವಾಗಲೂ ಸುರಕ್ಷಿತ ವಲಯದಲ್ಲಿ ವಿಜೃಂಭಿಸುತ್ತಾರೆ!

ಗುಲ್ಬರ್ಗಾ ಜಿಲ್ಲಾ ಪರಿಷತ್ತಿನ ಇತ್ತೀಚಿನ ನಡಾವಳಿಗಳು ಇವೆಲ್ಲ ಚಿಂತನೆಗಳಿಗೆ ಕಾರಣ ಆಯಿತು. ಅಲ್ಲಿ ಮಹಿಳಾ ಸದಸ್ಯರದ್ದೇ ಬಹುಮತ ಅಂತೆ. ಅವರೆಲ್ಲರೂ ಪರಂಪರೆಯ ಮೌಲ್ಯಗಳ ಸಾಕಾರಮೂರ್ತಿಗಳು ಎಂದು ಹೇಳಬಹುದು. ಯಾಕೆಂದರೆ ಈಗಲೂ ಅವರಿಗೆ ಪತಿಯೇ ಪರದೈವ. ಪಂಚ ಮಹಾಪತಿವ್ರತೆಯರ ಸಾಲಿಗೆ ಇವರನ್ನೂ ಮುಂದೆ ಯಾರಾದರೂ ಸೇರಿಸಿದರೂ ಆಶ್ಚರ್ಯವೇನಿಲ್ಲ. ಅಂತಹ ನಡವಳಿಕೆಯನ್ನು ಅವರು ತೋರಿಸಿದ್ದಾರೆ. ರಾಜಕೀಯಕ್ಕೆ ಸಂಬಂಧಿಸಿದಂತೆ ಇದಕ್ಕೆ ಪೂರಕವಾದ ಅಂಶಗಳೂ ಬಹಳ ಇವೆ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕೆಲವು ಸ್ಥಾನ ಮಹಿಳೆಯರಿಗೆ ಮೀಸಲಾದದ್ದು ಸರಿಯಷ್ಟೆ. ಸದಸ್ಯೆಯರ ಪತಿದೇವರುಗಳ ಕ್ಷೇತ್ರವೂ ಇದರಲ್ಲಿ ಸೇರಿರಬಹುದು. ಜಿಲ್ಲಾ ಪಂಚಾಯತ್ ಮೇಲೆ ಕಣ್ಣಿಟ್ಟು ಬಹಳ ದಿವಸಗಳಿಂದ ಅದನ್ನು ಪೋಷಿಸಿಕೊಂಡು ಬಂದಿರುತ್ತಾರೆ. ಇಂತಹ ಕ್ಷೇತ್ರ ಇದಕ್ಕಿದ್ದಂತೆ ಮಹಿಳೆಯರಿಗೆ ಮೀಸಲು ಎಂಬುದನ್ನು ಕೇಳಿಯೇ ಅವರಿಗೆ ಆಘಾತವಾಗಿರಬಹುದು. ಯಾವುದೇ ಕಾರಣಕ್ಕೂ ಈ ಕ್ಷೇತ್ರ ಪರರ ಪಾಲಾಗಬಾರದು ಎಂಬ ಪರಂಪರಾಗತವಾದ ರಾಜಕೀಯ ರೂಢಿಯಂತೆ ತಮ್ಮ ಧರ್ಮಪತ್ನಿಯನ್ನು ಅಲ್ಲಿ ಪ್ರತಿಷ್ಠಾಪಿಸಿರಬಹುದು. ಸದಸ್ಯೆಯರು ಚುನಾಯಿತರಾಗಿದ್ದರೂ ತಮ್ಮ ಜಯವನ್ನು ಪತಿಪರಮಾತ್ಮನ ಪಾದಾರವಿಂದಗಳಿಗೆ ಅರ್ಪಿಸಿರಬಹುದು. ಇಂತಹ ಪತಿದೇವರು ತಮ್ಮೊಡನೆ ಜಿಲ್ಲಾ ಪರಿಷತ್ತಿನ ಸಭೆಗಳಿಗೆ ಹಾಜರಿರಬೇಕೆಂದು ಬಯಸಿದ್ದು ಸಹಜವೇ ಆಗಿತ್ತು. ಆದರೆ ಕಾನೂನಿನಲ್ಲಿ ಅನಧಿ ಕೃತ ವ್ಯಕ್ತಿಗಳು ಹಾಜರಾಗಲು ಅವಕಾಶ ಇರಲಿಲ್ಲ! ಕಾನೂನಿಗಿಂತ ತಮ್ಮ ನೈತಿಕ ತಿಳಿವಳಿಕೆಯೇ ಮುಖ್ಯ ಎಂದು ಇವರೆಲ್ಲ ಪರಿಭಾವಿಸಿರಬೇಕು. 'ಪತಿ ದೇವರು ಬರುವುದು ಬೇಡ ಎಂದ ಸಭೆಗೆ ನಾವು ಹೋಗುವುದು ಬೇಡ' ಎಂದು ಜಿಲ್ಲಾ ಪರಿಷತ್ ಸಭೆಗೆ ಸಾಮೂಹಿಕ ಬಹಿಷ್ಕಾರ ಹಾಕಿದರು.

ಸದಸ್ಯೆಯರ ಈ ನಿರ್ಧಾರದಿಂದ ಅಧ್ಯಕ್ಷರು ಇಕ್ಕಟ್ಟಿಗೆ ಸಿಲುಕಿದರು. ಸದಸ್ಯರಲ್ಲದವರನ್ನು ಸಭೆಗೆ ಸೇರಿಸುವುದು ಕಾನೂನು ವಿರೋಧ. ಇದನ್ನು ಹೇಳಿದರೆ ಪತಿ ಇಲ್ಲದೆ ಬರಲಾರೆವು ಎನ್ನುವ ಸಾಧ್ವೀ ಮಣಿಗಳು. ಪ್ರತಿ ತಿಂಗಳೂ ಸಭೆ ನಡೆಸಲೇಬೇಕು ಎನ್ನುತ್ತದೆ ಕಾನೂನು. ಸಕಲ ದಿಕ್ಕುಗಳಿಂದಲೂ ಕೀಡೆಗಳು ದಾಳಿ ಮಾಡಿದಂತಾಗಿರಬೇಕು ಅಧ್ಯಕ್ಷರಿಗೆ. ಇಂತಹ ಸಂದಿಗ್ಧದಿಂದ ಪಾರಾಗಲು ಸಮಾಲೋಚನೆ ನಡೆಸಿದರು. ಬಹಳ ಹೊತ್ತು ಚಿಂತನ ಮಂಥನ ನಡೆಸಿದ ನಂತರ ಖಾಜಿ ನ್ಯಾಯ ಮಾರ್ಗ ತೋರಿತು. ಅಧಿಕೃತ ಸಭೆಗೆ ಮೂರು ದಿವಸ ಮೊದಲು ಅನಧಿಕೃತ ಸಭೆ ನಡೆಸುವುದು. ಇದಕ್ಕೆ ದಂಪತಿಗಳ ಸಮೇತ ದಯಮಾಡಿಸಬಹುದು. ಅಧಿಕೃತ ಸಭೆಗೆ ಸದಸ್ಯೆಯರು ಮಾತ್ರ ಬರಬೇಕು ಎಂಬುದೇ ಆ ನ್ಯಾಯ ಆಗಿತ್ತು. ಇದು ಅಂಗೀಕಾರಕ್ಕೆ ಅರ್ಹವಾದ ಸೂತ್ರವೆನಿಸಿದ್ದರೂ ಕಾನೂನಿನಲ್ಲಿ ಅದಕ್ಕೂ ಅವಕಾಶ ಇರಲಿಲ್ಲ!

ಮುಂದಿನ ಸಾಮಾನ್ಯ ಸಭೆ. ಸದಸ್ಯೆಯರೆಲ್ಲರೂ ಹಾಜರಿದ್ದರು. (ಎಲ್ಲವೂ ಸೂತ್ರ ಮಹಾತ್ಮೆ!) ಸಭೆ ಪ್ರಾರಂಭ ಆಗುತ್ತಿದ್ದಂತೆ ಸದಸ್ಯೆಯೊಬ್ಬರು ಎದ್ದು ನಿಂತರು.

'ಇಲಾಖೆ ಮುಖ್ಯಸ್ಥರು ಹಂಗೇ ಕುಂದಿರ್ರಿ. ಅವರ ಕೂಡ ಬಂದಿರೋರು ಎದ್ದು ನನ್ ಕಡೀಗೆ ಬರ್ರಿ' ಅಂದರು!

ಸಿಬ್ಬಂದಿ ದಿಗ್ಭ್ರಾಂತಗೊಂಡಿತು. ಜನಪ್ರತಿನಿಧಿಯ ಮಾತು. ಬಿಸಿತುಪ್ಪ ಇದ್ದ ಹಾಗೆ. ಉಗುಳುವ ಹಾಗೂ ಇಲ್ಲ, ನುಂಗುವ ಹಾಗೂ ಇಲ್ಲ. ಒಬ್ಬರು ಧೈರ್ಯ ಮಾಡಿ ಹೇಳೇಬಿಟ್ಟರು - 'ಹಂಗೆಲ್ಲ ಆರ್ಡರ್ ಮಾಡಬ್ಯಾಡ್ರಿ ಮೇಡಮ್ಯಾರೆ. ನಮ್ಗೆ ಅವಮಾನ ಆಗುತ್ತೈತ್ರಿ'

ಮೇಡಮ್ಮಾರು ಉತ್ತರಿಸಲು ಸಿದ್ಧರಾಗೇ ಬಂದಿದ್ದರು. ಅವ ಮಾನ ಹೇಗೆ ಆಗುತ್ತೆ? ನಾವು ಕೇಳಿದ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಲು ನೀವು ಎರಡು ಮೂರು ಮಂದಿ ಸಹಾಯ ಪಡೆಯುತ್ತೀರಿ. ಅವರನ್ನು ಕರೆದುಕೊಂಡು ಸಭೆಗೆ ಬರುತ್ತೀರಿ. ನಮಗೆ ಸಹಾಯ ಮಾಡಲು ಎರಡು ಮೂರು ಜನರನ್ನಲ್ಲ, ಇರೋ ಒಬ್ಬ ಗಂಡನ್ನ ಕರೆದುಕೊಂಡು ಬರುತ್ತೀವಿ ಎಂದರೆ ಕಾನೂನಿನಲ್ಲಿ ಅವಕಾಶ ಇಲ್ಲ ಎನ್ನುತ್ತೀರಿ. ಅದುಹೇಗೆ ಕಾನೂನು ವಿರೋಧ ಆಗುತ್ತೆ? ಅಧಿಕಾರಿಗಳಿಗೆ ಒಂದು ಕಾನೂನು, ಸದಸ್ಯರಿಗೆ ಇನ್ನೊಂದು ಕಾನೂನು ಇದೆಯ ಎಂಬುದು ಅವರ ವಾದದ ಸಾರಾಂಶ ಆಗಿತ್ತು. ಈ ವಿಷಯವನ್ನು ಕಳೆದ ಮೀಟಿಂಗ್‌ನಲ್ಲೇ ಬಯಲು ಮಾಡಬೇಕು ಎಂದು ಇದ್ದರಂತೆ. ಆದರೆ ಮೀಡಿಯಾದವರು ಮಹಿಳೆಯರ ಬಾಯಿ ಬಂದ್ ಮಾಡಿ ಸಲ್ಲದ ಸುದ್ದಿ ಮಾಡಿದರು ಎಂಬ ಆಕ್ಷೇಪಣೆಯನ್ನೂ ಮಾಡಿದರು!

ಹಂಗಲ್ಲ ಮೇಡಮ್ಮದಿರಾ ಸರ್ಕಾರಿ ಸಿಬ್ಬಂದಿ ಸಭೆಗೆ ಬರೋಕೆ ಕಾನೂನಿನಲ್ಲಿ ಅವಕಾಶ ಇದೆ, ಆದ್ರೆ ನಿಮ್ಮ ಗಂಡಂದಿರು ಬರೋದಕ್ಕೆ ಅವಕಾಶ ಇಲ್ಲ ಅಂದ್ರೆ... 'ಕಾನೂನಿನಲ್ಲಿ ಅವಕಾಶ ಇಲ್ಲ ಅಂದ್ರೆ ಕಾನೂನನ್ನೆ ಬದಲಾವಣೆ ಮಾಡ್ರಿ' ಅನ್ನಬಹುದೋ ಏನೋ.... ಹಂಗೆ ಮಾಡಿದ್ರು ಅನ್ನಿ, ನನ್ನ ಗೆಲುವಿಗೆ ನನ್ನ ಪತ್ನಿಯೇ ಕಾರಣ ಅವಳೂ ನನ್ನೊತೆ ಮೀಟಿಂಗ್‌ಗೆ ಬರ್ಬೇಕು ಅಂತ ಸದಸ್ಯ ಮಹಾಶಯರು ತಕರಾರು ತೆಗೆದರೆ... ಗಟಾಣಿ ಹೆಂಡ್ತಿ ಏನಾದ್ರೂ ಇದ್ರೆ ನನ್‌ಬುಟ್ಟು ಅವ್ರುಳ್ಳಿಂಗೆ ಕರ್‍ಕೊಂಡೋಯ್ತಿ, ನಾನೂ ಬತ್ತೀನಿ ಅಂತ ಹೊಂಟು ನಿಂತ್ರೆ... ಯೋಚಿಸುತ್ತಾ ಯೋಚಿಸುತ್ತಾ ಇದ್ದಂಗೆ ತಲೆ ಎಲ್ಲ ಗೊಬ್ಬರ ಆಯ್ತು.....

ಸ್ವಾಮಿಗಳ ರಾಜ್ಯ

ನಾಲಿಗೆಯಲ್ಲಿ ಮಚ್ಚೆ ಇದ್ದರೆ ಹೇಳಿದ ಮಾತು, ಹಾಕಿದ ಶಾಪ ಫಲಿಸುತ್ತದೆ ಎನ್ನುವ ನಂಬಿಕೆ ಇದೆ. ಶ್ರೀರಾಮುಲು ಅವರ ನಾಲಿಗೆಯ ಮೇಲೂ ಅದು ಇರಬೇಕು. ಇತ್ತೀಚೆಗೆ 'ಕಾನೂನಿಗಿಂತ ಮಠಾಧೀಶರು ಹೆಚ್ಚು ಪ್ರಭಾವಶಾಲಿ' ಅನ್ನುವ ಹೇಳಿಕೆ ನೀಡಿದ್ದರು. ಅವರ ನಾಲಿಗೆಯ ಪ್ರಭಾವ ಇರಬೇಕು ವಿಶೇಷ ಆರ್ಥಿಕವಲಯಕ್ಕೆಂದು ಸರ್ಕಾರ ಮಂಗಳೂರು ಬಳಿಯ ಭೂಮಿ ವಶಪಡಿಸಿಕೊಂಡಿತ್ತು. ರೈತರ ಕಷ್ಟಕ್ಕೆ ಸ್ಪಂದಿಸಿಯೇ ಇರಲಿಲ್ಲ. ಎಷ್ಟು ಗೋಳಾಡಿದರೂ, ಹೋರಾಡಿದರೂ ಡೀನೋಟಿಫೈ ಮಾಡಲು ಒಪ್ಪಿರಲಿಲ್ಲ. ಆಯಕಟ್ಟಿನ ಸಮಯದಲ್ಲಿ ಪೇಜಾವರ ಶ್ರೀಗಳು ಎಂಟ್ರಿ ಕೊಟ್ಟರು. 'ಇಲ್ಲಿಂದ ಸಿಜ್ ತೊಲಗದಿದ್ದರೆ ಆಮರಣಾಂತ ಉಪವಾಸ ಮಾಡ್ತೀನಿ' ಅಂದರು. 'ಉಂಟೇ ಉಂಟೇ ಸ್ವಾಮೀಜಿ ನೀವು ಅಂದರೇನು, ಉಪವಾಸ ಕೂರುವುದು ಎಂದರೇನು ನಿಮ್ಮ ಶಾಪ ನಮಗೆ ತಗಲುತ್ತೆ. ನೀವು ಹೇಳಿದಂತೆ ಆಗಲಿ ಸ್ವಾಮೀಜಿ' ಎಂದು ಹೇಳುತ್ತಾ ಸರ್ಕಾರ ಸ್ವಾಮೀಜಿ ಪಾದಕ್ಕೆ ಬಿದ್ದು ಡೀನೋಟಿಫೈ ಮಾಡ್ತು! ಎಲ್ಲ ಸ್ವಾಮಿಗಳ ಮಾತಿಗೂ ಹೀಗೆ ಸರ್ಕಾರ ಪ್ರತಿಕ್ರಿಯಿಸುತ್ತಾ ಅಂದರೆ ಅದು ಹೇಗೆ ಸಾಧ್ಯ? ಎಲ್ಲ ಸ್ವಾಮಿಗಳನ್ನು ಒಂದೆ ತಕ್ಕಡಿಯಲ್ಲಿ ತೂಗಲು ಬರುವುದಿಲ್ಲ. ಬ್ರಾಹ್ಮಣ ಸ್ವಾಮಿಗಳಿಗೆ ಆದ್ಯತೆ ನೀಡುವುದು ಧರ್ಮ. ಶ್ರೀಕೃಷ್ಣ ಪರಮಾತ್ಮನ ಭಗವದ್ಗೀತೆಯಲ್ಲಿ ಹೇಳಿರುವಂತೆ ಅವನೇ ಸೃಷ್ಟಿಸಿದ ವರ್ಣಧರ್ಮವನ್ನು ಉಳಿಸಿ, ಬೆಳೆಸುವುದರಲ್ಲಿ ಎಲ್ಲ ಶ್ರೇಯಸ್ಸಿದೆ. ಈಗ ಗದುಗಿನ ತೋಂಟದಾರ್ಯ ಸ್ವಾಮಿಗಳ ಪೋಸ್ಕೊ ವಿರುದ್ಧ ದನಿ ಎತ್ತಿದ್ದಾರೆ. ಸುಮಾರು ಅರವತ್ತು ವಿವಿಧ ಮಠಗಳ ಸ್ವಾಮಿಗಳೂ ಇದಕ್ಕೆ ದನಿಗೂಡಿಸಿದ್ದಾರೆ. ಅವರ ಮಾತಿಗೂ ಗೌರವ ನೀಡಲಾಗುತ್ತದೆ. ಆದರೆ ಪೇಜಾವರ ಶ್ರೀಗಳು ಒಬ್ಬರೇ ಸಾಕು. ತೋಂಟದಾರ್ಯ ಸ್ವಾಮಿಗಳು ಅರವತ್ತು ಜನರ ಜೊತೆಗೂಡಿ ಬರಬೇಕು.

ಮಂಗಳೂರು-ಗದಗ ಎರಡೂ ಕಡೆ ರೈತರು ಚಳವಳಿ ನಡೆಸಿದರು. ಅವರ ಹೋರಾಟಕ್ಕೆ ಬೆಲೆಯೇ ಇಲ್ಲವೆ? ಪ್ರಜಾಪ್ರಭುತ್ವದ ಅಣಕ ಅಲ್ಲವೆ ಇದು? ಹೀಗೆ ಯೋಚಿಸುವ ಸಂಶಯ ಪಿಶಾಚಿಗಳು ಪಾಶ್ಚಾತ್ಯ ನಾಗರಿಕತೆಯ ಪ್ರಭಾವಕ್ಕೆ ಒಳಗಾಗಿರುವವರು. ಇಂತಹವರಿಗೆ ಈ ದೇಶದಲ್ಲಿ ಸ್ಥಾನ ಇಲ್ಲ, ವಿದೇಶಕ್ಕೆ ಹೋಗಿ ಸಾಯಲಿ!

ಶಾಲೆಗಳಲ್ಲಿ ಭಗವದ್ಗೀತೆ ಅಭಿಯಾನ ಎಷ್ಟು ಸೂಕ್ತ?

ಸೋಂದಿಮಠ ಮತ್ತು ಕರ್ನಾಟಕ ಸರ್ಕಾರದ ಮಂತ್ರಿಗಳು ಆರಂಭಿಸಿರುವ ಭಗವದ್ಗೀತೆ ಅಭಿಯಾನವನ್ನು ಶೈಕ್ಷಣಿಕ ತಜ್ಞರು ಮತ್ತು ಕೆಲವು ಜನಪರ ಸಂಘಟನೆಗಳು ವಿರೋಧಿಸುತ್ತಿವೆ. ಈ ಹಿನ್ನೆಲೆಯಲ್ಲಿ ಭಗವದ್ಗೀತೆಯ 14, 15ನೇ ಅಧ್ಯಾಯಗಳಲ್ಲಿ ಇರುವುದೇನು ಎಂಬುದನ್ನು ಆಳವಾಗಿ ಒಳಹೊಕ್ಕು ನೋಡಬೇಕಾಗಿದೆ. ಅಲ್ಲಿ ಪ್ರಸ್ತಾಪವಾಗಿರುವ ಮಾನವನ ತಾಮಸ, ರಾಜಸಿಕ, ಸಾತ್ವಿಕ ಗುಣಗಳು ಪ್ರಾಥಮಿಕ ಹಂತದ ಮಕ್ಕಳಿಗೆ ಬೋಧಿಸಲು ಅರ್ಹವೇ? ಏಕೆಂದರೆ ಅವು ಹಿಂದೂ ಧರ್ಮದ ಪ್ರೌಢ ಆಧ್ಯಾತ್ಮಿಕ ವಿಷಯಗಳಾಗಿವೆ. ಯಾವುದೇ ಪಠ್ಯಭಾಗ ಬೋಧನೆಗೆ ಅರ್ಹವಾಗಬೇಕಾದರೆ ಅದು ನಮ್ಮ ಧರ್ಮನಿರಪೇಕ್ಷ (Secular) ಸಂವಿಧಾನ ಮತ್ತು ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನ್ ರಿಸರ್ಚ್ ಟ್ರೈನಿಂಗ್ ಸೆಂಟರ್ (NCERT)ಗಳ ಅನುಮೋದನೆ ಪಡೆದಿರಬೇಕಾಗುತ್ತದೆ. ಆದರೆ ಭಗವದ್ಗೀತೆಯ ಮೇಲಿನ ಭಾಗಗಳು ಸಂವಿಧಾನ ಮತ್ತು NCERT ನಿಬಂಧನೆಗಳಿಗೆ ವಿರುದ್ಧವಾಗಿವೆ. ಹೀಗಿರುವುದರಿಂದ ವಿಚಾರವಂತರು, ಶಿಕ್ಷಣತಜ್ಞರು ಸರ್ಕಾರದ ಈ ಕ್ರಮವನ್ನು ಒಪ್ಪಲು ಸಾಧ್ಯವಿಲ್ಲ. ಶಿಕ್ಷಣ ಮಂತ್ರಿ ಕಾಗೇರಿಯವರು ಭಗವದ್ಗೀತೆಯ ಮೇಲಿನ ಭಾಗಗಳನ್ನು ಮತ್ತು ಸಂವಿಧಾನದ ಪೀಠಿಕೆ (Preamble)ನ್ನು ಇನ್ನೊಮ್ಮೆ ಆಳವಾಗಿ ಅಧ್ಯಯನ ಮಾಡಿ, ಶಿಕ್ಷಣ ತಜ್ಞರ ಸಲಹೆಯನ್ನು ಪಡೆದು ಮುಂದಿನ ಹೆಜ್ಜೆ ಇಡುವುದು ಸೂಕ್ತ ಎಂದು ಭಾವಿಸುತ್ತೇವೆ. ಇದನ್ನು ವಿರೋಧಿಸುವವರು 'ದೇಶ ಬಿಟ್ಟು ತೊಲಗಲಿ' ಎಂದು ಸರ್ವಾಧಿಕಾರಿ ಧೋರಣೆಯಿಂದ ಕಾಗೇರಿಯವರು ಅಪ್ಪಣೆ ಕೊಡಿಸಿದ್ದಾರೆ. ಇದು ಎಲ್ಲರ ದೇಶ. ಸಂವಿಧಾನ ಮತ್ತು ಶಿಕ್ಷಣ ತಜ್ಞರನ್ನು ಉಪೇಕ್ಷಿಸುವ ಕಾಗೇರಿಯವರೇ ದೇಶಬಿಟ್ಟು ತೊಲಗಬೇಕಾಗುತ್ತದೆ. ಶಿಕ್ಷಣದಲ್ಲಿ ಕಂಠಪಾಠವು ಎಳ್ಳಷ್ಟೂ ಸರಿಯಲ್ಲ. ಅದೂ ಸಂಸ್ಕೃತದಲ್ಲಿರುವ ಭಗವದ್ಗೀತೆ ಮಕ್ಕಳ ನೆನಪಿನ ಶಕ್ತಿಗೆ ಹೊರೆಯಾಗುವುದಲ್ಲದೇ ಅವರ ಮುಕ್ತ ಆಲೋಚನಾ ಶಕ್ತಿಯನ್ನು ಕುಂಠಿತಗೊಳಿಸುತ್ತದೆ.


ಭಗವದ್ಗೀತೆಯನ್ನು ಪಠ್ಯಪುಸ್ತಕದಲ್ಲಿ ಸೇರಿಸುವುದಾದರೆ, ಬೈಬಲ್, ಕುರಾನ್, ಮತ್ತಿತರ ಧಾರ್ಮಿಕ ಪವಿತ್ರ ಗ್ರಂಥಗಳನ್ನೂ ಸೇರಿಸಬೇಕಾಗುತ್ತದಲ್ಲವೇ...?

ಮೇಲಿನ ವಿಚಾರಗಳನ್ನು ಸಹೃದಯತೆಯಿಂದ ಕರ್ನಾಟಕ ಸರ್ಕಾರ ಗಮನಿಸಿ ಭಗವದ್ಗೀತೆ ಅಭಿಯಾನವನ್ನು ಹಿಂದಕ್ಕೆ ಪಡೆಯಲಿ.

-ಕರುಣಾ ಜೀವ ಕಲ್ಯಾಣ ಟ್ರಸ್ಟ್ (ರಿ). ದಾವಣಗೆರೆ

ಕಾಗೇರಿಯವರು "ಭಗವದ್ಗೀತೆ ವಿರೋಧಿಸುವವರು ಈ ದೇಶ ಬಿಟ್ಟು ತೊಲಗಲಿ" ಎಂದಿದ್ದಾರೆ. ಅವರ ಈ ಅಪ್ಪಣೆಯನ್ನು ನಾವು ಸ್ವಾಗತಿಸುತ್ತೇವೆ. ಯಾಕೆಂದರೆ ತಿಳಿದು ತಿಳಿದು ಈ ರೋಗಗ್ರಸ್ತ ಜಾತಿ, ಧರ್ಮಾಂಧತೆ, ಮೂಢನಂಬಿಕೆ, ಮನುಷ್ಯತ್ವವಿರದ ಕಾಗೇರಿ ತರಹದವರು ತುಂಬಿರುವ ಈ ಅನಾಗರಿಕ ದೇಶದಲ್ಲಿ ಬದುಕುವುದಕ್ಕೆ ನಮಗೆ ಇಷ್ಟವಿಲ್ಲ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಹಿಟ್ಲರ್‌ನ ಅನುಯಾಯಿಗಳಾದ ಕಾಗೇರಿಯಂತಹ ಚೆಡ್ಡಿಗಳು ದಿನಕ್ಕೆ ಹೊಸ ಹೊಸ ಹಿಡನ್ ಅಜೆಂಡಾಗಳನ್ನು ಜಾರಿಗೆ ತಂದು ಈ ದೇಶವನ್ನು ಇನ್ನಷ್ಟು ಕುಲಗೆಡಿಸುತ್ತಿರುವುದನ್ನು ನೋಡಿ ನಮಗೆಲ್ಲ ಬೇಸರವಾಗಿದೆ. ಕಾಗೇರಿ ತರಹದವರು ಶಿಕ್ಷಣ ಮಂತ್ರಿಯಾಗಿರುವ ಈ ನೆಲದಲ್ಲಿ ಹುಟ್ಟಿದ್ದಕ್ಕೆ ನಮಗೆ ಇವತ್ತು ಬಹಳ ನಾಚಿಕೆ ಆಗುತ್ತಿದೆ.

ಈ ನೆಲದಲ್ಲಿ ಸಂವಿಧಾನಕ್ಕೆ ಬೆಲೆ ಇಲ್ಲ ಅಂದರೆ ನಮ್ಮಂತಹ ವಿಚಾರವಂತ ಯುವಕರಿಗೂ ಬೆಲೆ ಇಲ್ಲ ಎಂದೇ ಅರ್ಥವಲ್ಲವೇ? ಆದ್ದರಿಂದ ನಾವು ನಮ್ಮ ಪರಿವಾರ ಸಮೇತ ಈ ದೇಶ ಬಿಟ್ಟು ಸಂತೋಷದಿಂದ ಈಗಲೇ ಹೋಗಲು ಸಿದ್ಧರಿದ್ದೇವೆ.

ಆದರೆ ನಮ್ಮಂಥವರಿಗೆ ಮಾನ್ಯ ಕಾಗೇರಿಯವರು ಪಾಸ್‌ಪೋರ್ಟ್, ವೀಸಾ ಮತ್ತು ವಿಮಾನ ಟಿಕೆಟ್‌ಗಳನ್ನು ಕೊಟ್ಟರೆ ಸಾಕು. ನಾವು ಸಾಧ್ಯವಾದಷ್ಟು ಬೇಗ ಕ್ಯೂಬಾಗೋ, ವೆನೆಜುವೆಲಾ ದೇಶಕ್ಕೋ ವಲಸೆ ಹೋಗುತ್ತೇವೆ. ಕೊಡ್ತೀರಾ ಕಾಗೇರಿ ಸಾಹೇಬರೆ?!


- ಸತ್ಯ ಟೂನಪ್ಪ, ಬೆಂಗಳೂರು

2011ನೇ ಜುಲೈ ಸಂಚಿಕೆಯಲ್ಲಿ 'ಮೈಸೂರಿನ ಖಾಕಿಗಳ ರಿಯಲ್ ಎಸ್ಟೇಟ್ ದಂಧೆ' ಬಗ್ಗೆ ವಿವರಿಸಿದ್ದೀರಿ, ಧನ್ಯವಾದಗಳು.

ಬಹುತೇಕ **White Collar** ಸರ್ಕಾರಿ ನೌಕರರು ತಮ್ಮ ಸಾಂಪ್ರದಾಯಿಕ (!) ಕಮಾಯಿ ಜೊತೆಗೆ ಇಂತಹ ದಂಧೆಯ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದಾರೆ. ನೌಕರರ ಹೆಸರಿನಲ್ಲಿ ಬಿಜೆಪಿ ಸರ್ಕಾರದ ಕೃಪಾಕಟಾಕ್ಷದಲ್ಲಿ ಈ ದಂಧೆ ಎಗ್ಗಿಲ್ಲದೇ ನಡೆಯುತ್ತಿದೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮೈಸೂರಿನ ಮತ್ತು ಮಂಡ್ಯದ ಘಟಕಗಳಲ್ಲಿ ನೌಕರರಿಗೆ ನಿವೇಶನ ಹಂಚುತ್ತೇವೆಂದು ವಸತಿ ನಿಯಮಗಳನ್ನು ಉಲ್ಲಂಘಿಸಿ ಕೋಟ್ಯಂತರ ರೂ. ನುಂಗಿ ನೀರು ಕುಡಿದಿದ್ದಾರೆ. ಪರಿಣಾಮವಾಗಿ ಇತ್ತ ನಿವೇಶನವೂ ಇಲ್ಲದೆ, ಅತ್ತ ಹಣವೂ ಇಲ್ಲದೆ ಮೋಸ ಹೋದ ನೌಕರರು ಬಾಯಿ-ಬಾಯಿ ಬಡಿದುಕೊಳ್ಳುತ್ತಿದ್ದಾರೆ.

ಮುಖ್ಯಮಂತ್ರಿಗಳ ಜೊತೆ ಪೋಸು ಕೊಡುವ, ತನ್ನ ನೌಕರರಿಗೆ ತಿಂಗಳಿಗೆ ಸರಿಯಾಗಿ ಸಂಬಳ ಕೊಡಲಾಗದಿರುವ ಸರ್ಕಾರವನ್ನು ಹೊಗಳುವ ಸಂಘದ ಅಧಿಕಾರಿಗಳಿಗೆ ಭ್ರಷ್ಟ ರಾಜಕಾರಣಿಗಳ ಬೆಂಬಲವಿದೆ. ಸರಿಯಾಗಿ ತನಿಖೆ ನಡೆಸಿದರೆ ಯಾವ ಹಗರಣಕ್ಕೂ ಕಮ್ಮಿ ಇಲ್ಲದ ಈ ಪ್ರಕರಣ ಸರ್ಕಾರದ ಬಣ್ಣ ಬಟಾ ಬಯಲು ಮಾಡಲಿದೆ.

- ಆನಂದ ಮಿತ್ರ, ಮಂಡ್ಯ



ಶಿವಣ್ಣನ ಸುತ್ತ ರೌಡಿಗಳ ಹುತ್ತ!

ಇದು ವಿಚಿತ್ರವಾಗಿ ಕಂಡರೂ ಆತಂಕ ಹುಟ್ಟಿಸುವಂತಹ ವಿಚಾರವಂತೂ ...ದು.

ಅದೇನೆಂದರೆ, ಈಗ ನೂರು ಸಿನಿಮಾಗಳಲ್ಲಿ ನಟಿಸಿ, ಇನ್ನೂ ಹನ್ನೆರಡು ...ಮಾಗಳಿಗೆ ಬುಕ್ ಆಗಿರುವ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ...ದೆಮುಂದೆಲ್ಲಾ ಬೆಂಗಳೂರಿನ ರೌಡಿ ಪಡೆಯೊಂದು ಹೆಡೆಯೆತ್ತಿ ಕಾವಲು ...ತಿರುವುದು!

ಶಿವಣ್ಣನಿಗೆ ರೌಡಿಸಂ ಸಬ್ಜೆಕ್ಟ್ ಹೊಂದುವುದರಿಂದ ಮತ್ತು ಜನ ಕೂಡಾ ...ತಹ ಚಿತ್ರಗಳನ್ನೇ ಇಷ್ಟಪಡುವುದರಿಂದ ಅವರು ಹೆಚ್ಚು ಅಂಥವೇ ಸಿನಿಮಾಗಳಲ್ಲಿ ...ಸುತ್ತಿದ್ದಾರೆ. ಆದರೆ ನಿಜ ಬದುಕಿನಲ್ಲೂ ಅವರ ಸುತ್ತ ರೌಡಿಗಳು ಗ್ಯಾಂಗು ...ಕೊಂಡು ನಿಂತಿರುವುದು ಆತಂಕದ ಬೆಳವಣಿಗೆಯಾಗಿದೆ.


ಲಿಂಕು ಸಿಕ್ಕಿದ್ದು ಹೀಗೆ...



ಶಿವರಾಜ್‌ಕುಮಾರ್ 'ಎ.ಕೆ. 47' ಸಿನಿಮಾದಲ್ಲಿ ನಟಿಸುವ ...ಕ ಅವರ ಸುತ್ತಲಿನ ಜಗತ್ತೇ ಬೇರೆಯಾಗಿತ್ತು. ಎಲ್ಲೇ ಹೋಗಲಿ ...ಲಿ ಅವರ ಸುತ್ತ 'ರಾಜ್ ಕುಟುಂಬ' ಹತ್ತಿರದಿಂದ ಬಲ್ಲವರೇ ...ತ್ತಿದ್ದರು. ಆದರೆ ಅದಾದ ನಂತರ ಅವರ ಸುತ್ತ ಅಂಡರ್‌ವರ್ಲ್ಡ್ ...ಭಿಮಾನಿಗಳ ಪಡೆಯೊಂದು ಹುಟ್ಟಿಕೊಂಡಿತು. ಅದಕ್ಕೆ ...ರಣನಾದವನು ಶ್ರೀಕಾಂತ್ ಎಂಬ ವ್ಯಕ್ತಿ. ಈತ ಕೈಲಿ ಮಚ್ಚು ...ಂಗು ಹಿಡಿದು ನೇರವಾಗಿ ಬೀದಿಗಿಳಿಯದಿದ್ದರೂ, ಪುಡಿ ...ಡಿಗಳನ್ನು, ಮೀಟರ್ ಬಡ್ಡಿ ಮಾಫಿಯಾದವರನ್ನು ಪೋಷಿಸುತ್ತಾ ...ದವನು. ಹಾಗೆ ಪೋಷಿಸಿದ ರೌಡಿಗಳನ್ನು ಬಳಸಿಕೊಂಡು ಚಿತ್ರರಂಗದಲ್ಲಿ ...ಭ ಪಡೆದವನು.

ಒಂದು ಕಾಲದಲ್ಲಿ ರಾಜಾಜಿನಗರದ ಅರೆರಾಜಕಾರಣಿ ಕಂ ಸಮಾಜಸೇವಕ ...ಮಮಂದಿರ ಕಿಟ್ಟಿಯ ಟೀಂನಲ್ಲಿ ಗುರುತಿಸಿಕೊಂಡಿದ್ದ ಶ್ರೀಕಾಂತ್ ...ನಂತರ ಕಾಣಿಸಿಕೊಂಡಿದ್ದು ನಿರ್ಮಾಪಕ ಕನಕಪುರ ಶ್ರೀನಿವಾಸ್‌ರ ...ಕಟ್ಟಿನಲ್ಲಿ, ಶ್ರೀನಿವಾಸ್ ತಮ್ಮ 'ಆರ್‌ಎಸ್' ಬ್ಯಾನರ್ ಅಡಿ ...ಸದ ಎಲ್ಲ ಚಿತ್ರಗಳಿಗೂ ಇದೇ ಶ್ರೀಕಾಂತ್ ಕಾರ್ಯಕಾರಿ ...ರ್ಮಾಪಕ.

ಸಂಪೂರ್ಣ ಹಿಡಿತ...



ಕನಕಪುರದ ಬ್ರಾಹ್ಮಣರ ಹುಡುಗ ಶ್ರೀಕಾಂತ್‌ಗೂ ಬೆಂಗಳೂರು ...ಡರ್‌ವರ್ಲ್ಡ್‌ಗೂ ಅವಿನಾಭಾವ ನಂಟು. ಶ್ರೀಕಾಂತ್‌ಗೆ ಹೆಣ್ಣು ...ಟ್ಟ ಮಾವ ನಾಗರಾಜ ರಾವ್ ಸಾಹಸಸಿಂಹ ವಿಷ್ಣುವರ್ಧನ್‌ಗೆ ...ಸ್‌ಮೇಟಾಗಿದ್ದವರು. ವೈಶ್ಯ ಬ್ಯಾಂಕ್‌ನಲ್ಲಿ ಉದ್ಯೋಗಕ್ಕಿದ್ದು ಈಗ ನಿವೃತ್ತರಾಗಿದ್ದಾರೆ. ...ದೇ ನಾಗರಾಜ ರಾವ್‌ರ ಮಗ ವಾಸು ಚಾಮರಾಜಪೇಟೆ ಫೈನಾನ್ಸ್ ದಂಧೆಯ ...ಮುಖ ಏಜೆಂಟ್. ಗವೀಪುರ ಗುಟ್ಟಹಳ್ಳಿ, ಸಮೀರಪುರ ಸುತ್ತಲಿನ ಏರಿಯಾಗಳಲ್ಲಿ ...ವಾದೇವಿ ನಡೆಸುವ ವಾಸುಗೆ ಭಾವ ಶ್ರೀಕಾಂತನಿಂದ ಹಣ ಪೂರೈಕೆಯಾಗುತ್ತದೆ.

ಈ ಕಾರಣಕ್ಕೇ ಈತ ಶಿವಣ್ಣನ ಕಾರ್ಯಕ್ರಮಗಳಿಗೆ ಲೋಡುಗಟ್ಟಲೆ ಜನರನ್ನು ಸೇರಿಸುತ್ತಾನೆ. 'ಹುಲಿ' ಸಿನಿಮಾದ ಪ್ರೊಡ್ಯೂಸರ್ ಚಾಮರಾಜಪೇಟೆ ಸುಧಿ ಕೂಡಾ ಶ್ರೀಕಾಂತನ ಕಜಿನ್ನು.



ಈಗ ಇದೇ ಶ್ರೀಕಾಂತ್ 'ಶಿವ ಸಮಿತಿ' ಎಂಬ ಸಂಘಟನೆಯೊಂದರ ಸೂತ್ರಧಾರ. ಇದನ್ನು ಹುಟ್ಟುಹಾಕಿದ್ದು ತಾನೇ ಎಂಬಂತೆ ಶ್ರೀಕಾಂತ್ ಹೇಳಿಕೊಳ್ಳುತ್ತಿದ್ದಾರಾದರೂ ಅಸಲಿಗೆ ಶಿವಣ್ಣನ ಹೆಸರಲ್ಲಿ ಮೊಟ್ಟ ಮೊದಲನೆಯ ಅಭಿಮಾನಿ ಸಂಘ ಆರಂಭಿಸಿದ್ದು ಕುಳ್ಳ ವೆಂಕಟೇಶ್ ಎಂಬಾತ.

ಶ್ರೀಕಾಂತ್ ವಿರುದ್ಧ ಗಾಂಧಿನಗರದಲ್ಲಿ ಈಗ ಸಣ್ಣನೆಯ ಆರೋಪ ಕೇಳಿಬರುತ್ತಿದೆ. ಅದೇನೆಂದರೆ ಶಿವಣ್ಣ ಯಾವುದೇ ಒಂದು ಚಿತ್ರಕ್ಕೆ ಸಹಿ ಮಾಡುವ ಮುನ್ನ ಅದಕ್ಕೆ ಶ್ರೀಕಾಂತ್‌ನ ಒಪ್ಪಿಗೆ ಪಡೆಯುತ್ತಾರಂತೆ. ಸದ್ಯ ಶಿವಣ್ಣ ಕಾಲ್‌ಶೀಟ್ ನೀಡಿರುವ ಹನ್ನೆರಡು ಚಿತ್ರಗಳಲ್ಲಿ ಬರೋಬ್ಬರಿ ಆರು ಚಿತ್ರಗಳು ಶ್ರೀಕಾಂತ್ ಕಡೆಯದ್ದೇ ಎಂದರೆ ನಂಬಲೇಬೇಕು. ಇವತ್ತು ಒಂದು ನರಪಿಳ್ಳೆ ಕೂಡಾ ಶ್ರೀಕಾಂತ್‌ರನ್ನು ದಾಟಿ ಶಿವಣ್ಣನ ಬಳಿ ಸುಳಿಯುವಂತಿಲ್ಲ.

ಮೊದಲಾದರೆ ಶಿವಣ್ಣ ನಟಿಸುವ ಚಿತ್ರಗಳ ಕಥೆಯನ್ನು ಖುದ್ದು ಡಾ. ರಾಜ್ ಮತ್ತು ವರದಪ್ಪ ಕೇಳಿ ಡಿಸೈಡ್ ಮಾಡುತ್ತಿದ್ದರು. ಪತ್ನಿ ಗೀತಾ ಹಣಕಾಸಿನ ವ್ಯವಹಾರ ನೋಡಿಕೊಳ್ಳುತ್ತಿದ್ದರು. ಆದರೆ ಈಗ ಪ್ರತಿಯೊಂದರಲ್ಲೂ ಶ್ರೀಕಾಂತ್ ಆಂಡ್ ಟೀಂನ ಮಧ್ಯಸ್ಥಿಕೆ ಇದ್ದೇ ಇರುತ್ತದೆ. ರಾಘವೇಂದ್ರ ರಾಜ್‌ಕುಮಾರ್ ಈಗ ಪುನೀತ್ ನಟಿಸುವ ಸಿನಿಮಾಗಳ ಕಾಲ್‌ಶೀಟು, ತಮ್ಮ ಸ್ವಂತ ನಿರ್ಮಾಣದ ಚಿತ್ರಗಳು ಮತ್ತು ಡಾ. ರಾಜ್ ಇಂಟರ್‌ನ್ಯಾಷನಲ್ ಹೋಟೇಲಿನ ಉಸ್ತುವಾರಿಯಲ್ಲೇ ಹೆಚ್ಚು ಬ್ಯುಸಿಯಾಗಿರುವುದರಿಂದ ಈಗ ಶಿವಣ್ಣನ ಮೇಲೆ ಈ ರೌಡಿ ಪಡೆಯೇ ಸಂಪೂರ್ಣ ಹಿಡಿತ ಸ್ಥಾಪಿಸಿದೆ.

ಅದಕ್ಕೆ ಒಂದು ಉದಾಹರಣೆ 'ಮೈಲಾರಿ' ಚಿತ್ರದ ಟೈಟಲ್ ವಿವಾದ.

ಇದೇ ಕನಕಪುರ ಶ್ರೀನಿವಾಸ್ ಮತ್ತು ಶ್ರೀಕಾಂತ್ ಜಂಟಿಯಾಗಿ ನಿರ್ಮಿಸಿದ 'ಮೈಲಾರಿ' ಚಿತ್ರದ ಟೈಟಲ್ ಮೊದಲು ಅಶ್ವಿನಿ ರಾಮ್‌ಪ್ರಸಾದ್ ಬಳಿಯಿತ್ತು. "ಏನೇ ಮಾಡಿದರೂ ಬೇರೆ ನಿರ್ಮಾಪಕರಿಗೆ ನಾನು ಈ ಟೈಟಲನ್ನು ಬಿಟ್ಟುಕೊಡುವುದಿಲ್ಲ" ಎಂದು ರಾಮ್‌ಪ್ರಸಾದ್ ಘೋಷಿಸಿದ್ದರು. ಸ್ವತಃ ಶಿವಣ್ಣನೇ ಕೇಳಿಕೊಂಡರೂ ಅವರು ಜಪ್ಪಯ್ಯ ಅಂದಿರಲಿಲ್ಲ. ಆಗ ಶ್ರೀಕಾಂತ್ ಶಿವಣ್ಣನ ಮತ್ತೊಬ್ಬ ಪರಮ ಅಭಿಮಾನಿ ಚಾಮರಾಜಪೇಟೆ ಶ್ರೀನಿಧಿ ಅಲಿಯಾಸ್ ದೋಸೆ ಜೊತೆಗೆ ಹತ್ತು ಮಂದಿಯನ್ನು ಕಳಿಸಿದ. ರಾಮ್‌ಪ್ರಸಾದ್ ಬಳಿ ಹೋದ ದೋಸೆ ನೇರವಾಗಿ ಅವರ ಕುತ್ತಿಗೆಗೇ ಲಾಂಗು ಮಡಗಿ "ಟೈಟಲ್ ಕೊಡ್ಲಿಲ್ಲ ಅಂದ್ರೆ ಎತ್‌ಬಿಡ್ತೀನಿ" ಎಂದು ಜೋಗಿ ಸಿನಿಮಾದ ಮಾದೇಶನಂತೆ ಅಬ್ಬರಿಸಿ ಬಂದ. ಜೀವಭಯಕ್ಕೆ ಬಿದ್ದ ರಾಮ್‌ಪ್ರಸಾದ್ ಟೈಟಲ್ ಕೊಟ್ಟು ಕೈತೊಳೆದುಕೊಂಡರು.

ದುರಂತವೆಂದರೆ ತನಗಾಗಿ 'ಜೋಗಿ' ಸಿನಿಮಾವನ್ನು ನಿರ್ಮಿಸಿ, ತನ್ನ ವೃತ್ತಿ ಬದುಕಿಗೆ ಹೊಸ ಹಾದಿ ಕಲ್ಪಿಸಿಕೊಟ್ಟ ನಿರ್ಮಾಪಕನಿಗೆ ತನ್ನದೇ ಅಭಿಮಾನಿಗಳು ಧಮಕಿ ಹಾಕಿದ ವಿಷಯ ಶಿವಣ್ಣನ ಗಮನಕ್ಕೇ ಬರಲಿಲ್ಲ.

ಇದಾ ಅಭಿಮಾನ?

ಇವತ್ತು ಬೆಂಗಳೂರಿನ ನಟೋರಿಯಸ್ ಪಾತಕಿ ಸಹೋದರರಾದ ರಾಮ-ಲಕ್ಷ್ಮಣ ಇಬ್ಬರೂ ಮಾಗಡಿ ರಸ್ತೆ, ಸುಂಕದಕಟ್ಟೆ ಗಲ್ಲಿಗಲ್ಲಿಗಳ ತುಂಬಾ 'ಶಿವಣ್ಣನ ಹುಟ್ಟುಹಬ್ಬಕ್ಕೆ ಶುಭಾಶಯಗಳು' ಎಂಬ ಕಟೌಟುಗಳನ್ನು ತಮ್ಮ ಫೋಟೋ ಸಮೇತ ತಗುಲುಹಾಕಿಕೊಂಡಿದ್ದಾರೆ. ಮೋಸ್ಟ್ ವಾಂಟೆಡ್ ಕ್ರಿಮಿ ಮುಲಾಮನ ಭಂಟರು, ಶಿವನಹಳ್ಳಿ ಪ್ರಕಾಶ ಜೊತೆಗೆ ತಿಮ್ಮೇನಹಳ್ಳಿಯ ರೌಡಿ ಸಂತತಿ ಕೂಡಾ ಶಿವಣ್ಣನ ಹೆಸರನ್ನು ಎನ್‌ಕ್ಯಾಷ್ ಮಾಡಿಕೊಳ್ಳುತ್ತಿವೆ. 'ನಂದ' ಸಿನಿಮಾ ಪ್ರೊಡ್ಯೂಸ್ ಮಾಡಿ, ಅದರಲ್ಲಿ ಸ್ವತಃ ನಟಿಸಿದ ಒಂದೇ ಕಾರಣಕ್ಕೆ ಭೂಗತ ಪಾತಕಿ ಮಾಹಿನ್ ಕೂಡ ಇವತ್ತು 'ರಾಜ್‌ಕುಮಾರ್ ಫ್ಯಾಮಿಲಿ ನನಗೆ ತುಂಬಾ ಕ್ಲೋಸು' ಎಂದು ಹೇಳಿಕೊಂಡು ಮೈಲೇಜು ಪಡೆಯುತ್ತಿದ್ದಾನೆ.

ಇವತ್ತು ಶಿವರಾಜ್‌ಕುಮಾರ್ ನಟಿಸಿದ ಸಿನಿಮಾವೊಂದು ರಿಲೀಸಾಯಿತೆಂದರೆ ಥಿಯೇಟರಿನ ಮುಂದೆ ಕಟೌಟು ಕಟ್ಟುವುದರಿಂದ ಹಿಡಿದು ಪಟಾಕಿ ಸಿಡಿಸುವವರ ತನಕ ಬಹಳಷ್ಟು ಜನ ಪೋಲಿಸ್ ಠಾಣೆಗಳಲ್ಲಿ ಸ್ಲೇಟು ಹಿಡಿದು ಬಂದವರೇ ಇರುತ್ತಾರೆ.


ರೌಡಿಯಾದರೇನು, ಸಂತನಾದರೇನು ತನ್ನನ್ನು ಇಷ್ಟಪಡುವವರಿಗೆ 'ಅಭಿಮಾನಿ' ಎಂಬ ಪಟ್ಟ ಕೊಟ್ಟು ಅವರನ್ನೆಲ್ಲ ಪ್ರೀತಿಯಿಂದ ಮಾತಾಡಿಸುವುದು ಶಿವಣ್ಣನ ರೀತಿ. ಇವತ್ತು ತನ್ನ ಭಂಟ ಶ್ರೀಕಾಂತ್ ಕರೆದ ಎಂಬ ಒಂದೇ ಕಾರಣಕ್ಕೆ ಶಿವಣ್ಣ ತಮಗೆ ಗೊತ್ತಿದ್ದೋ, ಗೊತ್ತಿಲ್ಲದೆಯೋ ರೌಡಿಶೀಟರ್‌ಗಳ ಖಾಸಗೀ ಸಮಾರಂಭಗಳಲ್ಲೂ ಕಾಣಿಸಿಕೊಳ್ಳುತ್ತಿರುವುದು ದುರದೃಷ್ಟಕರ.

ಶಿವಣ್ಣ ತನ್ನ ಸುತ್ತ ಇರುವವರ ಬಗ್ಗೆ ಎಚ್ಚರ ವಹಿಸಿದರೆ ಎಲ್ಲರಿಗೂ ಉತ್ತಮ. ❖

ಸಿನಿಮಾ ಮಂದಿಯ ತೆರಿಗೆ ರೇಡಿನಲ್ಲಿ ಸಿಕ್ಕಿದ್ದೇನು?

ತೆರಿಗೆ ಕಟ್ಟದ ಸಿನಿಮಾ ಮಂದಿ ಈಗ ದಿಗಿಲು ...ಂಡಿದ್ದಾರೆ!

ಕೆಲ ದಿನಗಳ ಹಿಂದೆ ಕಿರುತೆರೆ ಮತ್ತು ಹಿರಿತೆರೆಯ ...ಗ್ಗಜರುಗಳ ಮನೆ ಮೇಲೆ ಆದಾಯ ತೆರಿಗೆ ಅಧಿಕಾರಿಗಳು ...ಕಾಏಕಿ ದಾಳಿ ಮಾಡಿದರು. ನಿರ್ಮಾಪಕ ಗಂಡುಗಲಿ ...ಬ್ರಿ ಮಂಜ, ವಿತರಕ ಭಾಷಾ, ಕಿರುತೆರೆಯ ರವಿಕಿರಣ್ ...ತ್ತು ಸಿಹಿಕಹಿ ಚಂದ್ರು ದಾಳಿಗೊಳಗಾದವರು. ಈ ಹಿಂದೆ ...ಮು, ರಮೇಶ್ ಯಾದವ್, ಅಶ್ವಿನಿ ರಾಮ್‌ಪ್ರಸಾದ್, ...ಜೇಶ್ವರಿ ಸಂಸ್ಥೆ ಸೇರಿದಂತೆ ಚಿತ್ರರಂಗದ ಹಲವರು ಆದಾಯ ...ರಿಗೆ ಅಧಿಕಾರಿಗಳ ರೇಡುಗಳನ್ನು ...ಡವರು. ಆದರೆ ಈ ನಾಲ್ಕೂ ಜನಕ್ಕೆ ...ದು ಹೊಸ 'ಅನುಭವ'!



...ಕೊಬ್ರಿ ಮನೆ ಖಾಲಿಖಾಲಿ!

"ಯಾರೋ ಫಿಟ್ಟಿಂಗ್ ಇಟ್ಟು ನಮ್ಮನೆಗೆ ...ನ್‌ಕಂಟ್ಯಾಕ್ಸ್ ನೋರ್‍ನ ಕಳ್ಸೌರೆ. ಅದು ...ರು ಅಂತಾನೂ ನಂಗೊತ್ತು, ನಮ್ಮನೆ ...ಲೆ ರೇಡಾಯ್ತದೆ ಅಂತ ನಂಗೆ ಒಂದ್ ವಾರ ಮುಂಚೇನೇ ...ತ್ತಿತ್ತು, ಒಂದಷ್ಟು ಕೊಲಾಟ್ರಲ್ ಪೇಪರ್ಸ್, ಮನೇಲಿ ...5 ಸಾವಿರ ಕ್ಯಾಷು, ಆಫೀಸ್‌ನಲ್ಲಿ ಒಂದು ಲಕ್ಷ ದುಡ್ಡು, ...5 ಚೆಕ್, ಡಾಕ್ಯುಮೆಂಟ್ಸು ಎಲ್ಲಾ ಎತ್ತಾಕೊಂಡ್ರು. ನಂಗೆ ...ದೇ ಟೈಂಗೆ ಒಂದೇ ಸಮ ಫೋನ್ ಬರ್ತಿದ್ವು. 'ಆರಾಮಾಗಿ ...ತಾಡಿ ತೊಂದ್ರೆ ಇಲ್ಲ' ಅಂದ್ರು. ಸಿನಿಮಾದಲ್ಲಿ ...ರೋರ್‍ನೋಹಂಗೇನೂ ಅವ್ರು ನಡ್ಕೊಳ್ಳಿಲ್ಲ. ಕಡೆಗೆ ಸಿಕ್ಕಿದ್ದಷ್ಟು ...ಗೊಂಡೋದ್ರು. ನನ್ನತ್ರ ತಾನೆ ಏನೈತೆ ಅಂತಾದ್ದು, ಮೊನ್ನೆ ...ಸು ಮಾಡಿದ 'ಜಾಲಿ ಬಾಯ್' ಸಿನಿಮಾಗೆ ಖರ್ಚು ...ಮಾಡಿದ ಪ್ರಿಂಟ್ ಕಾಸೂ ಕೈಗತ್ತಿಲ್ಲ, ವಿಷ್ಣು ಸಾರ್‌ಗೆ ಎರಡು ...ಮಾಡ್ದು ಸೇರಿ 50 ಲಕ್ಷ ಬ್ಯಾಲೆನ್ಸ್ ಕೊಡಬೇಕಿತ್ತು, ...ರತಿ ಮೇಡಂ ಸ್ವಲ್ಪ ದಿನಕ್ಕೆ ಮುಂಚೆ ಫೋನ್ ಮಾಡಿ ...ಳುದ್ರು, 'ಸದ್ಯಕ್ಕೆ ಸಿಕ್ಕಾಪಟ್ಟೆ ಲಾಸ್‌ನಲ್ಲಿದ್ದೀನಿ, ಮುಂದೆ ...ಟ್ಕೊಡ್ತೀನಿ' ಅಂದೆ. ಪಾಪ ಸುಮ್ನಾದ್ರು...

...ಇಷ್ಟಕ್ಕೂ ನಾನು 2008ರಲ್ಲಿ 22 ಲಕ್ಷ, 09-10ರಲ್ಲಿ 9.5 ಲಕ್ಷ ಟ್ಯಾಕ್ಸ್ ಕಟ್ಟಿದೀನಿ. ಆದ್ರೂ ರೇಡ್ ಮಾಡಕ್ಕೆ ಬಂದು ಪೇಪರ್‌ಗಳನ್ನೆಲ್ಲಾ ಹೊತ್ಕೊಂಡೋಗವ್ರೆ. ನಮ್ ಲಾಯರ್ ಮೂಲಕ ಎಲ್ಲ ವಾಪಸ್ ಪಡ್ಕೊತೀನಿ. ಫಿಟ್ಟಿಂಗ್ ಇಟ್ಕೋರ್‍ನ್ನೂ ನೋಡ್ಕತೀನಿ. ನಾನು ಸತ್‌ಪ್ರಜೆ"- ಇದು ಕೊಬ್ರಿ ಮಂಜಣ್ಣನ ರೇಡಾನುಭವ!


ರವಿಕಿರಣ್

"ಈ ಇನ್‌ಕಮ್ ಟ್ಯಾಕ್ಸ್‌ನೋರು ನನ್ನ ಮೇಲೆ ಯಾಕೆ ಮುಗಿಬಿದ್ದರೋ ಗೊತ್ತಿಲ್ಲ, ನಾನು ನನ್ನ ಹೆಸರಲ್ಲಿ ಅಂತಾ ಹೇಳಿಕೊಳ್ಳುವ ಆಸ್ತೀಯೇನೂ ಮಾಡಿಲ್ಲ, ನನ್ನ ಎಸ್ಟೇಟ್ ಕೂಡಾ ನನ್ನ ಬ್ರದರ್ ನೇಮಲ್ಲೇ ಇದೆ. 1.5 ಕೋಟಿ ಹಣ ಖರ್ಚು ಮಾಡಿ ಟಿವಿ ಅಸೋಸಿಯೇಷನ್ ನಿರ್ಮಿಸ್ತಿದೀನಿ. 'ಆರ್ ಕೆ ಎಸ್ಟೇಟ್' ಅನ್ನೋ ಹೆಸರು ನೋಡಿ ನನ್ನ ಮೇಲೆ ದಾಳಿ ಮಾಡಿದ್ದಾರೆ ಅನ್ಸುತ್ತೆ..."


ಟಿವಿ ಸ್ಟಾರ್ ರವಿಕಿರಣ್ ಈ ರೇಡಿನಿಂದ ಒಂದಿಷ್ಟೂ ಹೆದರದೆ ತಣ್ಣಗೇ ಇದ್ದಾರೆ.


ಕಹಿ-ಸಿಹಿ ಜೋಡಿ!

ಕಿರುತೆರೆಯಲ್ಲಿ ಭರ್ಜರಿ ಸಂಪಾದನೆ ಮಾಡಿದ ಜೋಡಿ ಸಿಹಿಕಹಿ ಚಂದ್ರು ಮತ್ತು ಗೀತಾ ದಂಪತಿಗಳದ್ದು. ದುಡ್ಡಿನ ವ್ಯವಹಾರದಲ್ಲಿ ಸಿಕ್ಕಾಪಟ್ಟೆ 'ಸ್ಟ್ರಿಕ್ಟ್' ಎನಿಸಿಕೊಂಡಿರುವ ಚಂದ್ರು ಪೈಸೆಪೈಸೆಗೂ ಲೆಕ್ಕ ಇಡುವ ಮನುಷ್ಯ. ಅದೂ ಯಾವ ಮಟ್ಟಕ್ಕೆ ಅಂದರೆ, ಬೇರೆಲ್ಲರೂ ತಮ್ಮ ಧಾರಾವಾಹಿಗಳಲ್ಲಿ ನಟಿಸುವ ಕಲಾವಿದರಿಗೆ ದಿನದ ಲೆಕ್ಕದಲ್ಲಿ ಪಗಾರ ಕೊಟ್ಟರೆ, ಚಂದ್ರು ಮಾತ್ರ ಎಲ್ಲ ಕಲಾವಿದ, ತಂತ್ರಜ್ಞರನ್ನು ತಿಂಗಳ ಸಂಬಳಕ್ಕೆ ನೇಮಿಸಿಕೊಂಡಿದ್ದಾರೆ.



ಈ ಜೋಡಿ ಆದಾಯ ತೆರಿಗೆಯವರ ದಾಳಿಯನ್ನೂ ತಮ್ಮ 'ಪಾಂಡುರಂಗ ವಿಠಲ' ಧಾರಾವಾಹಿಯ ಎಪಿಸೋಡಿಗೆ ಮೆಟೀರಿಯಲ್ಲು ಮಾಡಿಕೊಂಡಿದೆ. "ನಂಗೆ ಮೊದಲೇ ಹಾರ್ಟ್ ವೀಕು. ಇದ್ದಕ್ಕಿದ್ದಂತೆ ಈ ಆಫೀಸರ್‌ಗಳು ಬಂದಿದ್ದು ನೋಡಿ ನಂಗೆ ಸಿಕ್ಕಾಪಟ್ಟೆ ಶಾಕ್ ಆಗಿಬಿಡ್ತು. ಆದರೆ ನಮ್ಮನೇಲಿ ಏನೂ ಸಿಕ್ಕದೇ ಇದ್ದಿದ್ರಿಂದ ಇನ್‌ಕಮ್ ಟ್ಯಾಕ್ಸ್ ಆಫೀಸರ್‌ಗಳೇ 'ಏನ್ ಮೇಡಂ ಮಿನಿಮಮ್ 500 ಗ್ರಾಂ ಚಿನ್ನಾನಾದ್ರೂ ಇಟ್ಕೋಬೋದು. ನಿಮ್ಮತ್ರ ಅದೂ ಇಲ್ಲವಲ್ಲಾ?' ಎಂದರು. ಅದಕ್ಕೆ ನಾನು 'ನಂಗೇನು ಚಿನ್ನದ ಹುಚ್ಚಿಲ್ಲ ಬಿಡಿ' ಎಂದು ಹೇಳಿ ಕಳಿಸಿದೆ" ಎಂದು ಸಿಹಿಕಹಿ ಗೀತಾ ಥೇಟ್ ತಮ್ಮ ಕಾಮಿಡಿ ಸೀರಿಯಲ್ಲಿನ ಡೈಲಾಗಿನಂತೆ ಮಾತಾಡಿದರು.





ಅವತ್ತು ರೇಡ್‌ನಲ್ಲಿ ಇದ್ದುದರಲ್ಲೇ ಒಂದಿಷ್ಟು ಸಂಪತ್ತು ಎಂಬುದು ಅಧಿಕಾರಿಗಳಿಗೆ ಸಿಕ್ಕಿದ್ದರೆ ಅದು ವಿತರಕ ಭಾಷಾ ಮನೆಯಲ್ಲಿ ಮಾತ್ರ. ಈಗ ಬಿಡುಗಡೆಯಾಗುತ್ತಿರುವ ದೊಡ್ಡ ಬಜೆಟ್ ಚಿತ್ರಗಳನ್ನು ವಿತರಿಸುತ್ತಿರುವುದು ಇದೇ ಭಾಷಾ. ಆದ್ದರಿಂದ ಅವರ ಮನೆಯಲ್ಲಿ ಅನಾಮತ್ತು ಹಣ ಸಿಕ್ಕಿರದೇ ಇರಲಾರದು. ಆದರೆ ಭಾಷಾ ಮಾತ್ರ ಅದರ ಬಗ್ಗೆ ಏನೂ ಮಾತಾಡುತ್ತಿಲ್ಲ... ❖

ನೀನಾ.. ನಾನಾ ಎಂದ ಲಕ್ಷ್ಮಿ



ಜೂಲಿ ಲಕ್ಷ್ಮಿ ಮತ್ತೊಮ್ಮೆ ಕಿರುತೆರೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಈ ಹಿಂದೆ ಅವರು 'ಇದು ಕಥೆಯಲ್ಲ ಜೀವನ' ಎಂಬ ಸುವರ್ಣ ಟೀವಿ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡು ನೊಂದ ಜೀವಗಳಿಗೆ ಸಾಂತ್ವನ ಹೇಳಿದ್ದರು. ಜನರ ಕಣ್ಣೀರ ಕಥೆಯನ್ನು ಕೇಳಿ ಲಕ್ಷ್ಮಿ ಕೂಡ ಕಣ್ಣೀರು ಹಾಕಿದ್ದೂ ಉಂಟು. ತಾನು ಪ್ರತಿಭಾವಂತೆ ಮಾತ್ರವಲ್ಲ, ಬುದ್ಧಿವಂತೆ ಕೂಡ ಎಂಬುದನ್ನು ತಮ್ಮ ಮಾತಿನ ಶೈಲಿಯಲ್ಲಿ ತೋರಿಸಿಕೊಟ್ಟಿದ್ದರು.

ಈ ಬಾರಿ ಲಕ್ಷ್ಮಿ ಕಣ್ಣೀರ ಕಥೆಗೆ ವಿರುದ್ಧವಾಗಿ ಪನ್ನೀರ ಕಥೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾರೆ. ಅದೇ ಸುವರ್ಣ ವಾಹಿನಿಯಲ್ಲಿ 'ನೀನಾ.. ನಾನಾ' ಎಂಬ ಕಾರ್ಯಕ್ರಮದಲ್ಲಿ ಪ್ರೇಕ್ಷಕರೊಂದಿಗೆ ಸಂವಾದ ನಡೆಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಲಾಸ್ಟ್ ಬೆಂಚ್ ಹುಡುಗರು ಒಳ್ಳೆಯವರೋ, ಫಸ್ಟ್ ಬೆಂಚ್ ಹುಡುಗರು ಒಳ್ಳೆಯವರೋ, ಲವ್ ಮ್ಯಾರೇಜ್ ಒಳ್ಳೆಯದೋ, ಅರೇಂಜ್ಡ್ ಮ್ಯಾರೇಜ್ ಒಳ್ಳೆಯದೋ? ಎಂಬಿತ್ಯಾದಿ ವಿಷಯಗಳ ಬಗ್ಗೆ ಅವರು ಎರಡು ಗುಂಪಿನ ನಡುವೆ ಸೇತುವೆಯಾಗಿ, ನಿರೂಪಕಿಯಾಗಿ ಕೆಲಸ ಮಾಡಲಿದ್ದಾರೆ.

ಅವರು ಎಲ್ಲಾ ಸಮಸ್ಯೆಗಳಿಗೆ ಉತ್ತರ ಕೊಡುವ ಗೋಜಿಗೆ ಹೋಗದಿದ್ದರೂ ತನ್ನದೇ ಆದ ಶೈಲಿ ಮತ್ತು ಸಿದ್ಧಾಂತವನ್ನು ಮಂಡಿಸಲಿದ್ದಾರೆ. ಏನೇ ಆಗಲಿ ಇಂತಹ ಪ್ರತಿಭಾವಂತ ಕಲಾವಿದೆಗೆ ತನ್ನ ಜ್ಞಾನ ಸಂಪತ್ತನ್ನು ತೋರಿಸಲು ಇದು ಒಳ್ಳೆಯ ಅವಕಾಶ. ಒಂದು ಮಾತಂತೂ ನಿಜ. ಸದ್ಯಕ್ಕೆ ಕನ್ನಡದಲ್ಲಿ ಇಂತಹ ವಿಷಯಗಳ ಬಗ್ಗೆ ಅರಳು ಹುರಿದಂತೆ ಪಟಪಟನೆ ಮಾತನಾಡುವ ಮತ್ತೊಬ್ಬ ಹಿರಿಯ ನಟಿ ನಮಗೆ ಸಿಗುವುದಿಲ್ಲ. ಅದಕ್ಕಾಗಿ ಈ ಚಂದನದ ಗೊಂಬೆಗೆ ವೆಲ್‌ಕಮ್. ❖

ಸಿನಿಮಾ ನಿಲ್ಲಿಸಲು ಹೊಸ ವರಸೆ

ಕಳೆದ ವಾರ ಬಿಡುಗಡೆಯಾದ 'ವಿನಾಯಕ ಗೆಳೆಯರ ಬಳಗ' ಮತ್ತು 'ಕೃಷ್ಣನ್ ಮ್ಯಾರೇಜ್ ಲವ್ ಸ್ಟೋರಿ' ಎರಡೂ ಚಿತ್ರಗಳು ಮೊದಲ ವಾರ ಉತ್ತಮ ಗಳಿಕೆಯನ್ನು ಕಂಡಿವೆಯಂತೆ. ಇದಕ್ಕೆ ಕಾರಣ ಚಿತ್ರ ಬಿಡುಗಡೆಯಾಗುವ ಮೊದಲೇ ಆ ಚಿತ್ರ ತಂಡಗಳು ಪ್ರೇಕ್ಷಕರಿದ್ದಲ್ಲಿಗೆ ಹೋಗಿ ಪ್ರಚಾರ ಮಾಡಿದ್ದು ಎಂದು ಗಾಂಧಿನಗರದ ಜನ ಹೇಳುತ್ತಿದ್ದಾರೆ.

ಹೌದು, 'ಕೃಷ್ಣನ ಮ್ಯಾರೇಜ್ ಲವ್ ಸ್ಟೋರಿ' ಚಿತ್ರದ ನಾಯಕ ಅಜಯ್‌ರಾವ್, ನಾಯಕಿ ನಿಧಿ ಸುಬ್ಬಯ್ಯ ಮತ್ತು ನಿರ್ದೇಶಕ ಉಮೇಶ್ ಹಾಗೂ ಇನ್ನಿತರ ಕಲಾವಿದರು ಚಿತ್ರ ಬಿಡುಗಡೆಯಾಗುವ ಮೊದಲೇ ಅಂದರೆ ಆಷಾಢಕ್ಕಿಂತ ಮೊದಲೇ ಅನೇಕ ಜಿಲ್ಲೆಗಳಿಗೆ ದಿಢೀರನೆ ನುಗ್ಗಿ ಅಲ್ಲಿ ನಡೆಯುತ್ತಿದ್ದ ಮದುವೆ ಸಮಾರಂಭಗಳಿಗೆ ಭೇಟಿ ನೀಡಿ ವಧು-ವರರನ್ನು ಹಾರೈಸಿದ್ದು ಮಾತ್ರವಲ್ಲ, ತಮ್ಮ ಚಿತ್ರದ ಪ್ರಚಾರವನ್ನು ಮಾಡಿದ್ದರಂತೆ. ಅದೇ ರೀತಿ ನಾಗೇಂದ್ರ ಪ್ರಸಾದ್ ತನ್ನ 'ವಿನಾಯಕ...' ಚಿತ್ರದ ನಾಯಕ ವಿಜಯರಾಘವೇಂದ್ರ, ನವೀನ್‌ಕೃಷ್ಣ ಮೊದಲಾದವರೊಂದಿಗೆ ಅನೇಕ ಜಿಲ್ಲೆಗಳಲ್ಲಿರುವ ಕಾಲೇಜ್ ಕ್ಯಾಂಪಸ್ಸುಗಳಿಗೆ, ಯುವಕ ಮಂಡಳಿಗಳಿಗೆ ಭೇಟಿ ನೀಡಿ ತಮ್ಮ ಚಿತ್ರದ ಬಗ್ಗೆ ಪ್ರಚಾರ ಮಾಡಿದ್ದರು.



ಇದೆಲ್ಲ ನೋಡಿದರೆ ನಿಜಕ್ಕೂ ಕನ್ನಡ ಚಿತ್ರರಂಗ ಯಾವ ದುಸ್ಥಿತಿಗೆ ತಲುಪಿದೆ ಎಂದು ನಿಮಗೆ ಅರ್ಥವಾಗಬೇಕು. ಅದೊಂದು ಕಾಲವಿತ್ತು. ಸಿನಿಮಾ ಬಿಡುಗಡೆಯಾಗುವಾಗ ತಮ್ಮ ನೆಚ್ಚಿನ ನಟರನ್ನು ನೋಡಲು ಜನಪ್ರವಾಹ ಥಿಯೇಟರ್‌ನತ್ತ ಹರಿದುಬರುತ್ತಿತ್ತು. ಈಗ ಜನಜಂಗುಳಿ ಯಿದ್ದಲ್ಲಿಗೆ ನಮ್ಮ ನಾಯಕ ನಟರು ಚಿತ್ರ ಬಿಡುಗಡೆಯಾಗುವ ಮೊದಲೇ ಹೋಗಬೇಕಾದ ದುಸ್ಥಿತಿ ಬಂದಿದೆ. ಹಿಂದೆಯೆಲ್ಲ ಚಿತ್ರವೊಂದು ಶತ ದಿನೋತ್ಸವ ಅಥವಾ ರಜತ ಮಹೋತ್ಸವ ಆಚ ರಿಸಿದಾಗ ಮಾತ್ರ ಜಿಲ್ಲಾ ಕೇಂದ್ರಗಳಿಗೆ ನಾಯಕ-ನಾಯಕಿ ಭೇಟಿ ನೀಡುತ್ತಿದ್ದರು. ಈಗ ಚಿತ್ರವೊಂದು ಶತದಿನೋತ್ಸವ ಆಚರಿಸುವುದು ಬಿಟ್ಟುಬಿಡಿ, ಚಿತ್ರ ಬಿಡುಗಡೆಯಾಗುವ ಮೊದಲೇ ನಾಯಕ-ನಾಯಕಿಯರು ಪ್ರೇಕ್ಷಕರ ಮನೆ ಬಾಗಿಲಿಗೆ ಹೋಗಿ ಅವರನ್ನು ಸಿನಿಮಾ ನೋಡಿ ಎಂದು ಅಂಗಲಾಚುತ್ತಿರುವುದು ದುಸ್ಥಿತಿಯಲ್ಲದೇ ಇನ್ನೇನು?



ಆದರೆ ನಮ್ಮ ಜನ ಹೀಗೆ ಪ್ರೇಕ್ಷಕರಿದ್ದಲ್ಲಿಗೇ ಹೋಗಿ ಸಿನಿಮಾ ನೋಡಿ ಎಂದು ಅಂಗಲಾಚುವುದನ್ನೇ ಒಂದು ದೊಡ್ಡ ಸಾಧನೆಯೆಂದು ಹೇಳುತ್ತಿದ್ದಾರೆ. ಇದನ್ನೇ ಒಂದು ದೊಡ್ಡ ಪ್ರಚಾರತಂತ್ರ ಎಂದು ಬೀಗುತ್ತಿದ್ದಾರೆ. ಅದೂ ಕೇವಲ ಒಂದು ವಾರ ಚಿತ್ರಮಂದಿರ ತುಂಬಿದ ಪ್ರದರ್ಶನ ಕಂಡಿದ್ದಕ್ಕೆ ಸಂತೋಷಪಡುತ್ತಿದ್ದಾರೆ. ಇದು ಕನ್ನಡ ಚಿತ್ರರಂಗದ ದುಸ್ಥಿತಿಯಲ್ಲದೇ ಮತ್ತೇನು?

ಇದು ಕೇವಲ ಹೊಸ ನಾಯಕ-ನಾಯಕಿಯರು ಅನುಸರಿಸುತ್ತಿರುವ ಪ್ರಚಾರತಂತ್ರವಲ್ಲ, ಮೊನ್ನೆ 'ಮೈಲಾರಿ' ಚಿತ್ರಕ್ಕಾಗಿ ಶಿವರಾಜ್‌ಕುಮಾರ್ ಕೂಡ ಇದೇ ರೀತಿ ಜಿಲ್ಲಾ ಕೇಂದ್ರಗಳಿಗೆ ಭೇಟಿ ನೀಡಿದ್ದರು. 'ಹುಡುಗರು' ಚಿತ್ರದ ಬಿಡುಗಡೆ ಸಂದರ್ಭದಲ್ಲಿ ಪುನೀತ್ ರಾಜ್‌ಕುಮಾರ್ ಕೂಡ ಕೆಲವು ಜಿಲ್ಲಾ ಕೇಂದ್ರಗಳಿಗೆ ಹೋಗಿ ಪ್ರೇಕ್ಷಕರ ಜೊತೆ ಮಾತಿನ ವಿನಿಮಯ ಮಾಡಿಕೊಂಡಿದ್ದರು. ಬಾಕ್ಸ್ ಆಫೀಸ್ ಕಿಂಗ್ ಎಂದೇ ಹೇಳಿಕೊಳ್ಳುತ್ತಿರುವ ದರ್ಶನ್ ಕೂಡ ಇದಕ್ಕೆ ಹೊರತಾಗಿಲ್ಲ, ಮೊನ್ನೆ 'ಕೂಲ್' ಚಿತ್ರ ಬಿಡುಗಡೆಯಾದಾಗ ಗೋಲ್ಡನ್ ಸ್ಟಾರ್ ಗಣೇಶ್ ಕೂಡ ಪ್ರೇಕ್ಷಕರಿದ್ದಲ್ಲಿಗೇ ಹೋಗಿ ಚಿತ್ರ ನೋಡಿ ಎಂದು ಕೇಳಿಕೊಂಡಿದ್ದರು.


ದರ್ಶನ್ ಶಂಕರ್ ನಾಗ್ ಆಗಲು ಸಾಧ್ಯವೇ?

ಇತ್ತೀಚೆಗೆ ಆಂಗ್ಲ ಪತ್ರಿಕೆಯೊಂದಕ್ಕೆ ಸಂದರ್ಶನ ನೀಡಿದ ನಟ ದರ್ಶನ್ "ನಾನು ಕೂಡ ಶಂಕರ್ ನಾಗ್ ತರಹ ಫೇಮಸ್ ಆಗಬೇಕು ಎಂಬ ಕನಸು ಕಂಡಿದ್ದೇನೆ" ಎಂದು ಶಂಕರ್ ಬಗೆಗಿನ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ.



ಆದರೆ ಶಂಕರ್ ನಾಗ್ ತರಹದ ಮತ್ತೊಬ್ಬ ವ್ಯಕ್ತಿ ಚಿತ್ರರಂಗದಲ್ಲಿ ಹುಟ್ಟಿಬರಲು ಸಾಧ್ಯವಿಲ್ಲ ಎಂಬುದು ಗಾಂಧಿನಗರದ ಜನರಿಗೆ ಮಾತ್ರವಲ್ಲ, ಇಡೀ ಕರ್ನಾಟಕದ ಜನತೆಗೆ ತಿಳಿದಿರುವ ವಿಷಯ. ಆದರೂ ದರ್ಶನ್ ಈ ರೀತಿ ಹೇಳಿಕೆ ನೀಡಿರುವುದು ಆತನ 'ಸಾರಥಿ' ಚಿತ್ರದ ಪ್ರಚಾರಕ್ಕಾಗಿ ಮಾತ್ರ. 'ಸಾರಥಿ' ಚಿತ್ರದಲ್ಲಿ ದರ್ಶನ್ ಆಟೋ ಡ್ರೈವರ್ ಆಗಿ ಕಾಣಿಸಿಕೊಂಡಿದ್ದಾರೆ. ಈ ಕಾರಣಕ್ಕಾಗಿಯೇ ಮೊನ್ನೆ ಈ ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭಕ್ಕೆ ದರ್ಶನ್ ಸ್ವತಃ ಆಟೋ ಓಡಿಸಿಕೊಂಡು ಬಂದರಲ್ಲದೆ ಅಂದು ಸಾವಿರಾರು ಆಟೋ ಡ್ರೈವರ್‌ಗಳನ್ನು ಒಟ್ಟುಸೇರಿಸಿದ್ದರು. ಹಾಗೆ ನೋಡಿದರೆ ಶಂಕರ್ ನಾಗ್ ಯಾವತ್ತೂ ಈ ರೀತಿಯ ಆಟೋ ಡ್ರೈವರ್‌ಗಳ ಮೆರವಣಿಗೆ ಮಾಡಿದವರೇ ಅಲ್ಲ, ಅವರಿಗೆ ತಾರಾಮೌಲ್ಯ ತಂದುಕೊಟ್ಟ 'ಆಟೋರಾಜ' ಚಿತ್ರ ಬಿಡುಗಡೆ ಸಂದರ್ಭದಲ್ಲೂ ಶಂಕರ್ ನಾಗ್ ಈ ತರಹದ ಗಿಮಿಕ್‌ಗಳನ್ನು ಮಾಡಿದವರಲ್ಲ, ಶಂಕರ್ ನಾಗ್‌ರನ್ನು ಜನ ಪ್ರೀತಿಸಿದ್ದು ಅವರ ಸಿಂಪ್ಲಿಸಿಟಿಗೆ, ಪ್ರತಿಭೆಗೆ, ಕ್ರಿಯಾಶೀಲತೆಗೆ, ಸಾಹಸ ಮನೋಭಾವಕ್ಕೆ ಮತ್ತು ಬಡವರ ಬಗ್ಗೆ ತೋರಿಸುತ್ತಿದ್ದ ಸಹಜ ಕಾಳಜಿಗೆ. ಈ ಗುಣಗಳನ್ನು ದರ್ಶನ್ ಅಳವಡಿಸಿಕೊಂಡರೆ ಮಾತ್ರ ಅವರೂ ಶಂಕರ್ ನಾಗ್ ತರಹ ಪಾಪ್ಯುಲರ್ ಆಗಬಹುದೇ ವಿನಃ ಒಂದು ಚಿತ್ರದಲ್ಲಿ ಆಟೋ ಡ್ರೈವರ್ ಆಗಿ ನಟಿಸಿದ ಮಾತ್ರಕ್ಕೆ ಜನಪ್ರಿಯರಾಗುವುದಿಲ್ಲ, ಇದನ್ನು ದರ್ಶನ್ ಮನಗಾಣಬೇಕು.

ನಿಖಿತಾ ನಿರ್ಮಾಪಕಿಯಂತೆ...



ನಿನ್ನೆ ಮೊನ್ನೆ ತಾನೇ ಸ್ಯಾಂಡಲ್‌ವುಡ್‌ಗೆ ಎಂಟ್ರಿ ನೀಡಿದ, ಬರುತ್ತಿದ್ದಂತೆಯೇ ಸಾಕಷ್ಟು ಸುದ್ದಿ ಮಾಡಿದ ನಿಖಿತಾ ಎಂಬ ನಿಗಿನಿಗಿ ಹುಡುಗಿ ಈಗ ಸಿನಿಮಾ ನಿರ್ಮಾಣಕ್ಕಿಳಿದಿದ್ದಾಳೆ.


ಇಷ್ಟು ದಿನ ಸೌಂದರ್ಯ, ತಾರಾ, ಜಯಮಾಲಾ, ಪವಿತ್ರಾ ಲೋಕೇಶ್ ತರಹದ ನಟಿಯರು ಅವಾರ್ಡ್ ಪಡೆಯೋಕೆ ಒಂದೊಂದು ಸಿನಿಮಾ ನಿರ್ಮಿಸಿ ಅದರಲ್ಲಿ ನಟಿಸಿದ್ದರು. ಆದರೆ ಇತ್ತೀಚೆಗೆ ರಾಧಿಕಾ ಎಂಬ 'ನಿವೃತ್ತ' ನಟಿ, ಬೇರೆ ಹಾದಿ ಹಿಡಿದು ಆದಿತ್ಯ ನಟಿಸಿದ್ದ 'ಈಶ್ವರ್' ಸಿನಿಮಾವನ್ನು ಶುರು ಮಾಡಿದಳು. ಸದ್ಯದಲ್ಲೇ 'ಲಕ್ಕಿ' ಎನ್ನುವ ಹೊಸದೊಂದು ಚಿತ್ರವನ್ನೂ ಪ್ರಾರಂಭಿಸಲಿದ್ದಾಳೆ. ಹಾಗೆಯೇ ಮತ್ತೋರ್ವ 'ರಿಟೈರ್ಡ್' ನಟಿ ರಕ್ಷಿತಾ ಕೂಡಾ 'ಜೋಗಯ್ಯ'ನನ್ನು ನಿರ್ಮಿಸಿದ್ದಾಳೆ. ಈಗಲೂ ಚಾಲ್ತಿಯಲ್ಲಿರುವ ರಮ್ಯಾ ಮತ್ತು ಪೂಜಾ ಗಾಂಧಿ ತಾವು ನಟಿಸಿರುವ ಸಿನಿಮಾಗಳಿಗೆ ಫೈನಾನ್ಸ್ ಮಾಡುವ ಸೈಡ್ ಬಿಜಿನೆಸ್ ಹೊಂದಿದ್ದಾರೆ.

ಇಷ್ಟಿದ್ದರೂ ನಿಖಿತಾ ಎಂಬ ಹೊಸ ನಟಿ ಇಷ್ಟು ಬೇಗ ಸಿನಿಮಾ ನಿರ್ಮಾಣಕ್ಕೆ ಮುಂದಾಗಿರುವುದು ಎಲ್ಲರ ಗಮನ ಸೆಳೆದಿದೆ.

ಈಕೆಯ ತಂದೆ ಬ್ರಿಗೇಡಿಯರ್ ಆನಂದ್ ಇಂಡಿಯನ್ ಆರ್ಮಿಯಲ್ಲಿದ್ದವರು. ಮೂಲತಃ ಶ್ರೀಮಂತ ಮನೆತನದ ಈ ಪಂಜಾಬಿ ಹುಡುಗಿಗೆ ಸಿಕ್ಕಾಪಟ್ಟೆ ಸಿನಿಮಾ ಹುಚ್ಚು, ಹೀರೋಯಿನ್ ಆಗಬೇಕೆಂದು ಬಯಸಿದ್ದ ನಿಖಿತಾಗೆ ಆರಂಭದಲ್ಲಿ ತಮಿಳು ಮತ್ತು ತೆಲುಗು ಸಿನಿಮಾಗಳಲ್ಲಿ ಸಿಕ್ಕಿದ್ದು ಬರೀ ಐಟಂ ನಟಿ ಪಾತ್ರಗಳು. ಎಲ್ಲೋ ಕೆಲವೊಂದು ಲೋ ಬಜೆಟ್ ಸಿನಿಮಾಗಳಲ್ಲಿ ಮಾತ್ರ ಆಕೆಗೆ ಹೀರೋಯಿನ್ ಪಾತ್ರಗಳು ಸಿಕ್ಕವು.

ಹೀಗೆ ನಿಖಿತಾ ಚಿತ್ರರಂಗದಲ್ಲಿ ಕಾಲೂರಲು ಯತ್ನಿಸುತ್ತಿರುವಾಗಲೇ ನಿರ್ಮಾಪಕ ಕೊಬ್ರಿ ಮಂಜು ಆಕೆಗೆ 'ರಾಜಕುಮಾರಿ' ಚಿತ್ರದಲ್ಲಿ ಹೀರೋಯಿನ್ ಪಾತ್ರ ನೀಡಿ ಕನ್ನಡಕ್ಕೆ ಕರೆತಂದರು. ಆನಂತರ ಉಪೇಂದ್ರನ 'ದುಬೈ ಬಾಬು', ಪುನೀತ್ ರಾಜ್‌ಕುಮಾರ್‌ನ 'ವಂಶಿ', ದರ್ಶನ್‌ನ 'ಯೋಧ' ಚಿತ್ರಗಳಲ್ಲಿ ನಟಿಸಿದಳು. ಸ್ವಲ್ಪ ಸಮಯದಲ್ಲೇ ಛಾಲೆಂಜಿಂಗ್ ಸ್ಟಾರ್ ದರ್ಶನ್‌ನ ತೆಕ್ಕೆಗೆ ನಿಖಿತಾ ಬಿದ್ದಿದ್ದೇ ಬಂತು. ಸ್ಯಾಂಡಲ್‌ವುಡ್‌ನಲ್ಲಿ ಈಕೆಯ ನಸೀಬೇ ಬದಲಾಗಿ ಹೋಯಿತು. ದರ್ಶನ್‌ನ 'ಯೋಧ', 'ಪ್ರಿನ್ಸ್' ಮತ್ತೀಗ 'ಸಂಗೊಳ್ಳಿ ರಾಯಣ್ಣ' ಚಿತ್ರಗಳಲ್ಲಿ ಈಕೆ ದರ್ಶನ್‌ನ ಜೊತೆಗಾತಿ!

ನಿರ್ದೇಶಕ ಓಂ ಪ್ರಕಾಶ್ ಈಕೆಯನ್ನು 'ಎಕೆ 56' ಚಿತ್ರಕ್ಕೆ ಆಯ್ಕೆಮಾಡಿ ಸಿನಿಮಾ ಶೂಟಿಂಗ್ ಕೂಡಾ ಶುರುವಾದ ಮೇಲೆ "ಈಕೆ ಸರಿಯಾಗಿ ಅಡ್ಜಸ್ಟ್ ಆಗುತ್ತಿಲ್ಲ, ಶಾರ್ಟ್ ಡ್ರೆಸ್ ಹಾಕಲು ನಖರಾ ಮಾಡ್ತಾಳೆ" ಎಂದು ಆರೋಪಿಸಿ ಈಕೆಯನ್ನು ಚಿತ್ರದಿಂದ ಹೊರದಬ್ಬಿದರು. ಆಗ ನಿಖಿತಾ ಕೂಡಾ "ಓಂ ಪ್ರಕಾಶ್ ನನಗೆ ದೈಹಿಕ ಕಿರುಕುಳ ಕೊಟ್ಟಿದ್ದಾರೆ" ಎಂದು ಆರೋಪಿಸಿ ರಂಪಾಟ ಮಾಡಿದಳು.



ಆದರೆ ನಿಜಕ್ಕೂ ಇವರಿಬ್ಬರ ನಡುವೆ 'ಅಡ್ಜಸ್ಟ್' ಆಗದ ವಿಚಾರ ಯಾವುದಿತ್ತೋ ಗೊತ್ತಿಲ್ಲ, ಇಷ್ಟೆಲ್ಲಾ ರಗಳೆ ಮಾಡಿಕೊಂಡ ಇವರಿಬ್ಬರು ಮತ್ತೆ 'ಪ್ರಿನ್ಸ್' ಚಿತ್ರದಲ್ಲಿ 'ಅಡ್ಜಸ್ಟ್' ಆಗಿದ್ದು ವಿಚಿತ್ರವಾಗಿತ್ತು. ಅದಕ್ಕಿಂತ ವಿಚಿತ್ರ ಯಾವುದೆಂದರೆ ಈಗ ಅದೇ ಓಂ ಪ್ರಕಾಶ್ ನಿರ್ದೇಶಿಸಲಿರುವ, ದುನಿಯಾ ವಿಜಿ ಮತ್ತು ಆದಿತ್ಯಾ ನಟಿಸಲಿರುವ 'ಲೀಡರ್' ಚಿತ್ರವನ್ನು ನಿರ್ಮಿಸಲು ನಿಖಿತಾ ಹೊರಟಿರುವುದು!

ಆದರೆ ನಿಜಕ್ಕೂ ಈಕೆ ಈ ಸಿನಿಮಾಕ್ಕೆ ದುಡ್ಡು ಹಾಕುತ್ತಿದ್ದಾಳಾ? ಇಬ್ಬಿಬ್ಬರು ಹೀರೋಗಳನ್ನಿಟ್ಟುಕೊಂಡು ನಿರ್ಮಿಸುವಷ್ಟು ಆರ್ಥಿಕ ತಾಕತ್ತು ಎಲ್ಲಿಂದ ಬಂತು ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ.

ಆದರೆ ಅಸಲಿ ವಿಚಾರ ಏನೆಂದರೆ ಈ ಸಿನಿಮಾ ನಿರ್ಮಾಣಕ್ಕೆ ನಿಖಿತಾ ತನ್ನ ಪರ್ಸಿನಿಂದ ಒಂದು ರೂಪಾಯಿಯನ್ನೂ ವೆಚ್ಚ ಮಾಡುತ್ತಿಲ್ಲ! ಓಂ ಪ್ರಕಾಶ್ ಮತ್ತು ನಿಖಿತಾ ಎಂಬ ಈ ಮೇಡ್ ಫಾರ್ ಈಚ್ ಅದರ್ ಜೋಡಿ ರೂಪಿಸಿರುವ ಮಾಸ್ಟರ್ ಪ್ಲಾನ್ ಇದು. ದುನಿಯಾ ವಿಜಿ, ಆದಿತ್ಯ ನಟಿಸುತ್ತಿರುವ ಚಿತ್ರವನ್ನು ನಿಖಿತಾ ನಿರ್ಮಿಸುತ್ತಾಳೆ ಎಂದರೆ ಟೀವಿ ಚಾನೆಲ್‌ಗಳು ಅಡ್ವಾನ್ಸ್ ಆಗಿ ಹಣ ನೀಡುತ್ತವೆ. ಅಷ್ಟೇ ಅಲ್ಲ, ಈ ಸಿನಿಮಾದಲ್ಲಿ ನಿಖಿತಾಳನ್ನು ಒಂದಿಷ್ಟು 'ತೋರಿಸಿ'ದರೆ ಸಾಕು ಸುಲಭವಾಗಿ ಫೈನಾನ್ಸ್ ಎತ್ತಬಹುದು ಎನ್ನುವುದು ಓಂ ಪ್ರಕಾಶ್ ಐಡಿಯಾ.

ಶೂನ್ಯ ಬಂಡವಾಳದಲ್ಲಿ ಫಸಲು ತೆಗೆಯಲು ಹೊರಟಿರುವ ಓಂ-ನಿಖಿತಾ ಇಬ್ಬರೂ ಇನ್ನೂ ಏನೇನು ವ್ಯಾಪಾರ ಕುದುರಿಸುತ್ತಾರೋ ನೋಡಬೇಕು....

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th ...